Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–1 ಜನವರಿ 2–8, 2023 ಪುಟ 16 ರೂ. 10/–
Volume-17 Issue-1 January 2-8, 2023 Pages:16 Price: 10/-



ವಿದ್ಯುತ್ ಬಳಕೆಗೂ ಪ್ರೀಪೇಯ್ಡ್ ಮೀಟರ್ ಶಾಕ್!

ಬೆಳಗಾವಿ ಅಧಿವೇಶನ:



ಅದೇ ಭಾಷಣ ಅದೇ ಭರವಸೆ ಮತ್ತದೆಯೇ ನಿರಾಸೆ

ಸಾಹಿತ್ಯ ಸಮ್ಮೇಳನ: ಸತ್ವಹೀನತೆಯಿಂದ ತತ್ವಹೀನತೆಯೆಡೆಗೆ

ಹೊಸ ವರುಷ : ಜನತೆಯ ನವಕರ್ನಾಟಕ ಕಟ್ಟುವ ಸಂಕಲ್ಪ




ಕಾರ್ಮಿಕ ಸಮ್ಮೇಳನಕ್ಕೆ ಅಪೂರ್ವ ಸ್ಪಂದನ

ಮಿಥ್ಯೆ 1 –‘ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ’!

ಇದುವರೆಗೆ... ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ. ಸಾವರ್ಕರ್ ಅಸಾಧಾರಣ ಧೈರ್ಯ ಪ್ರದರ್ಶಿಸಿದರು. ಬ್ರಿಟಿಷ್ ಆಳರಸರೊಂದಿಗೆ ಅವರು ಎಂದೂ ಶಾಮೀಲಾಗಲಿಲ್ಲ ಎನ್ನುವ ಹಿಂದುತ್ವ ಪ್ರಚಾರಕರ ಮಿಥ್ಯೆಯನ್ನು ಪರಿಶೀಲಿಸುತ್ತ, ಕಾಲಾಪಾನಿ ಅಥವಾ ಕರಿನೀರು ಎಂದು ಕರೆಯಲ್ಪಡುವ ಅಂಡಮಾನಿನ ಭಯಂಕರ ಸೆಲ್ಯುಲರ್ ಜೈಲಿನಲ್ಲಿ, ಗೂಡಿನಂತಿರುವ ಸಣ್ಣ ಕೋಣೆಯಲ್ಲಿ, ಭೀಕರ ಕ್ರೌರ್ಯಗಳಿಗೆ ಒಳಗಾದವರು ಸಾವರ್ಕರ್ ಒಬ್ಬರೇ ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ ಎನ್ನುವ ಲೇಖಕರು, ಸೆಲ್ಯುಲರ್ ಜೈಲು ಅಂದರೆ ಕೇವಲ ಸಾವರ್ಕರ್ ಕತೆ ಅಲ್ಲ ಎನ್ನುತ್ತಾರೆ. ಸ್ವತಃ ಸಾವರ್ಕರ್ ತಮ್ಮ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ, ಭಾರತವು ಹಿಂದೂ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯ ಕಣವಾಗಿತ್ತು ಎಂಬ ವಾದವನ್ನಾಗಲೀ ಅಥವಾ ಹಿಂದೂಗಳು ಮಾತ್ರ ಭಾರತದ ಸಹಜ ದೇಶಪ್ರೇಮಿಗಳು ಎಂಬ ನಂಬಿಕೆಯನ್ನಾಗಲೀ ಹೊಂದಿರಲಿಲ್ಲ. ಆದರೆ ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅವರು ಅಲ್ಲಿ ಪಡಬೇಕಾದ ಘೋರಯಾತನೆಯಿಂದ ಸಂಪೂರ್ಣವಾಗಿ ಕುಗ್ಗಿದ ಅವರು, ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿ ಈಗ ಉಳಿಯಲಿಲ್ಲ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿನ ಹಿಂದೂ–ಮುಸ್ಲಿಂ ಐಕ್ಯತೆಯಿಂದ ಆತಂಕಿತರಾಗಿದ್ದ ಬ್ರಿಟಿಷ್ ದೊರೆಗಳಿಗೆ ಕ್ಷಮಾಯಾಚನೆಯ ಅರ್ಜಿಯೊಂದಿಗೆ ತಮ್ಮ ರಾಜಕೀಯ ಬದುಕಿನ ಎರಡನೇ ಘಟ್ಟ ಆರಂಭಿಸಿದ ಸಾವರ್ಕರ್ ರಂತವರ ಸಹಾಯ ಬೇಕಿತ್ತು, ಅದಕ್ಕಾಗಿ ಅವರನ್ನು ಬಿಡುಗಡೆ ಮಾಡಿದರು ಎನ್ನುವುದನ್ನು ಯಾರೂ ಅರ್ಥಮಾಡಿಕೊಳ್ಳಬಲ್ಲರು. ಸಾವರ್ಕರ್ ಬ್ರಿಟೀಷರ ಆವಶ್ಯಕತೆಯನ್ನು ಈಡೇರಿಸಿದರು. ಸುಭಾಶ್‌ಚಂದ್ರ ಬೋಸ್‌ರಂತಹ ನಾಯಕರುಗಳು ಸಶಸ್ತ್ರ ಹೋರಾಟಗಳ ಮೂಲಕ ಭಾರತದಿಂದ ಬ್ರಿಟಿಷ್ ಆಳ್ವಿಕೆಯನ್ನು ಕಿತ್ತೊಗೆಯಬೇಕೆಂಬ ತಂತ್ರಗಳನ್ನು ಹೂಡುತ್ತಿದ್ದಾಗ, ಅವರು ರಚಿಸಿದ್ದ ಆಝಾದ್ ಹಿಂದ್ ಫೌಜ್ (ಐಎನ್‌ಎ)ನ ಸಾವಿರಾರು ಧೀರೋದಾತ್ತ ಸೈನಿಕರನ್ನು ಕೊಂದು ಹಾಕುತ್ತಿದ್ದ ಬ್ರಿಟಿಷ್ ಸರ್ಕಾರವು ತಮ್ಮ ಅಧಿಕೃತ ಯುದ್ಧ ಸಮಿತಿಗಳಲ್ಲಿ ಹಿಂದೂ ಮಹಾಸಭಾದ ಮುಖಂಡರುಗಳನ್ನು ಸೇರಿಸಿಕೊಂಡಿತ್ತು. ಸಾವರ್ಕರ್ ಮತ್ತು ಹಿಂದೂ ಮಹಾಸಭಾ ಎಷ್ಟು ಪ್ರಬಲವಾಗಿ ಬ್ರಿಟಿಷರ ಬಾಲಬಡುಕರಾಗಿದ್ದರು ಎನ್ನುವುದನ್ನು ಹಿಂದೂ ಮಹಾಸಭಾವು ಸ್ವಾತಂತ್ರ್ಯ ಪೂರ್ವದಲ್ಲಿ ಹೊರತಂದ ಪುಸ್ತಕವನ್ನು ಇಣುಕಿ ನೋಡಿದರೆ ತಿಳಿಯುತ್ತದೆ. ಮುಂದೆ ಓದಿ...

‘ವೀರ’ ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ ‘ಸಾವರ್ಕರ್ ಅನ್‌ಮಾಸ್ಕ್‌ಡ’ ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–10

ಡಾ.ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಒಡೆದು ಆಳುವ ಯೋಜನೆಯಲ್ಲಿ ಸಹಕರಿಸಿದ್ದಕ್ಕೆ ಮಾಸಾಶನ!

ಎರಡನೇ ಮಹಾಯುದ್ಧದ ಅವಧಿಯು, ಕ್ರಾಂತಿಕಾರಿಗಳ ವಿವಿಧ ಗುಂಪುಗಳು ಮತ್ತು ಸುಭಾಶ್ ಚಂದ್ರ ಬೋಸ್ ಅವರು ಯುಎಸ್‌ಎಸ್‌ಆರ್ (ಯೂನಿಯನ್ ಆಫ್ ಸೋವಿಯೆತ್ ಸೋಶಿಯಲಿಸ್ಟ್ ರಿಪಬ್ಲಿಕ್) ನಂತಹ ದೇಶಗಳಿಂದ ಸಹಾಯ ಬಯಸಿ ಪ್ರಯತ್ನ ಮಾಡುತ್ತಿದ್ದಾಗಿನ ಕಾಲವಾಗಿತ್ತು. ಆದರೆ ಅಂತಹ ಅಪಾಯಗಳ ಬಗ್ಗೆ ಎಚ್ಚರವಹಿಸಬೇಕೆಂದು ಸಾವರ್ಕರ್ ಅವರು ಬ್ರಿಟಿಷರಿಗೆ ದೊರೆಗಳಿಗೆ ಸಲಹೆ ನೀಡುತ್ತಿದ್ದರು ಎನ್ನುವುದನ್ನು ನಾವು ಕಾಣುತ್ತೇವೆ. ಇಂತಹ ಸಾಹಸದಲ್ಲಿ ಸಾವರ್ಕರ್ ಯಾವುದೇ ಮುಜುಗರವಿಲ್ಲದೇ ಬ್ರಿಟಿಷರಿಗೆ ಸಂಪೂರ್ಣ ಬೆಂಬಲ ನೀಡಿದ್ದನ್ನು ಕೂಡ ನಾವು ನೋಡುತ್ತೇವೆ. ಬ್ರಿಟಿಷರ ಆಳ್ವಿಕೆಯನ್ನು ಕಿತ್ತೊಗೆಯುವ ಬದಲು ಮುಸ್ಲಿಮರನ್ನು ಹೊರಗಟ್ಟುವುದೇ ಅವರ ಮುಖ್ಯ ಉದ್ದೇಶವಾಗಿದ್ದಂತೆ ತೋರುತ್ತಿತ್ತು. ಅವರ ಮುಸ್ಲಿಂ–ವಿರೋಧಿ ಭಾಷೆಯು ಹೇಗೆ ವಾಸ್ತವಾಂಶಗಳನ್ನು ತಿರುಚುತ್ತದೆ ಎನ್ನುವುದನ್ನು ಅವರ ಈ ಮಾತುಗಳಲ್ಲಿ ಸ್ಪಷ್ಟವಾಗಿ ನೋಡಬಹುದು:

ಈ ಯುದ್ಧದಲ್ಲಿ ಇಂಗ್ಲೆಂಡ್ ವಿರುದ್ಧ ರಷ್ಯಾದ ಸಂಭಾವ್ಯ ಪ್ರವೇಶವು ಆಫ್ಘಾನಿಸ್ತಾನದ ಮೂಲಕ ದಂಡೆತ್ತಿ ಬರಬಹುದಾದ ಎಲ್ಲಾ ಗಂಭೀರ ಅಪಾಯಗಳು ಭಾರತಕ್ಕೆ ಬೆದರಿಕೆ ಒಡ್ಡಬಹುದು(!). 1914ರ ಮಹಾ ಯುದ್ಧದ ಸಮಯದಲ್ಲಿ ಭಾರತದಲ್ಲಿ ನಡೆದ ಖಿಲಾಫತ್ ಚಳುವಳಿಯ ಸಂದರ್ಭದಲ್ಲಿ ಬಹು ದೊಡ್ಡ ಸಂಖ್ಯೆಯ ಮುಸ್ಲಿಮರ ನಂಬಿಕೆ ದ್ರೋಹದ ನಡವಳಿಕೆಯು ಭವಿಷ್ಯದಲ್ಲಿ ಯಾವುದೇ ಪರರಾಷ್ಟ್ರದ ಪ್ರಾಬಲ್ಯವು ವಾಯುವ್ಯ ಗಡಿಯಲ್ಲಿ ಭಾರತದ ಮೇಲೆ ದಾಳಿ ಮಾಡಬಹುದಾದ ಸಂಭವವಿದೆ ಎಂಬ ಎಂದಿಗೂ ಮರೆಯಲಾಗದ ಪಾಠವನ್ನು ನಮಗೆ ಕಲಿಸಿದೆ. ಈಗ ಅದು ಖಂಡಿತವಾಗಿ ಮರುಕಳಿಸಬಹುದು. ಪಂಜಾಬ್, ಸಿಂಧ್ ಮುಂತಾದ ಪ್ರದೇಶಗಳುದ್ದಕ್ಕೂ ಬುಡಕಟ್ಟು ಜನರು ಮತ್ತು ಮುಸ್ಲಿಮರು ಹಿಂದೂಗಳಿಗೆ ವಿಶ್ವಾಸದ್ರೋಹ ಬಗೆಯುವ ಸಾಧ್ಯತೆ ಇದೆ – ಬಲೂಚಿಸ್ತಾನದಿಂದ – ಕಾಶ್ಮೀರ – ದೆಹಲಿಯನ್ನೂ ಒಳಗೊಂಡಂತೆ ಒಂದು ಸ್ವತಂತ್ರ ಮುಸ್ಲಿಂ ರಾಜ್ಯ ಅಥವಾ ಒಕ್ಕೂಟವನ್ನು ರಚಿಸುವ ಅಖಿಲ ಮುಸ್ಲಿಂ ಜನಾಂಗದ ಸಂಚಿನ ಆಶಯಕ್ಕೆ ಅನುಗುಣವಾಗಿ ಒಂದು ಸಮುದಾಯವಾಗಿ ಎದ್ದು ಬರಬಹುದು. ಭಾರತದ ಹಲವಾರು ಜವಾಬ್ದಾರಿಯುತ ಮುಸ್ಲಿಂ ಸಂಘಟನೆಗಳು ತಮ್ಮ ಬಹಿರಂಗ ಅಧಿವೇಶನಗಳಲ್ಲಿ ಅಂಗೀಕರಿಸಿದ ನಿರ್ಣಯಗಳು ಹೊರಗೆಡಹಿದಂತೆ, ವಾಸವಾಗಿರುವ ಭೂಪ್ರದೇಶದ ಆಚೆಗೆ ಅವರಿಗಿರುವ ಸಹಾನುಭೂತಿಯ ಧೋರಣೆಯಿಂದಾಗಿ ಹಿಂದೂಗಳು ಎದುರಿಸುತ್ತಿರುವ ಈ ಗಂಭೀರ ಅಪಾಯವನ್ನು ಹಗುರವಾಗಿ ಪರಿಗಣಿಸುವುದು ಆತ್ಮಹತ್ಯೆಯಲ್ಲದೇ ಮತ್ತೇನೂ ಅಲ್ಲ ಮತ್ತು ಮಂಕುಬುದ್ಧಿಯ ನಡೆಯಾಗುತ್ತದೆ. ಇಂತಹ ತುರ್ತುಪರಿಸ್ಥಿತಿಯ ಕಾಲದಲ್ಲಿ ಈ ರಾಷ್ಟ್ರೀಯ ಅನಾಹುತವನ್ನು ತಪ್ಪಿಸುವ ಸಲುವಾಗಿ ಸಮಾನ ಉದ್ದೇಶದಿಂದ ಬ್ರಿಟಿಷರೊಂದಿಗೆ ಮೈತ್ರಿ ಮಾಡಿಕೊಳ್ಳಲೇಬೇಕು.

ನಾನಾ ವಿಷಯಗಳ ಬಗ್ಗೆ ಹಿಂದೂ ಮಹಾಸಭಾದ ವಿಶ್ವಾಸಾರ್ಹವಾದ ಅಧಿಕೃತ ನಿಲುವನ್ನು ಒಳಗೊಂಡಿರುವ ಭಿಡೆಯವರ ಪುಸ್ತಕವು ಒಂದು ಅಂಶವನ್ನು (ಬ್ರಿಟಿಷ್ ಮಿಲಿಟರಿ ನೇಮಕಾತಿ ಸಂಸ್ಥೆಯು ಸಾವರ್ಕರ್ ಮತ್ತು ಹಿಂದೂ ಮಹಾಸಭಾದೊಂದಿಗೆ ನೇರ ಸಂಪರ್ಕ ಹೊಂದಿತ್ತು ಎಂಬ ಸತ್ಯವನ್ನು) ಪದೇ ಪದೇ ವಿಶದಪಡಿಸಿದೆ. ಈ ಸ್ವಾಗತಾರ್ಹ ಬೆಳವಣಿಗೆಯನ್ನು ಸಾವರ್ಕರ್ ಅವರು ಹಿಂದೂ ಮಹಾಸಭಾ ಕಾರ್ಯಕರ್ತರಿಗೆ ಹೀಗೆ ತಿಳಿಸಿದರು:

ನೇಮಕಾತಿ ಕಮಿಶನರುಗಳು ಮತ್ತು ಅಧಿಕಾರಿಗಳು ಉದಾಹರಣೆಗೆ ಬಾಂಬೇ ಪ್ರೆಸಿಡೆನ್ಸಿಯವರು ಹಿಂದೂ ಮಹಾಸಭಾ ಆರಂಭಿಸಿರುವ ಹಿಂದೂ ಮಿಲಿಟರೀಕರಣ ಮಂಡಳಿಯೊಂದಿಗೆ ವಾಸ್ತವವಾಗಿ ಸಂಪರ್ಕ ಸಾಧಿಸಿದ್ದಾರೆ ಮತ್ತು ಹಿಂದೂ ಅಭ್ಯರ್ಥಿಗಳು ನೌಕಾದಳವನ್ನು ಪ್ರವೇಶಿಸಲು, ಅಧಿಕಾರ ಪತ್ರಗಳನ್ನು ಪಡೆಯಲು ಮತ್ತು ವಾಯು, ನೌಕಾ ಹಾಗೂ ಭೂ ಸೇನೆಗಳಲ್ಲಿ ತರಬೇತಿ ಹೊಂದಲು ಸಾಧ್ಯವಾಗುವಂತೆ ಬಹುಮಟ್ಟಿಗೆ ಹೇಗಾದರೂ ಮಾಡಿ ಸಹಾಯ ಮಾಡಲು ಯತ್ನಿಸುತ್ತಿದ್ದಾರೆ. ಬೆವಿನ್ ಯೋಜನೆಯು ಸರಿಯಾಗಿ ಕೆಲಸ ಮಾಡುತ್ತಿದೆ ಮತ್ತು ಹಿಂದೂ ಮೆಕ್ಯಾನಿಕ್‌ಗಳು ಅದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿಕೊಂಡಿದ್ದಾರೆ.

ಸಿಂಧ್‌ನ (ಈಗ ಪಾಕಿಸ್ತಾನದಲ್ಲಿದೆ) ಹಿಂದೂಗಳು ಬ್ರಿಟಿಷರ ಸಶಸ್ತ್ರ ಸೇನೆಗೆ ಸೇರಿಕೊಳ್ಳಬೇಕೆಂದು ಸಾವರ್ಕರ್ ಅವರ ನಿಖರವಾದ ಸಲಹೆಯಾಗಿತ್ತು. ಈ ವಿಷಯದಲ್ಲಿ ತಾನು ವೈಸ್‌ರಾಯರೊಂದಿಗೆ ಸಂಪರ್ಕದಲ್ಲಿದ್ದೇನೆಂಬ ಮಾಹಿತಿಯನ್ನೂ ಅವರೊಂದಿಗೆ ಹಂಚಿಕೊಂಡಿದ್ದರು. ಈ ಎಲ್ಲಾ ವಿವರಗಳೊಂದಿಗೆ ಅವರೂ ಹೀಗೆ ಬರೆದರು:

ಸಿಂಧ್‌ನಲ್ಲಿರುವ ಹಿಂದೂಗಳು ಪ್ರಾಯೋಗಿಕವಾಗಿ ಎಷ್ಟು ಸಾಧ್ಯವೋ ಅಷ್ಟು ಸಂಖ್ಯೆಯಲ್ಲಿ ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಯನ್ನು ಪ್ರವೇಶಿಸಲಿ. ಈ ವಿಷಯಕ್ಕೆ ಸಂಬಂಧಿಸಿ ನಿಖರವಾದ ನಿಯಮಗಳು ಅಥವಾ ವಿಳಾಸಗಳ ಬಗ್ಗೆ ಯಾರಾದರೂ ಬಯಸಿದರೆ ಅವರು ಈ ಕೆಳಗಿನವರಿಗೆ ಬರೆಯಲಿ: ಡಾ. ಎನ್ ಡಿ ಸಾವರ್ಕರ್, ಹಿಂದೂ ಮಿಲಿಟರೀಕರಣ ಮಂಡಲಿ, ದಾದರ್ ಹಿಂದೂಸಭಾ ಕಛೇರಿ, ಲೇಡಿಜೇಮ್‌ಶೇಟ್ಜಿ ರಸ್ತೆ, ದಾದರ್, ಬಾಂಬೆ 14. ಅಥವಾ ಶ್ರೀಯುತ ಶಿವರಾಮ್ ಪಂತ್ ದಾಮ್ಲೆ, ಕಾರ್ಯದರ್ಶಿ ಮಹಾರಾಷ್ಟ್ರ ಮಂಡಲ್, ಪೂನಾ 2. ಈ ಎರಡೂ ಕೇಂದ್ರಗಳು ಈಗಾಗಲೇ ಹಲವಾರು ದೇಶಪ್ರೇಮಿ ಹಿಂದೂ ಯುವಜನರ ಪ್ರಕರಣಗಳಲ್ಲಿ ನೌಕಾಸೇನೆ, ವಾಯು ಸೇನೆ ಮತ್ತು ಭೂಸೇನೆಗಳಲ್ಲಿ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾಗಿವೆ ಮತ್ತು ಸಮರ್ಥ ಹಾಗೂ ಪ್ರತಿಭಾವಂತ ಹಿಂದೂಗಳು ವೈಸ್‌ರೀಗಲ್ ಮತ್ತು ಕಿಂಗ್ಸ್ ಕಮಿಷನ್ ಗಳಲ್ಲಿ ಕೂಡ ಸ್ಥಾನ ಪಡೆದಿದ್ದಾರೆ.

ಸಾವರ್ಕರ್ ಅವರು ತಮ್ಮ 59 ನೇ ಜನ್ಮ ದಿನಾಚರಣೆಯನ್ನು ಕೂಡ ಬಳಸಿ ಹಿಂದೂ ಮಹಾಸಭಾದ ಕರೆಯ ಮೇರೆಗೆ ಬ್ರಿಟಿಷ್ ಮಿಲಿಟರಿ ಸೇನೆಗಳಿಗೆ ದೊಡ್ಡ ಸಂಖ್ಯೆಯಲ್ಲಿ ಹಿಂದೂಗಳು ನೇಮಕಾತಿ ಪಡೆಯಲು ಪ್ರೋತ್ಸಾಹಿಸಿದರು. ತಮ್ಮ ಜನ್ಮ ದಿನಾಚರಣೆ ಸಂದೇಶದಲ್ಲಿ ಅವರು ಪ್ರತಿಯೊಬ್ಬರಿಗೂ ಹೀಗೆ ಕರೆ ನೀಡಿದರು:

ಮಿಲಿಟರಿ ಸೇವೆಯಲ್ಲಿ ಸೇರುವ ಸಾಮರ್ಥ್ಯ ಇರುವ ಹಿಂದೂವು ಭೂಸೇನೆಗಳಲ್ಲಿ ಮತ್ತು ವಾಯು ಸೇನೆಗಳಲ್ಲಿ ಸೇರಬೇಕು ಅಥವಾ ಮದ್ದುಗುಂಡುಗಳ ಕಾರ್ಖಾನೆಗಳಿಗೆ ಮತ್ತು ಯುದ್ಧ ಕೌಶಲ್ಯಗಳಿಗೆ ಸಂಬಂಧಪಟ್ಟಂತಹ ಇತರ ಉತ್ಪಾದನಾ ಕಾರ್ಯಾಗಾರಗಳಲ್ಲಿ ಪ್ರವೇಶ ಪಡೆಯಬೇಕು.

ಹಿಂದೂ ಮಹಾಸಭಾದ ಹಿರಿಯ ಮುಖಂಡರಾದ ಸರ್‌ಜ್ವಾಲಾ ಪ್ರಸಾದ್ ಶ್ರೀವಾಸ್ತವ್ ಅವರು ಸಾವರ್ಕರ್ ಅವರ ನಿರ್ದೇಶನದ ಮೇರೆಗೆ ಮೇ 1941 ರಲ್ಲಿ ಬ್ರಿಟಿಷ್ ಸಶಸ್ತ್ರ ಸೇನೆಯ ಸೇನಾಧಿಪತಿ (ಕಮ್ಯಾಂಡರ್ ಇನ್ ಚೀಫ್) ಯನ್ನು ಭೇಟಿ ಮಾಡಿದ್ದರೆಂದು ಕೂಡ ಭಿಡೆಯವರ ಪುಸ್ತಕವು ತಿಳಿಸುತ್ತದೆ. ಹಿಂದೂ ಮಹಾಸಭಾದ ಪತ್ರಾಗಾರದಲ್ಲಿ ಲಭ್ಯವಿರುವ ದಾಖಲೆಗಳ ಪ್ರಕಾರ, ಈ ಭೇಟಿಯ ನಂತರ ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯ ತಲೆ ಬರಹ “ಘನತೆವೆತ್ತ ಸೇನಾಧಿಪತಿಗಳು ಮತ್ತು ಶ್ರೀ ಜ್ವಾಲಾ ಪ್ರಸಾದ್” ಎಂದು ಇತ್ತು; ಅದರ ಒಕ್ಕಣೆ ಹೀಗಿತ್ತು:

ಈ ಹಿಂದೆ ಪ್ರಕಟಿಸಿದಂತೆ, ಸರ್ ಜ್ವಾಲಾ ಪ್ರಸಾದ್ ಶ್ರೀವಾಸ್ತವ್ ಮತ್ತು ಘನತೆವೆತ್ತ ಸೇನಾಧಿಪತಿಗಳ ನಡುವಿನ ಸಂದರ್ಶನವು ದೆಹಲಿಯಲ್ಲಿ ನಡೆಯಿತು. ಹಿಂದೂ ಮಹಾಸಭಾದ ಅಧ್ಯಕ್ಷ, ವೀರ ಸಾವರ್ಕರ್ ಅವರ ನಿರ್ದೇಶನದಂತೆ ಸರ್‌ಜ್ವಾಲಾ ಪ್ರಸಾದ್ ಅವರು ಸಾಮಾನ್ಯ ರಾಜಕೀಯ ಹಾಗೂ ಮಿಲಿಟರಿ ನೀತಿ ಮತ್ತು ಭೂಸೇನೆ, ನೌಕಾಸೇನೆ ಹಾಗೂ ವಾಯು ಸೇನೆಗಳಲ್ಲಿ ಹಿಂದೂಗಳು ಅನುಭವಿಸುತ್ತಿರುವ ವಿಶೇಷ ಕಷ್ಟಗಳಿಗೆ ಸಂಬಂಧಪಟ್ಟ ಹಿಂದೂ ಮಹಾಸಭಾದ ನಿಲುವನ್ನು ಅಲ್ಲಿ ವಿವರಿಸಿದರು. ಘನತೆವೆತ್ತ ಸೇನಾಧಿಪತಿಯವರು ಸಹಾನುಭೂತಿಯಿಂದ ಆಲಿಸಿದರು ಮತ್ತು ಮಿಲಿಟರಿ ಸೇವೆಗೆ ಸಂಬಂಧಪಟ್ಟಂತೆ ಹಿಂದೂಗಳ ಕುಂದುಕೊರತೆಗಳನ್ನು ನಿವಾರಿಸಲು ತಮ್ಮ ಕೈಲಾದ ಎಲ್ಲವನ್ನೂ ಮಾಡುವುದಾಗಿ ಭರವಸೆ ನೀಡಿದರು ಮತ್ತು ಶತ್ರುಗಳ ದಾಳಿಯಿಂದ ಭಾರತವನ್ನು ರಕ್ಷಿಸುವ ದೃಷ್ಟಿಯಿಂದ ತಾಯ್ನಾಡಿನ ಸೇನೆಗೆ ಹಿಂದೂಗಳು ಸೇರುವಂತೆ ಪ್ರೇರೇಪಿಸುವ ನಿಟ್ಟಿನಲ್ಲಿ ನ್ಯಾಯವಾದಿ ಸಾವರ್ಕರ್ ಅವರು ಮುಂದಾಳತ್ವ ವಹಿಸಿರುವುದನ್ನು ಬಹಳವಾಗಿ ಮೆಚ್ಚಿಕೊಂಡರು.

ಯುದ್ಧದ ಅತ್ಯುನ್ನತ ಸೇನಾಬಲಗಳ ಸಂಘಟನೆಗೆ ಸಂಬಂಧಪಟ್ಟಂತೆ ಬ್ರಿಟಿಷ್ ಸರ್ಕಾರವು ಸಾವರ್ಕರ್ ಜತೆ ನಿರಂತರ ಸಂಪರ್ಕದಲ್ಲಿತ್ತು. ಅದು ಸಾವರ್ಕರ್ ಅವರು ಪ್ರಸ್ತಾಪ ಮಾಡಿದ ವ್ಯಕ್ತಿಗಳ ಹಸರುಗಳನ್ನೂ ಒಳಗೊಂಡಿತ್ತು. ಸಾವರ್ಕರ್ ಅವರು ಬ್ರಿಟಿಷ್ ಸರ್ಕಾರಕ್ಕೆ ಕಳಿಸಿದ ಕೃತಜ್ಞತೆ ಸಲ್ಲಿಸುವ ಈ ಕೆಳಗಿನ ಟೆಲಿಗ್ರಾಂನಿಂದ ಅದು ಸ್ಪಷ್ಟವಾಗಿದೆ. ಭಿಡೆಯವರ ಸಂಪುಟ ಇದನ್ನು ನಮಗೆ ಹೇಳುತ್ತದೆ:

ಈ ಕೆಳಗಿನ ಟೆಲಿಗ್ರಾಂನ್ನು ಹಿಂದೂ ಮಹಾಸಭಾದ ಅಧ್ಯಕ್ಷ ನ್ಯಾಯವಾದಿ ವಿಡಿ ಸಾವರ್ಕರ್ ಅವರು (1) ಜನರಲ್ ವಾವೆಲ್, ಸೇನಾಧಿಪತಿ; ಮತ್ತು (2) ದಿ ವೈಸ್‌ರಾಯ್ ಆಫ್ ಇಂಡಿಯಾ ಅವರಿಗೆ ಜುಲೈ 18, 1941 ರಂದು ಕಳಿಸಲಾಗಿತ್ತು.

ಯುವರ್ ಎಕ್ಸಲೆನ್ಸೀಸ್ ಅನೌನ್ಸ್‌ಮೆಂಟ್ ಡಿಫೆನ್ಸ್ ಕಮಿಟಿ ವಿತ್ ಇಟ್ಸ್ ಪರ್ಸೋನೆಲ್ ಇಸ್ ವೆಲ್ಕಂ. ಹಿಂದೂ ಮಹಾಸಭಾ ವ್ಯೂಸ್ ವಿತ್ ಸ್ಪೆಶಲ್ ಸ್ಯಾಟಿಸ್ ಫ್ಯಾಕ್ಷನ್ ಅಪಾಯಿಂಟ್‌ಮೆಂಟ್ ಆಫ್ ಮೆಸರ್ಸ್ ಕಾಲಿಕರ್ ಅಂಡ್ ಜಮ್ನಾದಾಸ್ ಮೆಹ್ತಾ.

(ಘನತೆವೆತ್ತ ತಾವುಗಳು ತಮ್ಮ ಸಿಬ್ಬಂದಿಗಳ ರಕ್ಷಣಾ ಸಮಿತಿ ಪ್ರಕಟಣೆ ಮಾಡಿದ್ದು ಸ್ವಾಗತಾರ್ಹ. ಶ್ರೀಯುತ ಕಾಲಿಕರ್ ಮತ್ತು ಜಮ್ನಾದಾಸ್ ಅವರ ನೇಮಕಾತಿಯನ್ನು ವಿಶೇಷ ತೃಪ್ತಿಯೊಂದಿಗೆ ಹಿಂದೂ ಮಹಾಸಭಾವು ನೋಡುತ್ತದೆ)

ಅತ್ಯಂತ ಆಘಾತಕಾರಿ ಸಂಗತಿಯೆಂದರೆ ಸಾವರ್ಕರ್ ಅವರ ಸಂಪೂರ್ಣ ನಿಯಂತ್ರಣದಲ್ಲಿದ್ದ ಹಿಂದೂ ಮಹಾಸಭಾವು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಯುದ್ಧ ಕಾರ್ಯಾಚರಣೆಗಳಿಗೆ ಸಹಾಯ ಮಾಡುತ್ತಿದ್ದಾಗಲೇ, ಬ್ರಿಟಿಷರು ಭಾರತವನ್ನು ಯುದ್ಧಕ್ಕೆ ನೂಕುವ ಬಲವಂತದ ವಿರುದ್ಧ ಅತ್ತ ಕಾಂಗ್ರೆಸ್ ನಿರಂತರ ಹೋರಾಟವನ್ನು ಶುರುಮಾಡಿತ್ತು. ‘ಯುದ್ಧಕ್ಕಾಗಿ ಒಬ್ಬ ಮನುಷ್ಯನನ್ನೂ ಕಳಿಸೊಲ್ಲ, ಒಂದು ಪೈಸೆಯನ್ನು ಕೊಡೋಲ್ಲ’ ಎಂಬ ಜನಪ್ರಿಯ ಘೋಷಣೆಯನ್ನು ಕಾಂಗ್ರೆಸ್ ನೀಡಿತ್ತು, ಮತ್ತು ಅದು ಮಿಲಿಯಾಂತರ ಜನರನ್ನು ಆಕರ್ಷಿಸಿತ್ತು. ಸಾವರ್ಕರ್ ಅವರ ಮಿತ್ರಕೂಟವಾದ ಬ್ರಿಟಿಷ್ ದೊರೆಗಳು ಈ ಘೋಷಣೆಯನ್ನು ಕೂಗಲು ಧೈರ್ಯತೋರಿದ ನೂರಾರು ದೇಶಪ್ರೇಮಿ ಭಾರತೀಯರನ್ನು ಕೊಂದಿತ್ತು ಮತ್ತು ಸಾವಿರಾರು ಜನರನ್ನು ಜೈಲಿಗೆ ಕಳಿಸಿತ್ತು. ನಾವು ಇಲ್ಲಿ ಗಮನಿಸಬೇಕಾದ ಬಹು ಮುಖ್ಯ ಅಂಶವೇನೆಂದರೆ ಬ್ರಿಟಿಷ್ ದೊರೆಗಳ ಹಿತಾಸಕ್ತಿಯ ಪರವಾಗಿ ಸೇವೆ ಸಲ್ಲಿಸುತ್ತಿದ್ದ ಮುಸ್ಲಿಂ ಲೀಗ್ ಕೂಡ ಯುದ್ಧ ಕಾರ್ಯಾಚರಣೆಗಳೊಂದಿಗೆ ಅಥವಾ ಸರ್ಕಾರ ರಚಿಸಿದ ರಕ್ಷಣಾ ಸಮಿತಿಯಲ್ಲಿ ಸೇರಿಕೊಳ್ಳಲು ನಿರಾಕರಿಸಿತ್ತು.

ಸಾವರ್ಕರ್ ಪುಟ 5 ಕ್ಕೆ

ಸಂಪಾದಕೀಯ

ಸೌಹಾರ್ದ, ಸಮೃದ್ಧ ಜನತೆಯ ನವಕರ್ನಾಟಕ ಕಟ್ಟುವುದಕ್ಕಾಗಿ

ನಮ್ಮ ಎಲ್ಲಾ ಸಹೃದಯಿ ಓದುಗರಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು. 2023 ಹೊಸ ಬದಲಾವಣೆಗಳಿಗೆ ಸಾಕ್ಷಿಯಾಗಲಿ, ಶ್ರಮಜೀವಿಗಳು, ಜನಸಾಮಾನ್ಯರು ನೆಮ್ಮದಿ, ಸೌಹಾರ್ದತೆ, ಶಾಂತಿಯಿಂದ ಬದುಕುವಂತಾಗಲಿ ಎಂದು ದುಡಿಯುವ ಜನರ ಪ್ರಾಣಮಿತ್ರನಾಗಿರುವ ಜನಶಕ್ತಿ ಆಶಿಸುತ್ತದೆ.

ಹಳೆತರ, ವರ್ತಮಾನದ ನಿಷೇಧ, ಹೊಸತರ ಸೃಷ್ಟಿ ಎನ್ನುವುದು ಪ್ರಕೃತಿಯ ನಿತ್ಯ ನಿಯಮ. ಪ್ರತಿ ಕ್ಷಣಗಳು ಸದಾ ಬದಲಾಗುತ್ತಲೇ ಇರುವಾಗ, ಚಲನಶೀಲತೆಯಲ್ಲಿ ಪ್ರತಿ ಕ್ಷಣಗಳೂ ಹೊಸತೇ ಆಗುವಾಗ ಹೊಸ ವರ್ಷ ಎನ್ನುವುದಕ್ಕೆ ಪ್ರತ್ಯೇಕವಾದ ಅರ್ಥ, ಅಸ್ತಿತ್ವ ಇದೆಯೇ ಎಂಬ ಪ್ರಶ್ನೆಯೂ ಸಹಜವಾಗಿ ಕಾಡದಿರದು. ಹೊಸ ವರ್ಷವೆಂಬುದು ಕಳೆದ ಕಾಲದ ಒಂದು ನಿರ್ದಿಷ್ಟ ಅವಧಿಯ ಗಡಿರೇಖೆ ದಾಟಿದ ಬದುಕಿನ ಭವಿಷ್ಯ. ಗತಿಸಿ, ತುಂಬುವುದು ಅನುಭವದ ಬುತ್ತಿ. ನಲಿವು, ನೋವುಗಳ ಹೂರಣ, ಈ ಬದುಕೆಂಬುದು ಅನುಭವಗಳ ತೋರಣ. ಇಂತಹ ಹೊಸ ವರುಷದ ಹೊಸ್ತಿಲಿನಲ್ಲಿ ನಿಂತು ಕಳೆದ ಕಾಲದ– ಗತ ವರುಷದ ವಿದ್ಯಾಮಾನಗಳನ್ನು ಮೆಲುಕು ಹಾಕಲು ಅನುಭವದ ಬುತ್ತಿ ಬಿಚ್ಚಬೇಕು. ಭವಿಷ್ಯದ ಆಶಯ ಸಾಧಿಸುವ ಸಂಕಲ್ಪದ ಗುರಿಯಾಗಬೇಕು.

2022 ಹಲವಾರು ಮಹತ್ತರ ಘಟನೆಗಳಿಗೆ ಸಾಕ್ಷಿಯಾಯಿತು. ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿಯೂ ಹಲವಾರು ಏಳು ಬೀಳುಗಳು ಮತ್ತು ಅತೀವ ನೋವು, ಸಂಕಟಗಳನ್ನು ಕಂಡಿತು. ಕೊರೋನಾ ಸೋಂಕಿನ ಸಂಕಟಗಳಿಂದಲೇ 2022 ಪುಟ ತೆರೆಯಿತು. ಆದರೆ ಇಂದಿನ ಎರಡು ಅಲೆಗಳಿಗೆ ಹೋಲಿಸಿದರೆ ಇದರಿಂದಾದ ಅನಾಹುತಗಳ ಪ್ರಮಾಣ ತುಂಬಾ ಕಡಿಮೆ ಇತ್ತು. ಅಂದರೆ ಬಹುಪಾಲು ಜನರಲ್ಲಿ ಹಾರ್ಡ್ ಇಮ್ಯೂನಿಟಿ ಕೂಡ ಬೆಳೆದಿತ್ತು. ಇದು ತಣ್ಣಗಾಯಿತು ಎನ್ನುವಾಗಲೇ ಬಹುಮುಖ್ಯವಾಗಿ ಕರ್ನಾಟಕದ ಬಹಳಷ್ಟು ಭಾಗ ಅತಿವೃಷ್ಟಿಯ ಪ್ರಾಕೃತಿಕ ವಿಕೋಪದಿಂದ ನಲುಗಿತು. ಅಪಾರ ಪ್ರಮಾಣದಲ್ಲಿ ಕೃಷಿ, ಬೆಳೆಗಳು ನಾಶವಾಯಿತು. ಜನ, ಜಾನುವಾರುಗಳು ಪ್ರಾಣ ಕಳೆದುಕೊಂಡರು. ಆಸ್ತಿಪಾಸ್ತಿ ನಷ್ಟಕ್ಕೆ ಲೆಕ್ಕವಿಲ್ಲದಂತಾಯ್ತು, ಬೆಂಗಳೂರಿನಂತಹ ಮಹಾನಗರವೇ ಇದರಲ್ಲಿ ತತ್ತರಿಸಿತು. ಪ್ರಾಕೃತಿಕ ವಿಕೋಪ ಪ್ರಕೃತಿ ಸಹಜ ಎನ್ನುವಾಗಲೇ, ಅದು ಆಧುನಿಕ ಆಡಳಿತಗಾರರು ಧನದಾಹಿ ಭೂಗಳ್ಳರು ಸೃಷ್ಟಿಸಿದ ನರಕದ ವ್ಯವಸ್ಥೆ ಎನ್ನುವುದು ಬಯಲಾಯಿತು. ಜನರ ನೆರವಿಗೆ ಧುಮುಕಿ ಆದ ನಷ್ಟಕ್ಕೆ ಪರಿಹಾರ ಒದಗಿಸಿ ಬದುಕನ್ನು ಸ್ಥಿರಗೊಳಿಸಲು ಶ್ರಮಿಸಬೇಕಾದ ಸರ್ಕಾರ 'ಕಲ್ಲು ಕರಗಿಸುವಂತಹ' ಮಾತುಗಳು ಮತ್ತು ಸಮೀಕ್ಷೆಗಳಲ್ಲಿಯೇ ಕಾಲ ಕಳೆದು ಕೈತೊಳೆದುಕೊಂಡಿತು. ಅಂತಿಮವಾಗಿ, ಜನರನ್ನು ನಡು ನೀರಿನಲ್ಲಿಯೇ ಕೈಬಿಟ್ಟಿತು. ರಾಜ್ಯದಲ್ಲಿ ಆದ ಅಪಾರ ಹಾನಿಗೆ ಪರಿಹಾರ ನೀಡಲು ಕೇಂದ್ರ ಸರ್ಕಾರವು ಪೂರ್ಣ ಮನಸ್ಸಿನಿಂದ ಮುಂದೆ ಬರಲಿಲ್ಲ ಎನ್ನುವುದು, ಮುಖ್ಯಮಂತ್ರಿ ಬೊಮ್ಮಾಯಿ ಕೂಡ ಆಗ್ರಹಿಸದೇ ಬಾಯಿ ಮುಚ್ಚಿ ಕುಳಿತಿದ್ದು ಕೂಡ ಒಂದು ದುರಂತ.

ಉದಾರಿಕರಣ ಮತ್ತು ಜಾಗತೀಕರಣದ ನೀತಿಗಳ ದಶಕಗಳ ಪರಿಣಾಮವಾಗಿ ರಾಜ್ಯದ ಆರ್ಥಿಕತೆ, ಎಂದೋ ಹಳಿತಪ್ಪಿ ಹೋಗಿದೆ ಎನ್ನುವಾಗಲೇ ರಾಜ್ಯದ ಆರ್ಥಿಕತೆ, ಆಡಳಿತ ಮತ್ತು ಅಭಿವೃದ್ಧಿಯನ್ನು ಸುವ್ಯವಸ್ಥೆಗೆ ತರುತ್ತೇವೆ ಎಂದು ಹಿಂಭಾಗಿಲಿನಿಂದ ಅಧಿಕಾರಕ್ಕೆ ಬಂದಿರುವ ಬಿಜೆಪಿ ಆಡಳಿತ ಆರ್ಥಿಕತೆಯನ್ನು ಸುಸ್ಥಿರ ಇಡುವಲ್ಲಿ ಸಂಪೂರ್ಣ ವಿಫಲವಾಯಿತು. ರಾಜ್ಯದ ಆಯವ್ಯಯದಲ್ಲಿ ಹೊರಸಾಲಗಳನ್ನು ಕಡಿಮೆ ಮಾಡುವ ಮಾತಿರಲಿ, ಬದಲಾಗಿ, ಅದಿಲ್ಲದೆ ಅಸಾಧ್ಯ ಎಂದ ಬೊಮ್ಮಾಯಿ ಅವರ ಸರ್ಕಾರ ಸಾಲದ ಹೊರೆಯನ್ನು ಮತ್ತಷ್ಟು ಹೆಚ್ಚಿಸಿತು. ರಾಜ್ಯದ ಅಭಿವೃದ್ಧಿ ಸಾಧನೆಗೆ ಬಂಡವಾಳ ಹೂಡಿಕೆಯ ಪ್ರವಾಹವೇ ಹರಿದು ಬರುತ್ತದೆ ಎನ್ನುವ ಅಲಂಕಾರದ ಮಾತುಗಳನ್ನು ಬಿಟ್ಟರೆ ನೈಜ ಹೂಡಿಕೆ ಯಾಗಲಿ, ಪ್ರಗತಿಯಾಗಲೀ ಕಾಣಲೇ ಇಲ್ಲ. ಬದಲಾಗಿ, ಕರುನಾಡಿನ ಜನತೆಯ ರೈತರ ಜೀವ ದ್ರವ ವಾಗಿರುವ ಭೂಮಿಯನ್ನು ಉದ್ಯಮಪತಿಗಳಿಗೆ ಸ್ವಾಧೀನ ಪಡಿಸಿಕೊಂಡು ಉದ್ಯಮಿಗಳ ಪಾಲು ಮಾಡಿತು. ರಾಜ್ಯವು ತೀವ್ರ ಆರ್ಥಿಕ ಕೊರತೆಯಿಂದ ನರಳಿದರೂ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಪಾಲನ್ನು ಕೇಳುವ ಕನಿಷ್ಠ ಧೈರ್ಯವನ್ನು ಮಾಡದೆ ಅಡಿಯಾಳಿನಂತೆ ಬೊಮ್ಮಾಯಿ ಸರ್ಕಾರ ಡೊಗ್ಗಿತು.

ಅಭಿವೃದ್ಧಿ ಸಾಧನೆಗೆ' ಡಬಲ್ ಇಂಜಿನ್' ಸರ್ಕಾರ ಎನ್ನುವ ಈ ಆಡಳಿತ ಕೇಂದ್ರ ಮತ್ತು ರಾಜ್ಯಗಳ ನೀತಿಗಳಿಂದ ಜನರ ಪಾಲಿಗೆ 'ಡಬಲ್ ಬ್ಯಾರಲ್ ಗನ್ನಿ' ನಂತಾಗಿದೆ ಎನ್ನುವುದು ಕಹಿ ಅನುಭವ. ರಾಜ್ಯದ ಜನ ತೀವ್ರತರ ನಿರುದ್ಯೋಗ, ಬೆಲೆ ಏರಿಕೆ, ಹಣದುಬ್ಬರ ಗಳಿಂದ ಕತ್ತರಿಸುತ್ತಿದ್ದಾರೆ. ಇವಕ್ಕೆ ಕನಿಷ್ಠ ಸಾಂತ್ವನ ಅಥವಾ ಪರಿಹಾರ ಇಲ್ಲವಾಗಿದೆ. ರಾಜ್ಯದ ಆರ್ಥಿಕತೆಯನ್ನು ಕಾರ್ಪೊರೇಟ್ ಕಂಪನಿಗಳಿಗೆ ಅನುಗುಣವಾಗಿ ವಿನ್ಯಾಸ ಮಾಡಲಾಗಿದೆ. ಕೇಂದ್ರ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆದರೂ ರಾಜ್ಯ ಸರ್ಕಾರ ಹಿಂಪಡೆಯದೇ ರೈತರನ್ನು, ಕೃಷಿಯನ್ನು ಕಾರ್ಪೊರೇಟ್ ಕಂಪನಿಗಳ ಬಾಯಿಗೆ ತಳ್ಳುತ್ತಿದೆ. ಮಾಲೀಕರ ಅನುಕೂಲಕ್ಕಾಗಿ ಕಾರ್ಮಿಕರ ಕಾಯ್ದೆಗಳನ್ನು ತಿದ್ದುಪಡಿ ಮಾಡಲಾಗಿದೆ. ಮತ್ತು ಮತ್ತಷ್ಟೂ ದಮನಕಾರಿ ನೀತಿಗಳನ್ನು ಅನುಸರಿಸಲಾಗುತ್ತಿದೆ. ಈ ಸರ್ಕಾರದ ನೀತಿಗಳ ವಿರುದ್ಧ ನೌಕರರು, ಕಾರ್ಮಿಕರು, ರೈತರು–ಕೂಲಿಕಾರರು, ಮಹಿಳೆಯರು, ವಿವಿಧ ವಿಭಾಗಗಳ ಅಸಂಘಟಿತರು ತೀವ್ರತರ ಹೋರಾಟಕ್ಕೆ ಇಳಿದಿದ್ದಾರೆ. ಇದು ಮತ್ತಷ್ಟೂ ವಿಸ್ತಾರಗೊಳ್ಳಬೇಕು.

ಈ ಅವಧಿಯಲ್ಲಿ ಕಂಡು ಬಂದ ಮತ್ತೊಂದು ಅತಿ ಮುಖ್ಯ ಘಟನೆಗಳೆಂದರೆ ಬಿಜೆಪಿ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಾದದ್ದು. ಬಿಜೆಪಿ ಆಡಳಿತದಲ್ಲಿಯೇ ಮಧ್ಯಪ್ರದೇಶದಲ್ಲಿ ನಡೆದಿದ್ದ ವ್ಯಾಪಮ್ ಹಗರಣವನ್ನು ನೆನಪಿಸುವಂತೆ ಸಬ್ ಇನ್ಸ್ಪೆಕ್ಟರ್ ನೇಮಕಾತಿ ಹಗರಣ ಆಡಳಿತದಲ್ಲಿರುವ ಬಿಜೆಪಿ ಆರ್.ಎಸ್.ಎಸ್. ಮತ್ತು ಅಧಿಕಾರಶಾಹಿಗಳ ನಡುವಿನ ಮಹಾವಂಚಕ ಜಾಲವನ್ನು ತೆರೆದಿಟ್ಟಿತು. ಇಡೀ ಆಡಳಿತ ವ್ಯವಸ್ಥೆಯ ಎಲ್ಲಾ ಹಂತಗಳಲ್ಲಿ ಲಂಚ ತಾಂಡವ ಆಡುತ್ತಿದ್ದು ಪ್ರತಿ ಕೆಲಸಗಳಿಗೆ ಕನಿಷ್ಠ ಶೇ 40 ರಷ್ಟು ಹಣ ಲಂಚವಾಗಿ ನೀಡಲೇಬೇಕೆಂಬ ಸ್ಥಿತಿ ಎಲ್ಲೆಡೆಗಳಲ್ಲಿ ಇದ್ದು ಮಾಡಿದ ಕೆಲಸದ ಹಣ ಪಡೆಯಲು ಲಂಚ ನೀಡಬೇಕಾದ ಹತಾಶ ಸ್ಥಿತಿಯಿಂದ ಕಂಟ್ರಾಕ್ಟರುಗಳು ಆತ್ಮಹತ್ಯೆ ಮಾಡಿಕೊಳ್ಳುವಂತಹ ದಾರುಣ ಘಟನೆಗಳ ಮೂಲಕವೂ ತನ್ನ ಕ್ರೂರ ಮುಖವನ್ನು ತೋರಿಸಿತು. ಇಂತಹ ಘೋರ ಸ್ಥಿತಿಯ ಬಗ್ಗೆ ನ್ಯಾಯ ಕೋರಿ ಯಾವುದಕ್ಕೂ ಮೋದಿ ಮತ್ತು ಅಮಿತ್ ಶಾ ಗಮನಕ್ಕೆ ತಂದರೂ ಕನಿಷ್ಠ ಪ್ರತಿಕ್ರಿಯೆಯನ್ನು ನೀಡದೇ ಎಲ್ಲ ಹಗರಣಗಳನ್ನು ಮೌನವಾಗಿಯೇ ಬೆಂಬಲಿಸಿತು.

ಸಾರ್ವಜನಿಕ ಆಸ್ತಿಯನ್ನು ಲೂಟಿ ಮಾಡಲು, ಉದ್ಯಮಪತಿಗಳಿಗೆ ಅವಕಾಶ ತೆರೆದು ಕೊಟ್ಟಿರುವಾಗಲೇ, ಸಾರ್ವಜನಿಕ ಸ್ವತ್ತಾಗಿರುವ ಭೂಮಿ, ಹಣಕಾಸನ್ನು ಸಂಘ ಪರಿವಾರಕ್ಕೆ ಯಥೇಚ್ಛವಾಗಿ ಹಂಚಿಕೆ ಮಾಡಿ ಲೂಟಿ ಮಾಡಲು ಅವಕಾಶ ಕಲ್ಪಿಸಿ ಜನತೆಗೆ ವಂಚಿಸಿರುವುದು ಮತ್ತೊಂದು ಮುಖ್ಯ ಅಂಶ.

ನೈತಿಕತೆ, ಸುಸಂಸ್ಕೃತಿಯ ಬಗ್ಗೆ ಬಹುವಾಗಿ ಮಾತನಾಡುವ ಬಿಜೆಪಿಯ ಕೆಲ ಸಚಿವರು ಪುಟ 7 ಕ್ಕೆ



ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಸಿಪಿಐ(ಎಂ) ಅಭ್ಯರ್ಥಿ ಘೋಷಣೆ

ಡಾ. ಅನಿಲ್ ಕುಮಾರ್ ಸಿಪಿಐ(ಎಂ) ಅಭ್ಯರ್ಥಿ

ಜನಪರ ವೈದ್ಯ ಡಾ. ಅನಿಲ್ ಕುಮಾರ್ ಆವುಲಪ್ಪ, ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಎಂದು 2022 ಡಿಸೆಂಬರ್ 31 ರಂದು ಶನಿವಾರ ಚಿಕ್ಕಬಳ್ಳಾಪುರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಕೇಂದ್ರ ಸಮಿತಿಯ ಸದಸ್ಯರಾದ ಯು. ಬಸವರಾಜ್ ಅವರು ಅಭ್ಯರ್ಥಿ ಆಯ್ಕೆಯನ್ನು ಘೋಷಿಸಿದರು. ಬಾಗೇಪಲ್ಲಿ ವಿಧಾನಸಭಾ ಚುನಾವಣಾ ಕ್ಷೇತ್ರಕ್ಕೆ ಡಾ.ಅನಿಲ್ ಕುಮಾರ್ ಅವರನ್ನು ಅಭ್ಯರ್ಥಿಯಾಗಿಸಲು ರಾಜ್ಯ ಸಮಿತಿಯ ಸೂಚನೆಯನ್ನು ಪಾಲಿಟ್ ಬ್ಯುರೋ ಅನುಮೋದಿಸಿದೆ.

ವಿಧಾನಸಭೆಯಲ್ಲಿ ದುಡಿಯುವ ಜನರ ಧ್ವನಿ ಇಲ್ಲ:

ರಾಜ್ಯ ಮತ್ತು ಕೇಂದ್ರದ ಬಿಜೆಪಿ ಸರ್ಕಾರ ಜನರಿಗೆ ಸಂಕಷ್ಟ ಉಂಟುಮಾಡುವ ಜನವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿವೆ. ವಿಧಾನಸಭೆಯಲ್ಲಿ ಜನರ ಪರವಾಗಿ ಧ್ವನಿ ಎತ್ತುವವರಿಲ್ಲ. ಸಿಪಿಐ(ಎಂ) ಗೆಲುವು ಕಂಡರೆ ಮಾತ್ರ ದುಡಿಯುವ ವರ್ಗಗಳ ಪರವಾಗಿ ವಿಧಾನಸೌಧದಲ್ಲಿ ಧ್ವನಿ ಮೊಳಗಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಯು.ಬಸವರಾಜು ತಿಳಿಸಿದರು.

ಬಾಗೇಪಲ್ಲಿ ಕ್ಷೇತ್ರದ ಜನರು ಈ ಹಿಂದಿನಿಂದಲೂ ಸಿಪಿಎಂ ಬಗ್ಗೆ ಅಪಾರ ಪ್ರೀತಿ ತೋರುತ್ತಿದ್ದಾರೆ. ರಾಜ್ಯದಲ್ಲಿ ಶ್ರಮಿಕ ಜನರ ಪರವಾಗಿ ಧ್ವನಿ ಮೊಳಗಿಸಲು ಬಾಗೇಪಲ್ಲಿ ಜನರು ತೀರ್ಮಾನ ಕೈಗೊಳ್ಳಬೇಕು ಎಂದು ಅವರು ಹೇಳಿದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಮುನಿವೆಂಕಟಪ್ಪ, ಜಿಲ್ಲಾ ಮುಖಂಡರಾದ ಡಾ.ಅನಿಲ್ ಕುಮಾರ್, ಸಿದ್ದಗಂಗಪ್ಪ, ಬಿ. ಸಾವಿತ್ರಮ್ಮ, ರಘುರಾಮರೆಡ್ಡಿ, ನಾಗರಾಜ್, ಜಯರಾಮ ರೆಡ್ಡಿ, ಬಿ.ಎನ್. ಮುನಿಕೃಷ್ಣಪ್ಪ ಮುಂತಾದವರು ಗೋಷ್ಠಿಯಲ್ಲಿ ಇದ್ದರು.

ಪ್ರಜಾವೈದ್ಯ ಡಾ. ಅನಿಲ್ ಕುಮಾರ್:

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ)ಯ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ಡಾ. ಅನಿಲ್ ಕುಮಾರ್ ಅವರು ವೈದ್ಯಕೀಯ ಪದವಿ ಶಿಕ್ಷಣವನ್ನು ಬೆಂಗಳೂರಿನ ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ ಯಲ್ಲಿ ಮುಗಿಸಿದರು. ನಂತರ ಶಸ್ತ್ರಚಿಕಿತ್ಸೆಯ ಉನ್ನತ ತರಬೇತಿಯನ್ನು ಸೇಂಟ್ ಮಾರ್ಥಾಸ್ ಆಸ್ಪತ್ರೆ ಮತ್ತು ನವದೆಹಲಿಯ ಎನ್.ಬಿ.ಇ.ಯಲ್ಲಿ ಪಡೆದರು. ಬಳಿಕ ಬಾಗೇಪಲ್ಲಿಯಲ್ಲಿ ಪೀಪಲ್ಸ್ ಸರ್ಜಿಕಲ್ ಅಂಡ್ ಮೆಟರ್ನಿಟಿ ಆಸ್ಪತ್ರೆ ನಡೆಸುತ್ತಿರುವ ಅವರು ತಾಲ್ಲೂಕಿನಲ್ಲಿ 'ಪ್ರಜಾವೈದ್ಯ' ಎಂದೇ ಪರಿಚಿತರಾಗಿದ್ದಾರೆ. ಅವರು ಕೋವಿಡ್ ಮಹಾ ಸೋಂಕಿನ ಸಂದರ್ಭದಲ್ಲಿ ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳ ಸುಮಾರು 200 ಗ್ರಾಮಗಳಲ್ಲಿ ಕೃಷಿ ಕೂಲಿಕಾರರ ಸಂಘ, ಡಿ.ವೈ. ಎಫ್.ಐ. ಮತ್ತು ಸಿಪಿಐ(ಎಂ) ಪಕ್ಷದ ಸಹಕಾರದಲ್ಲಿ ಪ್ರಮುಖ ಮುತುವರ್ಜಿ ಕೋವಿಡ್ ಪ್ರಥಮ ಚಿಕಿತ್ಸಾ ಕೇಂದ್ರಗಳನ್ನು ಆರಂಭಿಸಿದ್ದರು. ಆಯಾ ಗ್ರಾಮಗಳ ಯುವಜನರಿಗೆ ತರಬೇತಿಯನ್ನು ನೀಡಿ ಕೋವಿಡ್ ಎದುರಿಸುವುದಕ್ಕೆ ಸನ್ನದ್ಧರನ್ನಾಗಿಸಿದರು.



'ಆರೋಗ್ಯ ವ್ಯವಸ್ಥೆಯತ್ತ ಜನ ಬರುವುದಕ್ಕೆ ಬದಲಾಗಿ ಜನರತ್ತ ಆರೋಗ್ಯ ವ್ಯವಸ್ಥೆ ತೆರಳಬೇಕು ಎನ್ನುವ ಮಹತ್ವದ ತಾತ್ವಿಕ ನಿಲುವನ್ನು ಆಧಾರವಾಗಿರಿಸಿಕೊಂಡು, ಗ್ರಾಮಗಳಲ್ಲಿ ಸ್ವಯಂಸೇವಕರ ತಂಡಗಳನ್ನು ಕಟ್ಟುವ ಮೂಲಕ, ಗುರುತರ ಸೇವೆ ಸಲ್ಲಿಸುತ್ತಿರುವ ಅನಿಲ್ ಕುಮಾರ್ ಅವರಿಗೆ ಅನೇಕ ಸಾರ್ವಜನಿಕ ಸೇವಾ ಸಂಸ್ಥೆಗಳು ಮತ್ತು ಜನಪರ ಸಂಘಟನೆಗಳು ಬೆನ್ನೆಲುಬಾಗಿ ನಿಂತಿವೆ. ಈ ಅನುಭವವನ್ನು ರಾಜ್ಯದ ಇತರೆಡೆಯೂ ವಿಸ್ತರಿಸಿದ ಅವರು, ವಿಶೇಷವಾಗಿ ಪಶ್ಚಿಮಘಟ್ಟದಲ್ಲಿರುವ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಮುಂತಾದ ಜಿಲ್ಲೆಗಳ ಆದಿವಾಸಿ ಸಮುದಾಯಗಳ ನಡುವೆಯೂ ವೈದ್ಯಕೀಯ ಸೇವೆ ನೀಡಿದ್ದಾರೆ. ಕೋವಿಡ್ ನಿಂದ ರಕ್ಷಣೆ ಪಡೆಯಲು ತರಬೇತಿ ನೀಡಿದರು. ಇವರ ವಿಶಿಷ್ಠ ಸೇವೆಯನ್ನು ಗುರುತಿಸಿದ ಮಾಧ್ಯಮ ಸಂವಹನ ಕ್ಷೇತ್ರದ ಸಂಸ್ಥೆಯಾದ 'ಭಾರತದ ಸಾರ್ವಜನಿಕ ಸಂಬಂಧಗಳ ಮಂಡಳಿ–'ಪಬ್ಲಿಕ್ ರಿಲೇಷನ್ಸ್ ಕೌನ್ಸಿಲ್ ಆಫ್ ಇಂಡಿಯಾ' (ಪಿ.ಸಿ.ಆರ್.ಐ.)' ಸಮಾಜದ ವಿವಿಧ ರಂಗಗಳಲ್ಲಿ ತಮ್ಮದೇ ಆದ ವಿಶಿಷ್ಟ ಸೇವೆ ಮತ್ತು ಕೊಡುಗೆಗಳನ್ನು ನೀಡಿರುವ ಸಾಧಕರಿಗೆ ಕೊಡುವ ಪ್ರತಿಷ್ಠಿತ 'ಚಾಣಕ್ಯ ಪ್ರಶಸ್ತಿ' ಡಾ. ಅನಿಲ್ ಕುಮಾರ್ ಅವರಿಗೆ ನೀಡಿದೆ. ಈ ಪ್ರಶಸ್ತಿಯನ್ನು ಗೋವಾದಲ್ಲಿ ಮುಖ್ಯಮಂತ್ರಿ ಪ್ರಧಾನ ಮಾಡಿದ್ದರು.

ಡಾ ಅನಿಲ್ ಕುಮಾರ್ ರವರು ಸಿಪಿಐ(ಎಂ) ಪಕ್ಷದ ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಹಾಗೂ ಡಿ.ವೈ.ಎಫ್.ಐ. ಯುವಜನ ಸಂಘಟನೆಯ ಜಿಲ್ಲಾ ಸಂಚಾಲಕರಾಗಿ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ.

ಸಿಪಿಐ(ಎಂ) ಭದ್ರಕೋಟೆ ಬಾಗೇಪಲ್ಲಿ:

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ ಸಿಪಿಐ(ಎಂ) ಪಕ್ಷದ ಭದ್ರಕೋಟೆ ಅಂತಲೇ ಪುಟ 11 ಕ್ಕೆ

ತ್ರಿಪುರಾದಲ್ಲಿನ ದುರಾಡಳಿತವನ್ನು ಕೊನೆಗೊಳಿಸಲು ಮುಂದೆ ಬರಬೇಕು

–ಜನತೆಗೆ ತ್ರಿಪುರಾದ ಆರು ಪ್ರತಿಪಕ್ಷಗಳ ಮುಖಂಡರ ಮನವಿ

ತ್ರಿಪುರಾದ ಶಾಂತಿಯುತ, ಪ್ರಜಾಸತ್ತಾತ್ಮಕ ಮನಸ್ಸಿನ ಜನರು ರಾಜ್ಯದಲ್ಲಿ ಈಗಿರುವ ಭಯಾನಕ ಪರಿಸ್ಥಿತಿಯ ವಿರುದ್ಧ ಒಗ್ಗಟ್ಟಿನ ಪ್ರತಿಭಟನೆಯ ಧ್ವನಿ ಎತ್ತಲು ಪಕ್ಷ, ಧರ್ಮ, ಜಾತಿ ಮತ್ತು ಸಮುದಾಯದ ಭೇದಭಾವವಿಲ್ಲದೆ ಸ್ವಯಂಪ್ರೇರಿತವಾಗಿ ಮುಂದೆ ಬರಬೇಕು ಮತ್ತು ಈ ದುರಾಡಳಿತದ ವಿರುದ್ಧ ದನಿಯೆತ್ತಲು ಹಾಗೂ ಈ ಕರಾಳ ಆಡಳಿತವನ್ನು ಕೊನೆಗೊಳಿಸಲು ಮುಂದಾಗಬೇಕು ಎಂದು ಸಿಪಿಐ(ಎಂ), ಕಾಂಗ್ರೆಸ್, ಸಿಪಿಐ, ಫಾರ್ವರ್ಡ್ ಬ್ಲಾಕ್, ಆರ್‌ಎಸ್‌ಪಿ ಮತ್ತು ಸಿಪಿಐ(ಎಂಎಲ್)ನ ರಾಜ್ಯ ಕಾರ್ಯದರ್ಶಿಗಳು ಒಂದು ಜಂಟಿ ಮನವಿಯಲ್ಲಿ ಜನತೆಗೆ ಕರೆ ನೀಡಿದ್ದಾರೆ.

ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರ ರಚನೆಯಾದ ನಂತರ ತ್ರಿಪುರಾ ರಾಜ್ಯದಲ್ಲಿ ಊಹಿಸಲಾಗದ, ಅಸಾಮಾನ್ಯ ಅರಾಜಕತೆಯ ಆಡಳಿತವನ್ನು ಸ್ಥಾಪಿಸಲಾಗಿದೆ. ನಾಗರಿಕ ಹಕ್ಕುಗಳನ್ನು ನಿರಾಕರಿಸಲಾಗಿದೆ. ಮಾಧ್ಯಮಗಳ ಸ್ವಂತಿಕೆಯನ್ನು ಧ್ವಂಸ ಮಾಡಲಾಗಿದೆ. ವಿರೋಧ ಪಕ್ಷಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸದಂತೆ ಮಾಡಲಾಗಿದೆ. ಅವರ ಧ್ವನಿಯನ್ನು ಹತ್ತಿಕ್ಕಲಾಗಿದೆ. ವಾಸ್ತವವಾಗಿ, ರಾಜ್ಯದಲ್ಲಿ ಏಕಪಕ್ಷೀಯ ದಬ್ಬಾಳಿಕೆಯ ಆಡಳಿತವನ್ನು ಹೇರಲಾಗಿದೆ. ಮತದಾರರು ಮುಕ್ತವಾಗಿ ಮತದಾನ ಮಾಡುವ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಚುನಾವಣೆ ಪ್ರಹಸನದ ಮಟ್ಟಕ್ಕೆ ಇಳಿದಿದೆ. ಆಡಳಿತದ ಉದ್ದೇಶಪೂರ್ವಕ ನಿಷ್ಕ್ರಿಯತೆ, ವಿಶೇಷವಾಗಿ ಪೊಲೀಸ್ ಆಡಳಿತದ ಒಂದು ವಿಭಾಗವು ಆಳುವ ಪಕ್ಷವು ತಮ್ಮ ಅಸಂವಿಧಾನಿಕ ಮತ್ತು ಪ್ರಜಾಸತ್ತಾತ್ಮಕವಲ್ಲದ ಕ್ರಮಗಳನ್ನು ಮುಂದುವರಿಸಲು ಸಹಾಯ ಮಾಡಿದೆ. ಮತ್ತು ಆಳುವ ಪಕ್ಷದ ಕುಮ್ಮಕ್ಕಿನಿಂದ ದುಷ್ಕರ್ಮಿಗಳನ್ನು ತೊಡಗಿಸಿಕೊಂಡಿದೆ. ಕೊಲೆಯಂತಹ ಘಟನೆಗಳು; ಭಯೋತ್ಪಾದಕ ಕ್ರಮಗಳು, ಲೂಟಿ ಮತ್ತು ಹಣದ ಸುಲಿಗೆ ರಾಜ್ಯದಲ್ಲಿ ಸಾಮಾನ್ಯ ಲಕ್ಷಣಗಳಾಗಿವೆ. ಜನರು ತಮ್ಮ ದಿನನಿತ್ಯದ ಜೀವನೋಪಾಯವನ್ನು, ಬದುಕನ್ನು ನಿರ್ವಹಿಸುವ ಸಾಧನಗಳ ಮೂಲಗಳನ್ನು ನಾಶಮಾಡಲಾಗುತ್ತಿದೆ. ಹಲವು ಸ್ಥಳಗಳಲ್ಲಿ, ಜನರನ್ನು ತಮ್ಮ ಪೂರ್ವಜರ ಭೂಮಿಯಿಂದ ಒಕ್ಕಲೆಬ್ಬಿಸಲಾಗುತ್ತಿದೆ, ಇತರ ಸ್ಥಳಗಳಿಗೆ ಅಥವಾ ಇತರ ರಾಜ್ಯಗಳಿಗೆ ಹೋಗುವಂತೆ ಬಲವಂತ ಮಾಡಲಾಗುತ್ತಿದೆ. ರಾಜ್ಯದಲ್ಲಿ ತಾಯಂದಿರು ಮತ್ತು ಸಹೋದರಿಯರ ಮೇಲೆ ಕ್ರೂರ ಅಪರಾಧಗಳು ನಡೆಯುತ್ತಿವೆ. ಪೊಲೀಸರು ಅಪರಾಧಿಗಳನ್ನು ಮುಟ್ಟುವುದಿಲ್ಲ ಏಕೆಂದರೆ ಅವರು ಆಳುವ ಪಕ್ಷದ ಅನುಯಾಯಿಗಳು ಅಥವಾ ಆಳುವ ಪಕ್ಷದ ಬೆಂಬಲಿಗರು ಎಂಬ ಹಣೆಪಟ್ಟಿಯನ್ನು ಹೊಂದಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ, ಸಂತ್ರಸ್ತರ ವಿರುದ್ಧ ಸೃಷ್ಟಿಸಿದ ಪ್ರಕರಣಗಳು ರಾಶಿ ಬೀಳುತ್ತಿವೆ. ಕಾನೂನಿನ ಆಡಳಿತದ ಬದಲು ಕಾಡಿನ ಆಳ್ವಿಕೆ ನಡೆಯುತ್ತಿದೆ.

ತ್ರಿಪುರಾದ ಶಾಂತಿಯುತ, ಪ್ರಜಾಸತ್ತಾತ್ಮಕ ಮನಸ್ಸಿನ ಜನರು ರಾಜ್ಯದಲ್ಲಿ ಈಗಿರುವ ಭಯಾನಕ ಪರಿಸ್ಥಿತಿಯನ್ನು ಒಪ್ಪಿಕೊಳ್ಳುವುದಿಲ್ಲ ಎಂಬ ಆಶಯವನ್ನು ವ್ಯಕ್ತಪಡಿಸಿರುವ ಈ ಮುಖಂಡರು "ನಾವು ಒಟ್ಟಾರೆಯಾಗಿ ಆಡಳಿತದ, ವಿಶೇಷವಾಗಿ ಪೊಲೀಸ್ ಆಡಳಿತ ನಿಷ್ಪಕ್ಷಪಾತ ನಿಲುವನ್ನು ಅನುಸರಿಸಬೇಕು, ರಾಜ್ಯದಲ್ಲಿ ಕಾನೂನಿನ ಆಳ್ವಿಕೆಯನ್ನು ಪುನಃಸ್ಥಾಪಿಸಲು ಪರಿಣಾಮಕಾರಿ ಕಟ್ಟುನಿಟ್ಟಾದ ಪಾತ್ರವನ್ನು ವಹಿಸಬೇಕು ಎಂಬುದನ್ನು ಅವರ ಗಮನಕ್ಕೆ ತರಬಯಸುತ್ತೇವೆ" ಎಂದಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಗೆ ಮುನ್ನ, ಆರೋಗ್ಯಕರ ಪ್ರಜಾಸತ್ತಾತ್ಮಕ ವಾತಾವರಣದಲ್ಲಿ ಚುನಾವಣೆ ನಡೆಸಲು ಮತ್ತು ಪ್ರತಿಯೊಬ್ಬ ಮತದಾರರು ಮುಕ್ತವಾಗಿ ಸ್ವತಃ ಮತದಾನ ಮಾಡುವ ಹಕ್ಕನ್ನು ಖಾತ್ರಿಪಡಿಸಲು ಮುಂದಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಚುನಾವಣಾ ಆಯೋಗಕ್ಕೂ ಈ ಮುಖಂಡರು ಮನವಿ ಮಾಡಿದ್ದಾರೆ.

ಜಿತೇಂದ್ರ ಚೌಧುರಿ(ಸಿಪಿಐ–ಎಂ), ಬಿರ್ಜಿತ್ ಸಿನ್ಹ(ಕಾಂಗ್ರೆಸ್), ಯುದಿಷ್ಠಿರ್ ದಾಸ್(ಸಿಪಿಐ), ಪರೇಶ್ ಸರ್ಕಾರ್(ಐಎಫ್‌ಬಿ), ದೀಪಕ್ ದೇಬ್ (ಆರ್‌ಎಸ್‌ಪಿ) ಮತ್ತು ಪಾರ್ಥ ಕಾರ್ಕರ್(ಸಿಪಿಐ–ಎಂಎಲ್) ಈ ಮನವಿಗೆ ಸಹಿ ಹಾಕಿದ್ದಾರೆ.

ಜಲೀಲ್ ಕುಟುಂಬಕ್ಕೆ ನಾಗರಿಕ ಸಂಘಟನೆಗಳ ಪ್ರತಿನಿಧಿಗಳಿಂದ ಸಾಂತ್ವನ

ದುಷ್ಕರ್ಮಿಗಳಿಂದ ಹತ್ಯೆಗೀಡಾದ ಕೃಷ್ಣಾಪುರದ ಜಲೀಲ್‌ರ ನಿವಾಸಕ್ಕೆ ಮಂಗಳೂರಿನ ನಾಗರೀಕ ಸಂಘಟನೆಗಳು, ಜಾತ್ಯಾತೀತ ಪಕ್ಷಗಳ ಪ್ರತಿನಿಧಿಗಳ ನಿಯೋಗ ಡಿಸೆಂಬರ್ 27ರ ಮಂಗಳವಾರ ಭೇಟಿ ನೀಡಿ ದು:ಖಿತಪ್ತ ಕುಟುಂಬಕ್ಕೆ ಸಾಂತ್ವಾನ ಹೇಳಿತು. ಕೊಲೆಗಡುಕರಿಗೆ ಶಿಕ್ಷೆ ನೀಡಲು, ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸಲು ನಡೆಸುವ ಪ್ರಯತ್ನದಲ್ಲಿ ತಾವು ಜೊತೆಗಿರುವುದಾಗಿ ಭರವಸೆ ನೀಡಿತು.

ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಮತಾಂಧತೆಯನ್ನು ತಲೆಗೆ ತುಂಬಿಸಿಕೊಂಡ ಯುವಕರು ಅಂಗಡಿಗೆ ನುಗ್ಗಿ ಕೊಲೆ ಮಾಡುವಂತದ್ದನ್ನು ನಾಗರೀಕ ಸಮಾಜ ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಇಂತಹ ಕೃತ್ಯಗಳನ್ನು ನಾಗರೀಕ ಸಮಾಜ ಒಗ್ಗಟ್ಟಾಗಿ ವಿರೋಧಿಸಬೇಕಿದೆ ಎಂದರು.

ಜಲೀಲ್ ಕೊಲೆ ಖಂಡನೀಯ. ಜಿಲ್ಲೆಯಲ್ಲಿ ಇಂತಹ ಕೃತ್ಯಗಳು ನಡೆಯುತ್ತಿರುವುದರಿಂದಾಗಿ ಮುಸ್ಲಿಂ ಸಮುದಾಯದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಕೊಲೆ ದೌರ್ಜನ್ಯಗಳು ನಡೆಯುತ್ತಿರುವುದು ಇಡೀ ಮಾನವ ಸಮುದಾಯವೇ ತಲೆ ತಗ್ಗಿಸುವಂತಹ ವಿಚಾರ. ಬಂಧಿತರನ್ನು ಸೂಕ್ತ ರೀತಿಯಲ್ಲಿ ತನಿಖೆ ನಡೆಸಿ, ಕೃತ್ಯದ ಹಿಂದಿರುವ ಶಕ್ತಿಗಳನ್ನೂ ಪತ್ತೆಹಚ್ಚಿ ಅವರಿಗೂ ಕಾನೂನು ರೀತಿಯಲ್ಲಿ ಶಿಕ್ಷೆ ಆಗುವಂತೆ ಮಾಡಬೇಕಾಗಿರುವುದು ಸರಕಾರದ ಜವಾಬ್ದಾರಿ ಎಂದು ಅವರು ಹೇಳಿದರು.

ನಿಯೋಗದಲ್ಲಿ ರಘು ಎಕ್ಕಾರು, ಸಿಪಿಐ ಮುಂದಾಳು ವಿ. ಕುಕ್ಯಾನ್, ಮಾಜಿ ಮೇಯರ್ ಕೆ. ಅಶ್ರಫ್, ಮಾಜಿ ಉಪಮೇಯರ್ ಪುರುಷೋತ್ತಮ ಚಿತ್ರಾಪುರ, ಮಾಜಿ ಕಾರ್ಪೊರೇಟರ್ ದಯಾನಂದ ಶೆಟ್ಟಿ, ಡಿವೈಎಫ್ಐ ಪದಾಧಿಕಾರಿಗಳಾದ ಬಿ.ಕೆ. ಇಮ್ತಿಯಾಜ್, ಸಂತೋಷ್ ಬಜಾಲ್ ಮತ್ತಿತರರು ಉಪಸ್ಥಿತರಿದ್ದರು.

ಬಿಸಿಯೂಟ ಕಾರ್ಮಿಕರಿಗೆ ಇಡಿಗಂಟು ಪರಿಹಾರ ಅಥವಾ ಪಿಂಚಣಿಗೆ ಆಗ್ರಹ

ವರದಿ: ವಾ.ಉಚ್ಚಿಲ್

60 ವರ್ಷ ತುಂಬಿ ನಿವೃತ್ತಿ ಹೊಂದುವ ಬಿಸಿಯೂಟ ಕಾರ್ಮಿಕರಿಗೆ ಪಿಂಚಣಿ ಸೌಲಭ್ಯ ನೀಡಬೇಕು. ಅಥವಾ ಇಡಿಗಂಟು ಪರಿಹಾರ ನೀಡಬೇಕು ಎಂದು ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಪದ್ಮಾವತಿ ಶೆಟ್ಟಿಯವರು ಒತ್ತಾಯಿಸಿದರು.

ದಿನಾಂಕ 27–12–2022 ರಂದು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತು ಮುಂದುಗಡೆ ನಡೆದ ಬಿಸಿಯೂಟ ಕಾರ್ಮಿಕರ ಪ್ರತಿಭಟನಾ ಪ್ರದರ್ಶನ ಉದ್ದೇಶಿಸಿ ಅವರು ಮಾತನಾಡಿದರು. ಡಿಸೆಂಬರ್ 28 ರಂದು ಬೆಳಗಾವಿಯಲ್ಲಿ ನಡೆದ ಬಿಸಿಯೂಟ ಕಾರ್ಮಿಕರ ಬೆಳಗಾವಿ ಚಲೋ ಹೋರಾಟವನ್ನು ಬೆಂಬಲಿಸಿ ಈ ಪ್ರತಿಭಟನಾ ಪ್ರದರ್ಶನ ನಡೆಯಿತು. ಪದ್ಮಾವತಿ ಶೆಟ್ಟಿಯವರು ಮಾತನಾಡುತ್ತಾ ಡಿಸೆಂಬರ್ 28 ರಂದು ಬೆಳಗಾವಿ ಚಲೋಗೆ ರಾಜ್ಯ ಸಮಿತಿ ಕರೆ ನೀಡಿದೆ. ನಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ನಾವು ಅಲ್ಲಿ ಒತ್ತಾಯಿಸುತ್ತಿದ್ದೇವೆ ಎಂದರು.

ಕಳೆದ ಬಾರಿ ಮೂರು ಹಂತದ ಹೋರಾಟ ನಡೆಸಿ, ನಿವೃತ್ತರಾಗುವ ಕಾರ್ಮಿಕರಿಗೆ ಇಡಿಗಂಟು ಅಥವಾ ಪೆನ್ಷನ್ ನೀಡಬೇಕೆಂದು ಸರಕಾರವನ್ನು ಒತ್ತಾಯ ಮಾಡಿದ್ದೇವೆ. ಕೆಲಸವನ್ನು ನಿಲ್ಲಿಸಿ ಅನಿರ್ದಿಷ್ಟಾವಧಿಯ ಹೋರಾಟವೂ ನಡೆಯಿತು. ಅಂದು ಸರಕಾರದ ಶಿಕ್ಷಣ ಸಚಿವರು ನಮ್ಮ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದ್ದರು. ಆದರೆ ಹಣಕಾಸು ಇಲಾಖೆಯಿಂದ ತಿರಸ್ಕಾರಗೊಂಡಿದೆ ಎಂದು ಅವರು ಈಗ ಹೇಳುತ್ತಿದ್ದಾರೆ. ಅಂದರೆ ರಾಜ್ಯ ಸರಕಾರಕ್ಕೆ ಇಚ್ಛಾ ಶಕ್ತಿ ಇಲ್ಲ ಎಂಬುದು ಇದರಿಂದ ತಿಳಿಯುತ್ತದೆ. ನಮ್ಮ ಹೋರಾಟ ರಾಜ್ಯ ಸರಕಾರದ ಮೋಸದ ವಿರುದ್ಧವಾಗಿದೆ. ಅಗತ್ಯ ವಸ್ತುಗಳ ಬೆಲೆ ವಿಪರೀತವಾಗಿ ಏರಿಕೆಯಾಗಿದೆ. ನಮ್ಮ ವೇತನ 6000 ರೂ. ಮಾಡಲೇ ಬೇಕು. ಇದು ನಮ್ಮ ಒಕ್ಕೊರಳ ಕೇಳಿಕೆಯಾಗಿದೆ ಎಂದು ಅವರು ಹೇಳಿದರು.

ಜಿಲ್ಲಾಧ್ಯಕ್ಷರಾದ ಭವ್ಯಾರವರು ಮಾತನಾಡುತ್ತಾ, ಈಗ ಕೆಲವು ಶಾಲೆಯ ಬಿಸಿಯೂಟವನ್ನು ಇಸ್ಕಾನ್ ನವರಿಗೆ ನೀಡುವ ಕೆಲಸ ನಡೆಯುತ್ತಿದೆ. ನಾವು ಅಡುಗೆ ತಯಾರಿಸಲು ತಯಾರಿದ್ದರೂ ಯಾಕೆ ನಮಗೆ ಮೋಸ ಮಾಡುತ್ತಿದ್ದಾರೆ. ನಮ್ಮ ಕೆಲಸವನ್ನು ಕಸಿಯುವ ಹುನ್ನಾರ ಇದರ ಹಿಂದೆ ಇದೆ. ನಾವು ಇದಕ್ಕೆ ಅವಕಾಶ ನೀಡುವುದಿಲ್ಲ ಎಂಬ ಛಲ ನಮ್ಮಲ್ಲಿ ಇರಬೇಕು. ಅದಕ್ಕಾಗಿ ನಮ್ಮ ಸಂಘಟನೆಯನ್ನು ಬಲಿಷ್ಟಗೊಳಿಸಬೇಕು. ನಮಗೆ ಬೇರೆ ದಾರಿ ಇಲ್ಲ. ಇನ್ನು ಕೆಲವು ಶಾಲೆಗಳಲ್ಲಿ ಬಿಸಿಯೂಟ ಕಾರ್ಮಿಕರ ಮೇಲಿನ ದೌರ್ಜನ್ಯ ಮಿತಿ ಮೀರಿದೆ. ಅಧ್ಯಾಪಕರಿಂದ, ಶಾಲಾಭಿವೃದ್ಧಿ ಅಧ್ಯಕ್ಷರಿಂದ ಕಿರುಕುಳ ನಡೆಯುತ್ತಿದೆ. ನಮಗೆ ರಕ್ಷಣೆ ಇಲ್ಲದಾಗಿದೆ. ಶೋಷಣೆಗೆ ಮಿತಿ ಇಲ್ಲವಾಗಿದೆ. ಈ ಸಂಬಂಧ ಹಲವು ಬಾರಿ ಲಿಖಿತ ದೂರು ನೀಡಿದ್ದೇವೆ. ಹೋರಾಟವನ್ನು ತೀವ್ರಗೊಳಿಸ ಲಾಗುವುದೆಂದು ಎಚ್ಚರಿಕೆ ನೀಡುತ್ತಿದ್ದೇವೆ. ಆದರೂ ಕಿರುಕುಳ ನಿಂತಿಲ್ಲ ಎಂದು ಭವ್ಯಾ ಅವರು ಹೇಳಿದರು.

ಪ್ರಧಾನ ಕಾರ್ಯದರ್ಶಿ ಗಿರಿಜಾರವರು ಮಾತನಾಡುತ್ತಾ, ಬಿಸಿಯೂಟ ಯೋಜನೆಯನ್ನು ಯಾವುದೇ ಖಾಸಗಿ ಸಂಸ್ಥೆಗಳಿಗೆ ಯಾವುದೇ ಸ್ವರೂಪದಲ್ಲೂ ಜವಾಬ್ದಾರಿ ನೀಡಬಾರದು, ಬಿಸಿಯೂಟ ನೌಕರರನ್ನು ನೇರವಾಗಿ ಶಿಕ್ಷಣ ಇಲಾಖೆಯಡಿಯಲ್ಲಿಯೇ ಮೇಲ್ವಿಚಾರಣೆ ನಡೆಸಬೇಕು ಎಂದು ಹೇಳಿದರು.

ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಮಾತನಾಡುತ್ತಾ ಬಡ ಬಿಸಿಯೂಟ ಕಾರ್ಮಿಕರನ್ನು ಭಾರತ ಕಾರ್ಮಿಕ ಸಮ್ಮೇಳನದ ನಿರ್ಣಯದಂತೆ ಕಾರ್ಮಿಕರೆಂದು ಪರಿಗಣಿಸಬೇಕು. ಅವರಿಗೆ ಕನಿಷ್ಠ ವೇತನ ಮತ್ತು ಕಾನೂನು ಸವಲತ್ತು ನೀಡಬೇಕು. ಸರಕಾರಿ ಕಾರ್ಮಿಕರೆಂದು ಪರಿಗಣಿಸಬೇಕು ಎಂದು ಹೇಳಿದರು.

ಪ್ರತಿಭಟನಾ ಪ್ರದರ್ಶನದ ನೇತೃತ್ವವನ್ನು ಮುಂದಾಳುಗಳಾದ ರತ್ನಮಾಲ, ರೇಖಲತಾ, ಯಶೋಧ, ಅರುಣ, ಲಲಿತ, ಜಯಶ್ರೀ, ಉಮಾವತಿ ಮತ್ತಿತರರು ವಹಿಸಿದ್ದರು.

ಜಲೀಲ್ ಹತ್ಯೆ ಖಂಡಿಸಿ ಸಿಪಿಐ, ಸಿಪಿಐ(ಎಂ)ನಿಂದ ಪ್ರತಿಭಟನೆ:

ಸಂಘ ಪರಿವಾರ ನಡೆಸುತ್ತಿರುವ ಹಲ್ಲೆ, ಕೊಲೆ ಕೃತ್ಯಗಳನ್ನು ವಿರೋಧಿಸಿ ಹಾಗೂ ಕೃಷ್ಣಾಪುರದ ಜಲೀಲ್ ಹತ್ಯೆ ಪ್ರಕರಣದ ಸಮಗ್ರ ತನಿಖೆ ನಡೆಸಿ ಅವರ ಕುಟುಂಬಕ್ಕೆ ಪರಿಹಾರ ಒದಗಿಸುವಂತೆ ಆಗ್ರಹಿಸಿ ಸಿಪಿಐ ಮತ್ತು ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿಗಳ ವತಿಯಿಂದ ತಾ.28–12–2022 ರಂದು ಮಂಗಳೂರು ನಗರದ ಮಿನಿ ವಿಧಾನಸೌಧದ ಮುಂದೆ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ. ಯಾದವ ಶೆಟ್ಟಿ ಮಾತನಾಡುತ್ತಾ, ಮಸೂದ್, ಫಾಝಿಲ್ ಮತ್ತು ಜಲೀಲ್ ಹತ್ಯೆ ನಡೆದಾಗ ಜನಪ್ರತಿನಿಧಿಗಳು ಅವರ ಕುಟುಂಬವನ್ನು ಭೇಟಿಯಾಗಲಿಲ್ಲ. ಸಾಂತ್ವಾನ ಹೇಳಲಿಲ್ಲ. ಸಂಘ ಪರಿವಾರ ನಡೆಸಿದ ಹಲ್ಲೆ, ಕೊಲೆ ಪ್ರಕರಣಗಳ ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಶೇಖರ್ ಮಾತನಾಡಿ, ಜನಪ್ರತಿನಿಧಿಗಳ ಪಕ್ಷಪಾತದ ನಿಲುವು ಬದಲಾಗಬೇಕು, ಒಂದು ಸಮುದಾಯದ ವ್ಯಕ್ತಿಯ ಹತ್ಯೆಯಾದಾಗ ಪರಿಹಾರ, ಇನ್ನೊಂದು ಸಮುದಾಯದ ವ್ಯಕ್ತಿ ಹತ್ಯೆಯಾದಾಗ ಪರಿಹಾರ ಇಲ್ಲ. ಇದರಿಂದಾಗಿ ಸರಕಾರ ಮತ್ತು ಜನಪ್ರತಿನಿಧಿಗಳ ನಿಲುವನ್ನು ಜನರು ಸಂಶಯದಿಂದ ನೋಡುವಂತಾಗಿದೆ ಎಂದರು.

ಡಿವೈಎಫ್ಐ ರಾಜ್ಯ ಅಧ್ಯಕ್ಷ ಮುನೀರ್ ಕಾಟಿಪಳ್ಳ ಅವರು ಮಾತನಾಡಿ ಸುರತ್ಕಲ್‌ನಲ್ಲಿ ನಡೆದಿರುವ ಕೊಲೆ ಪ್ರಕರಣಗಳ ಲಾಭ ಪಡೆದು ಬಿಜೆಪಿ ಈವರೆಗೆ ಅಧಿಕಾರಕ್ಕೆ ಬಂದಿದೆ. ಸುರತ್ಕಲ್‌ನ ಹಾಲಿ ಶಾಸಕ ಡಾ.ಭರತ್ ಶೆಟ್ಟಿ ಸಾಧನೆ ಶೂನ್ಯವಾಗಿದೆ. ಅವರಿಗೆ ನೈತಿಕತೆ ಇದ್ದರೆ ಕೊಲೆಗೀಡಾದ ಜಲೀಲ್ ಅವರ ಮನೆಗೆ ಹೋಗಿ ಮನೆಮಂದಿಗೆ ಸಾಂತ್ವಾನ ಹೇಳಲಿ ಎಂದರು.

ಸಿಪಿಐ(ಎಂ) ಜಿಲ್ಲಾ ಕಾರ್ಯಕಾರಿ ಸಮಿತಿಯ ಸುಕುಮಾರ್, ಸದಾಶಿವ ದಾಸ್, ಕೃಷ್ಣಪ್ಪ ಸಾಲ್ಯಾನ್, ಸಂತೋಷ್ ಬಜಾಲ್, ಇಮ್ತಿಯಾಜ್, ಸಿಪಿಐ ಜಿಲ್ಲಾ ಸಮಿತಿಯ ಬಿ. ಶೇಖರ್, ವಿ. ಕುಕ್ಯಾನ್, ಎಂ. ಕರುಣಾಕರ್, ಸುರೇಶ್ ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸದನದ ಕಲಾಪ ನುಂಗಿದ ಅಮಿತ್ ಶಾ, ಮತ್ತೆ ಉ.ಕ ನಿರ್ಲಕ್ಷ್ಯ

ಅದೇ ಭಾಷಣ! ಅದೇ ಭರವಸೆ!! ಮತ್ತದೇ ನಿರಾಸೆ!!!





ಬೆಳಗಾವಿ ಅಧಿವೇಶನ ಉತ್ತರ ಕರ್ನಾಟಕಕ್ಕೆ ಮೀಸಲು ಅಂತಾರೆ, ಕಳೆದ 09 ದಿನಗಳಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಚರ್ಚೆಗೆ ಸಿಕ್ಕಿದ್ದು ಕೊನೆಯ ದಿನದ ಕೊನೆಯ ಕ್ಷಣದಲ್ಲಿ. ಇದನ್ನು ಗಮನಿಸಿದರೆ, ಉತ್ತರ ಕರ್ನಾಟಕದ ಗತಿ-ಸ್ಥಿತಿ, ಕಥೆ ಇಷ್ಟೇನಾ? ಈ ಪ್ರಶ್ನೆ ಯಾರನ್ನು ಕೇಳಬೇಕು, ಯಾರ ಮುಂದೆ ಅಳಲು ತೋಡಿಕೊಳ್ಳಬೇಕು? ಎಂಬ ಪ್ರಶ್ನೆ ಆ ಭಾಗದ ಜನರದ್ದಾಗಿದೆ.

ಗುರುರಾಜ ದೇಸಾಯಿ

ಅಮಿತ್ ಶಾ ಅವರ ಚುನಾವಣಾ ರಾಜ್ಯ ಪ್ರವಾಸಕ್ಕಾಗಿ ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನವನ್ನು ಮೊಟಕುಗೊಳಿಸಿ ಸರಕಾರ ರಾಜ್ಯದ ಜನರಿಗೆ ಪ್ರಮಾದ ಎಸಗಿದೆ. ಕಾಂಗ್ರೆಸ್ ಮೌನ ವಹಿಸಿ, ಕೊನೆ ಗಳಿಗೆಯಲ್ಲಿ ಚರ್ಚೆಗೆ ಪಟ್ಟು ಹಿಡಿದಿದ್ದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಈ ಹಿಂದೆ ನಿಗದಿ ಮಾಡಿದ ವೇಳಾಪಟ್ಟಿ ಪ್ರಕಾರ ಡಿ.30 ರವರೆಗೆ ಅಂದರೆ ಬೆಳಗಾವಿಯ ಸುವರ್ಣ ಸೌಧದಲ್ಲಿ 10 ದಿನಗಳ ಕಾಲ ವಿಧಾನಮಂಡಲ ಅಧಿವೇಶನ ನಡೆಯಬೇಕಿತ್ತು. ಆದರೆ, ಡಿ.29, ಗುರುವಾರ ಸಂಜೆಗೆ ಅಧಿವೇಶನ ಮುಕ್ತಾಯವಾಯಿತು. ಜ್ವಲಂತ ಸಮಸ್ಯೆಗಳ ಚರ್ಚೆ ನಡೆಯುವಾಗ ಅಧಿವೇಶನ ಕಡೆಗಣಿಸಿ ಪಕ್ಷ ಕಾರ್ಯಕ್ರಮಕ್ಕೆ ಒತ್ತು ನೀಡಿ ರಾಜ್ಯ ಹಿತಾಸಕ್ತಿ ಬಲಿಕೊಟ್ಟು ಕೆಟ್ಟ ಪರಂಪರೆಯನ್ನು ಬಿಜೆಪಿ ಹುಟ್ಟು ಹಾಕಿದೆ.

ಅಮಿತ್ ಶಾ ಆಗಮನಕ್ಕಾಗಿ ಕಲಾಪ ಬಲಿ:

ಬಿಜೆಪಿ ಪಕ್ಷ ಮಂಡ್ಯದಲ್ಲಿ ಡಿಸೆಂಬರ್ 30 ರಂದು 1 ಲಕ್ಷ ಜನರ ಬೃಹತ್ ಸಮಾವೇಶವನ್ನು ಆಯೋಜಿಸಿದ್ದು, ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಸಮಾವೇಶವನ್ನುದ್ದೇಶಿಸಿ ಮಾತನಾಡಲಿದ್ದಾರೆ. ಅದೇ ದಿನ ಬೆಂಗಳೂರಿನ ವಿವಿಧೆಡೆಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಹಾಗಾಗಿ ಕಲಾಪವನ್ನು ಒಂದು ದಿನ ಮುಂದೂಡಲಾಗಿದೆ.

ಪಕ್ಷದ ನಾಯಕರು ಬರುತ್ತಾರೆ ಎಂಬ ಕಾರಣಕ್ಕೆ ಕಲಾಪವನ್ನು ಮೊಟಕುಗೊಳಿಸಿದ್ದು ಸರಿಯಾದ ಕ್ರಮವಲ್ಲ ಎಂದು ಸಾರ್ವಜನಿಕರು ಚರ್ಚೆ ಮಾಡುತ್ತಿದ್ದಾರೆ. ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವರು, ಸಂಸತ್ತ ಸದಸ್ಯರು ಭಾಗವಹಿಸಿ ಕಲಾಪವನ್ನು ನಡೆಸಲು ಅನುವು ಮಾಡಿಕೊಡಬಹುದಿತ್ತು. ಆದರೆ ಆ ರೀತಿ ಮಾಡದೆ ಕಲಾಪವನ್ನೆ ಮೊಟಕುಗೊಳಿಸಿದ್ದಾರೆ. ಮುಖ್ಯಮಂತ್ರಿಗಳಿಗೆ ರಾಜ್ಯದ ಜನರ ಸಮಸ್ಯೆಗಿಂತ ತಮ್ಮ ಖುರ್ಚಿ ಉಳಿಸಿಕೊಳ್ಳುವುದು ಮುಖ್ಯವಾದಂತೆ ಕಾಣುತ್ತಿದೆ.

ಶಿಸ್ತಿನ ಪಕ್ಷ ಎಂದು ಎಲ್ಲಕಡೆಯೂ ಪ್ರಚಾರಗಟ್ಟಿಸಿಕೊಳ್ಳುವ ಬಿಜೆಪಿಯ ಶಿಸ್ತು ಎಂತದ್ದು ಎಂಬುದೀಗ ಬಯಲಾಗಿದೆ. ಪ್ರತಿಯೊಂದಕ್ಕೂ ಮೂಗು ತೂರಿಸುವ ಬಿಜೆಪಿಯ ಹೈಕಮಾಂಡ್ "ಅಧಿವೇಶನ ಮೊದಲು ಮುಗಿಯಲಿ ಆ ಮೇಲೆ ಅಮಿತ್ ಶಾ ಕಾರ್ಯಕ್ರಮ", ಎಂದು ಹೇಳಬಹುದಿತ್ತು. ಆದರೆ ರಾಜ್ಯ ಸರಕಾರದ ಮೇಲೆ ಕೇಳಿ ಬರುತ್ತಿರುವ ಆಪಾದನೆಗಳು, ಜನಾಕ್ರೋಶವನ್ನು ತಣ್ಣಗೆ ಮಾಡಲು ಅಮಿತ್ ಶಾ ಅವರೇ ಹೆಣದಿರುವ ತಂತ್ರ ಇದು ಎಂದು ಹೇಳಲಾಗುತ್ತಿದೆ.

ಕಾಂಗ್ರೆಸ್‌ಗೂ ಅಧಿವೇಶನ ಬೇಕಿರಲಿಲ್ಲ:

ಪ್ರಮುಖ ವಿಪಕ್ಷ ಕಾಂಗ್ರೆಸ್ ಕೂಡ ಅಧಿವೇಶನ ಮೊಟಕಿಗೆ ತಲೆ ಅಲ್ಲಾಡಿಸಿದೆ. ಡಿ 30 ಕ್ಕೆ ನೀರಾವರಿ ಹೋರಾಟ ನಿಗದಿಯಾದ ಕಾರಣಕ್ಕೆ ನಾಯಕರೆಲ್ಲ ಅಲ್ಲಿ ಭಾಗವಹಿಸಿ ಶಕ್ತಿ ಪ್ರದರ್ಶನ ಮಾಡಬೇಕಿರುವ ಕಾರಣ ತುಪ್ಪ ಜಾರಿ ರೊಟ್ಟಿಗೆ ಬಿದ್ದಂತಾಗಿದೆ.

ವಿಜಯಪುರದಲ್ಲಿ ಕೃಷ್ಣಾ ನೀರಾವರಿ ಯೋಜನೆಗಳಲ್ಲಿ ಬಿಜೆಪಿ ನೀತಿ ಖಂಡಿಸಿ ಬೃಹತ್ ಸಮಾವೇಶವನ್ನು ಕಾಂಗ್ರೆಸ್ ನಡೆಸುತ್ತಿದೆ. ಈ ಸಮಾವೇಶಕ್ಕೆ ಪಕ್ಷದ ರಾಜ್ಯಾಧ್ಯಕ್ಷ ಭಾಗವಹಿಸಿ ಕಲಾಪದಲ್ಲಿ ಇರುತ್ತೇವೆ ಚರ್ಚೆ ನಡೆಸಿ ಎಂದು ಒತ್ತಡ ಹೇರಬೇಕಿತ್ತು. ಆದರೆ ಕಾಂಗ್ರೆಸ್ ಸಮಸ್ಯೆಗಳ ಚರ್ಚೆಯ ಬದಲಾಗಿ ಚುನಾವಣೆಯಲ್ಲಿ ಗೆಲ್ಲುವುದು ಪ್ರಮುಖವಾದಂತೆ ಕಾಣುತ್ತಿದೆ.

ಉ.ಕ ನಿರ್ಲಕ್ಷ್ಯ, ಅದೇ ಭಾಷಣ, ಅದೇ ಭರವಸೆ. ಮತ್ತದೆ ನಿರಾಸೆ:

ಉತ್ತರ ಕರ್ನಾಟಕ ರೈತರ ಸಮಸ್ಯೆಗಳ ಕುರಿತು ಚರ್ಚೆ ನಡೆಸುವುದುದಾಗಿ ಆರಂಭದಲ್ಲಿ ಹೇಳಲಾಗಿತ್ತು. ಆದರೆ ಮೊದಲೆರಡು ದಿನ ಚರ್ಚೆಯ ಕಾವು ಜೋರಾಗಿತ್ತು ನಂತರದಲ್ಲಿ ಮೂರು ಪಕ್ಷಗಳ ಶಾಸಕರ ಗೈರಿನಲ್ಲಿ ಪ್ರಮುಖ ವಿಚಾರಗಳು ಚರ್ಚೆಯಾಗಲೇ ಇಲ್ಲ. ಚಳಿಗಾಲಕ್ಕೊಮ್ಮೆ ಬೆಳಗಾವಿಯತ್ತ ಮುಖ ಮಾಡುವ ಅಧಿಕಾರ ವ್ಯವಸ್ಥೆ, ಮತ್ತೆ ಬೆಂಗಳೂರಿಗೆ ಶಿಫ್ಟ್? ಆಗ್ತಿದೆ. ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಕಡತ ಸಾಗಿಸಿದ್ದು ಬಿಟ್ಟರೆ ಇನ್ನ್ಯಾವ ಸಮಸ್ಯೆಯ ಗಂಟನ್ನು ಬಿಚ್ಚಿ ಪರಿಹಾರದ ಮುಲಾಮು ನೀಡುವ ಕೆಲಸ ಆಗಲೆ ಇಲ್ಲ. ಅಧಿವೇಶನದ 8 ನೇ ದಿನ ಆಡಳಿತ ಪಕ್ಷದ ಉತ್ತರ ಕರ್ನಾಟಕ ಶಾಸಕರು ಹಾಗೂ ವಿಪಕ್ಷ ನಾಯಕ ಸಿದ್ಧರಾಮಯ್ಯ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಕುರಿತು ಚರ್ಚೆಯಾಗಬೇಕು ಎಂದಾಗ ಕೊನೆ ಗಳಿಗೆಯಲ್ಲಿ ಅವಕಾಶವನ್ನು ನೀಡಲಾಯಿತು.

ಬೆಳಗಾವಿ ಭಾಗದ ಕಳಸಾ ಬಂಡೂರಿ ನಾಲಾ ಯೋಜನೆಗೆ ಕೇಂದ್ರ ಸರಕಾರ ಸಮ್ಮತಿ ಸೂಚಿಸಿದೆ ಎಂದು ಮುಖ್ಯಮಂತ್ರಿಗಳು ಸದನದಲ್ಲಿ ಘೋಷಿಸಿದ ಸಮಾಧಾನ ಸಂಗತಿ. 32 ಟಿಎಂಸಿ ನೀರ ಸಿಗಬೇಕು ಆದರೆ ಕೇವಲ ನಾಲ್ಕು ಟಿಎಂಸಿ ಸಿಗುವ ಸಾಧ್ಯೆ ಇದೆ ಎಂದು ಹೇಳಲಾಗುತ್ತಿದೆ. ಹೊರತುಪಡಿಸಿ ಈ ಭಾಗದ ಕುರಿತು ಚರ್ಚೆಗಳು ಮತ್ತೆ ಗಂಟುಮೂಟೆ ಸೇರಿದವು. ಕರಗಾಂವ ಏತ ನೀರಾವರಿ ಯೋಜನೆ, ಮಹಾಲಕ್ಷ್ಮೀ ನೀರಾವರಿ ಯೋಜನೆ, ಕೃಷ್ಣಾ ನೀರಾವರಿ ಯೋಜನೆ ಸೇರಿದಂತೆ ಅನಕ ನೀರಾವರಿ ಸಮಸ್ಯೆಗಳಿವೆ. 371 ಜೆ ಕಲಂ ನಲ್ಲಿ ಅನೇಕ ದೋಷಗಳಿವೆ ಎಂದು ತಜ್ಞರು ಹೇಳುತ್ತಿದ್ದಾರೆ. ಈ ಕುರಿತು ಚರ್ಚೆ, ಸಮಿತಿ ರಚಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ರೈತರ ಹಲವು ಸಮಸ್ಯೆಗಳ ಬಗ್ಗೆ ಈ ಅಧಿವೇಶನದಲ್ಲಿ ಪರಿಹಾರ ಸಿಗಬಹುದು ಎಂದು ಅಂದಾಜಿಸಲಾಗಿತ್ತು. ಅತೀವೃಷ್ಠಿ ಮಳೆಯಿಂದಾಗಿ ಸಾವಿರಾರು ಹೆಕ್ಟೇರ್ ಭೂಮಿಯಲ್ಲಿ ಬೆಳೆಯಲಾಗಿದ್ದ ಹೆಸರು, ಅಲಸಂದೆ, ಉದ್ದು, ತೊಗರಿ ಬೆಳೆ, ಶೇಂಗಾ, ಸೈರ್ಯಕಾಂತಿ, ಭತ್ತದ ಬೆಳೆ ನಾಶವಾಗಿತ್ತು. ಉಕ ಭಾಗದ ವಿದ್ಯಾವಂತ ಯುವಕರು ನಿರುದ್ಯೋಗಿಗಳಾಗಿ ಅಲೆದಾಡುತ್ತಿದ್ದಾರೆ. ಇದನ್ನು ತಪ್ಪಿಸಲು ಯೋಜನೆಗಳನ್ನು ರೂಪಿಸಬೇಕಿತ್ತು. ಆದರೆ ಇದ್ಯಾವುದು ಚರ್ಚೆಗೆ ಬರದೆ ಖಾಸಗೀ ವಿವಿ ಮಸೂದೆಯನ್ನು ಜಾರಿ ಮಾಡಲು ಮುತುವರ್ಜಿವಹಿಸಿದ್ದು, ಸರಕಾರ ಹಾಗೂ ಶಾಸಕರು ಯಾರ ಪರ ಇದ್ದಾರೆ ಎಂಬುದಕ್ಕೆ ಹಿಡಿದ ಕನ್ನಡಿಯಾಗಿತ್ತು.

ಮೂಗಿಗೆ ತುಪ್ಪ:

ಬೆಳಗಾವಿ ಅಧಿವೇಶನ ಉತ್ತರ ಕರ್ನಾಟಕಕ್ಕೆ ಮೀಸಲು ಅಂತಾರೆ, ಕಳೆದ 09 ದಿನಗಳಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಚರ್ಚೆಗೆ ಸಿಕ್ಕಿದ್ದು ಕೊನೆಯ ದಿನದ ಕೊನೆಯ ಕ್ಷಣದಲ್ಲಿ. ಇದನ್ನು ಗಮನಿಸಿದರೆ, ಉತ್ತರ ಕರ್ನಾಟಕದ ಗತಿ-ಸ್ಥಿತಿ, ಕಥೆ ಇಷ್ಟೇನಾ? ಈ ಪ್ರಶ್ನೆ ಯಾರನ್ನು ಕೇಳಬೇಕು, ಯಾರ ಮುಂದೆ ಅಳಲು ತೋಡಿಕೊಳ್ಳಬೇಕು? ಎಂಬ ಪ್ರಶ್ನೆ ಆ ಭಾಗದ ಜನರದ್ದಾಗಿದೆ.

ಶಿಕ್ಷಣ, ನೀರಾವರಿ, ಮೂಲ ಸೌಲಭ್ಯ, ಅಭಿವೃದ್ಧಿ ವಿಚಾರದಲ್ಲಿ ಸರಕಾರಗಳ ವರ್ತನೆ, ಉದಾಸೀನತೆ ಈ ಭಾಗದ ಅಸಂಖ್ಯಾತರ ಮನದೊಳಗೆ ಇಂತಹ ಪ್ರಶ್ನೆಗಳನ್ನು ಮೂಡುವಂತೆ ಮಾಡಿದೆ. ನಿಮಗಾಗಿಯೇ 'ಸುವರ್ಣ ವಿಧಾನ ಸೌಧ' ಕಟ್ಟಿದ್ದೇವೆಂದು ಹೇಳುತ್ತಲೇ ಉತ್ತರ ಕರ್ನಾಟಕವನ್ನು ಮತ್ತೆ ಮತ್ತೆ ಕಡೆಗಣಿಸಲಾಗುತ್ತಿದೆ. ಅಭಿವೃದ್ಧಿ ಯೋಜನೆಗಳು ಕಡತಗಳಲ್ಲೇ ಅಣಕಿಸುತ್ತಿವೆ, ಇದ್ದ ಸೌಲಭ್ಯಗಳನ್ನು ಕಿತ್ತುಕೊಂಡು ಬೇರೆ ಕಡೆ ತೆಗೆದುಕೊಂಡು ಹೋಗುವ ಹುನ್ನಾರ ನಡೆಯುತ್ತಲೇ ಇದೆ. ವಿವಿಧ ಇಲಾಖೆಗಳಲ್ಲಿ ನೂರಾರು ಸಮಸ್ಯೆಗಳಿವೆ. ಆ ಭಾಗದ ಜನ ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. ಆದರೆ ಕೇವಲ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಲಾಗುತ್ತಿದೆ.

ನಂಜುಂಡಪ್ಪ ವರದಿಯ ಪ್ರಕಾರವೇ 114 ಹಿಂದುಳಿದ ತಾಲ್ಲೂಕುಗಳ ಪೈಕಿ 59 ತಾಲ್ಲೂಕುಗಳು ಉತ್ತರ ಕರ್ನಾಟಕದಲ್ಲಿಯೇ ಇವೆ. ಅದರಲ್ಲಿ 39 ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು. ಅವು ಎಲ್ಲವೂ ಉತ್ತರದಲ್ಲಿಯೇ ಇವೆ. ಬೆಂಗಳೂರು ಮತ್ತು ಮೈಸೂರು ಕಂದಾಯ ವಿಭಾಗದ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಹೋಲಿಸಿದರೆ ಉತ್ತರದ ಬೆಳಗಾವಿ ಮತ್ತು ಕಲ್ಬುರ್ಗಿ ಕಂದಾಯ ವಲಯಗಳಲ್ಲಿ ತಲಾವಾರು ಆದಾಯ ಈಗಲೂ ಕಡಿಮೆಯೇ ಇದೆ. ಒಂದು ಸಾರಿ ಒಂದು ಪ್ರದೇಶ ಹಿಂದುಳಿದುದು ಎಂಬ ತಲೆಪಟ್ಟಿ ಗಳಿಸಿಬಿಟ್ಟರೆ ಸಾಕು ಅಲ್ಲಿನ ಜನರು ಒರಟರು, ದಡ್ಡರು ಎಂಬ ಹಣೆಪಟ್ಟಿ ಹಚ್ಚಿಕೊಂಡು ಬಿಡುತ್ತಾರೆ. ಉತ್ತರ ಕರ್ನಾಟಕದ ಮಂದಿಗೆ ಈಗ ಆಗಿರುವುದೂ ಅದೇ. ಪ್ರತಿ ಬಾರಿಯೂ ಇಲ್ಲಿ ಅಧಿವೇಶನ ನಡೆದಾಗ ಉತ್ತರ ಕರ್ನಾಟಕ ಬದಲಾವಣೆಗಾಗಿ ನಡೆಯುವ ಅಧಿವೇಶನ ಎಂದು ಆಸೆಗಣ್ಣಿನಿಂದ ಜನ ಕಾಯುತ್ತಾರೆ. ಆದರೆ ಇಲ್ಲಿಯವರೆಗೆ 1% ರಷ್ಟಾದರೂ ಚರ್ಚೆ, ಜಾರಿ ನಡೆದಿದೆಯೇ ಎಂಬುದಕ್ಕೆ ದಾಖಲೆಯೂ ಇಲ್ಲ, ಉತ್ತರವೂ ಇಲ್ಲ.

ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಯ ದೂರದೃಷ್ಟಿ. ದಶಕಗಳಿಂದ ಹಾಗೆ ಉಳಿದಿರುವ ಹಲವು ಸಮಸ್ಯೆಗಳಿಗೆ ಶಾಶ್ವತ ಪರಿಹಾರದ ಆಶಾಭಾವ. ಪ್ರತಿವರ್ಷದಂತೆ ಕಾಲ ಉರುಳಿತು. ಸಿಗಬೇಕಿದ್ದ ಪರಿಹಾರ ಸಿಕ್ಕಿತಾ? ಸಮಸ್ಯೆಗಳು ಕೊನೆ ಆದ್ವಾ? ಸುವರ್ಣಸೌಧ ಕಟ್ಟಿದ ಉದ್ದೇಶ ಈಡೇರಿತಾ? ಈ ಪ್ರಶ್ನೆಗೆ ಸುವರ್ಣಸೌಧವೇ ಉತ್ತರ ಕೊಡಬೇಕು. 10 ದಿನ ನಡೆಯಬೇಕಿದ್ದ ಅಧಿವೇಶನ 9ನೇ ದಿನಕ್ಕೆ ಅಂತ್ಯ ಆಯ್ತು. ಅದೇ ಭಾಷಣ, ಅದೇ ಭರವಸೆ. ಮತ್ತದೆ ನಿರಾಸೆಯಲ್ಲಿ ಅಧಿವೇಶನ ನಡೆಯಿತು.

ಬೆಳಗಾವಿ ಅಂದಾಕ್ಷಣ ಅಸಡ್ಡ ತೋರುವ ಶಾಸಕರು, ಈ ಬಾರಿಯೂ ನಿರ್ಲಕ್ಷ್ಯ ಮುಂದುವರೆಸಿದ್ದಾರೆ. ಅಧಿವೇಶನ ಅಂತ್ಯವಾದ ಬಳಿಕ ಸರ್ಕಾರಕ್ಕೆ ಮತ್ತೆ ಮುಂದಿನ ಚಳಿಗಾಲಕ್ಕೆ ಈ ಸುವರ್ಣಸೌಧ ನೆನಪಾಗಲಿದೆ. ಮುಂಬರುವ ಹೊಸ ಸರ್ಕಾರವಾದ್ರೂ ಸುವರ್ಣಸೌಧದ ಉದ್ದೇಶವನ್ನ ಈಡೇರಿಸುವ ಸಾರ್ಥಕತೆಯನ್ನು ತೋರಬೇಕಿದೆ.

ಒಡೆದು ಆಳುವ ಯೋಜನೆಯಲ್ಲಿ ಸಹಕರಿಸಿದ್ದಕ್ಕೆ... ಪುಟ 2 ರಿಂದ

ಅವರು ಬ್ರಿಟಿಷ್ ಸರ್ಕಾರದೊಂದಿಗೆ ಗುಪ್ತ ಸಂಧಾನ ಸಭೆಗಳಲ್ಲಿ ಕೂಡತೊಡಗಿಕೊಂಡಿದ್ದರು ಎಂಬ ಅಂಶವನ್ನು ಭಿಡೆಯವರ ಪುಸ್ತಕ ಸ್ಪಷ್ಟಮಾಡಿತ್ತು. ಅದರಲ್ಲಿನ ವರದಿಗಳ ಪ್ರಕಾರ ಸಾವರ್ಕರ್ ಅವರು ಜುಲೈ 5, 1940 ರಂದು ವೈಸ್‌ರಾಯ್ ಅವರನ್ನು ಶಿಮ್ಲಾದಲ್ಲಿ ಭೇಟಿಯಾಗಿದ್ದರು:

(ವೈಸ್ ರೀಗಲ್ ಸಂದರ್ಶನ) ಹಿಂದೂ ಮಹಾಸಭಾದ ಅಧ್ಯಕ್ಷ, ವೀರ್ ಸಾವರ್ಕರ್ ಅವರು ಘನತೆವೆತ್ತ ವೈಸ್‌ರಾಯ್ ಅವರನ್ನು ಭೇಟಿ ಮಾಡಿ ಹೊರಬಂದ ನಂತರ ಸಂದರ್ಶನದ ವಿವರ ತಿಳಿಯಲು ಪತ್ರಿಕಾ ವರದಿಗಾರರು ಅವರನ್ನು ಸುತ್ತುವರೆದಿದ್ದರು. ಈ ಸಂದರ್ಶನದ ಮಾತುಗಳನ್ನು ಖಂಡಿತವಾಗಿ ರಹಸ್ಯವಾಗಿಡಲಾಗುವುದು ಎಂದು ತಾನು ಘನತೆವತ್ತ ವೈಸ್‌ರಾಯ್ ಅವರೊಡನೆ ಒಪ್ಪಿಕೊಂಡಿದ್ದೇನೆ ಎಂದು ವೀರ್ ಸಾವರ್ಕರ್ ತಿಳಿಸಿದರು.

ಸಭೆಯಲ್ಲಿ ನಡೆದಿರುವ ಏನನ್ನೂ ಯಾರೊಂದಿಗೂ, ಅವರ ಅನುಯಾಯಿಗಳೊಂದಿಗೆ ಸಹ ಅದರ ಮಾಹಿತಿಯನ್ನು ಹಂಚಿಕೊಳ್ಳಲು ಸಾವರ್ಕರ್ ಅವರು ಇಷ್ಟಪಡಲಿಲ್ಲ. ಇದನ್ನು ಕೂಡ ಆ ಪುಸ್ತಕದಲ್ಲಿ ಹೀಗೆ ವಿವರಿಸಲಾಗಿದೆ:

ಘನತೆವೆತ್ತ ವೈಸ್‌ರಾಯ್ ಅವರನ್ನು ಶುಕ್ರವಾರ ಜುಲೈ 5, 1940 ರಂದು ಸಂದರ್ಶನ ಮಾಡಿದ ನಂತರ ಹಿಂದೂ ಮಹಾಸಭಾದ ಅಧ್ಯಕ್ಷ, ನ್ಯಾಯವಾದಿ ವಿ.ಡಿ. ಸಾವರ್ಕರ್ ಅವರನ್ನು ಶಿಮ್ಲಾ ಸಾರ್ವಜನಿಕ ಸ್ವಾಗತ ಕಾರ್ಯಕ್ರಮದಲ್ಲಿ ಕೋರಿಕೊಂಡರು. ಆದರೆ ಪ್ರಮುಖವಾದ ರಾಜಕೀಯ ಸಂದರ್ಶನಗಳಿಂದಾಗಿ ಅವರಿಗೆ ಸಮಯ ಸಿಗಲಿಲ್ಲ. ಅವರು ನಿಲ್ದಾಣಕ್ಕೆ ಹೋಗುವ ದಾರಿಯಲ್ಲಿ ಕೇವಲ ಐದು ನಿಮಿಷಗಳ 'ದರ್ಶನ'ವನ್ನಷ್ಟೇ ಏರ್ಪಡಿಸಲಾಗಿತ್ತು. (ಮೂಲ ಪತ್ಯದ ಪ್ರಕಾರ)

ಬ್ರಿಟಿಷ್ ದೊರೆಗಳ ಒಡೆದು ಆಳುವ ಯೋಜನೆಯಲ್ಲಿ ಸಾವರ್ಕರ್ ಅವರು ಎಷ್ಟು ಮುಖ್ಯವಾಗಿದ್ದರು ಎಂಬುದು 1929 ರಲ್ಲಿ ವಿದೇಶಿ ದೊರೆಗಳಿಂದ ಸಾವರ್ಕರ್ ಅವರಿಗೆ ನಿವೃತ್ತಿ ವೇತನ ಮಂಜೂರು ಮಾಡುವುದರಿಂದ ಸ್ಪಷ್ಟವಾಗುತ್ತದೆ. ಕೇಂದ್ರ ಮಂಡಳಿ ಸದಸ್ಯರೊಬ್ಬರು ಸರ್ಕಾರದಲ್ಲಿ ವಿಚಾರಿಸಿದಾಗ ಸಾವರ್ಕರ್ ಅವರ ಅಧಿಕೃತ ಜೀವನಚರಿತ್ರೆಕಾರ ಕೀರ್ ಅವರು ಆ ಅಂಶವನ್ನು ಹೀಗೆ ಪುಷ್ಟೀಕರಿಸಿದರು:

ಸಾವರ್ಕರ್ ಅವರಿಂದ ನಿರ್ವಹಣೆಗಾಗಿ ಯಾವುದಾದರೂ ಅರ್ಜಿಯನ್ನು ಸರ್ಕಾರ ಸ್ವೀಕರಿಸಿದೆಯೆ ಎಂದಾಗ, ಸಾವರ್ಕರ್ ಅವರು ನಮ್ಮ ಬಳಿ ಬಂದರೆ ಪರಿಗಣಿಸಲಾಗುವುದು ಎಂದು ಸರ್ಕಾರ ಹೇಳಿತು. ತದನಂತರ, ರತ್ನಗಿರಿಯ ಜಿಲ್ಲಾ ಮ್ಯಾಜಿಸ್ಟ್ರೇಟ್ ಮಾಸಿಕ ನಿರ್ವಹಣೆಗಾಗಿ ರೂ.50 ನ್ನು ನಿಗದಿಪಡಿಸಿದರು. ಆ ನಂತರ ಅದನ್ನು ರೂ.60 ಕ್ಕೆ ಏರಿಸಿದರು.

1920 ರಲ್ಲಿ ಅದು ಸಣ್ಣ ಮೊತ್ತವೇನಲ್ಲ.

(ಮುಂದುವರೆಯುವುದು....)

ಸತ್ವಹೀನತೆಯಿಂದ ತತ್ವಹೀನತೆಯೆಡೆಗೆ–ಸಾಹಿತ್ಯಕ ಪಯಣ

ಅಕ್ಷರ ಜಾತ್ರೆ ಎಂದೇ ಪರಿಗಣಿಸಲಾಗುವ ಸಾಹಿತ್ಯ ಪರಿಷತ್ತು ನಡೆಸುವ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಆಯ್ಕೆ ಮತ್ತು ಆದ್ಯತೆಗಳು ಏನಿರಬೇಕು? ಪ್ರತೀ ವರ್ಷ ನಡೆಯುವ ಈ ಸಮ್ಮೇಳನಗಳಲ್ಲಿ ನಾವು ಕಾಣ ಬಯಸುವುದು ಅಕ್ಷರ ಸಾಹಿತ್ಯದ ಅತ್ಮರತಿಯನ್ನೋ ಅಥವಾ ಸಾಹಿತ್ಯ ಪಯಣದ ಆತ್ಮಾವಲೋಕನವನ್ನೋ ಅಥವಾ ಭವಿಷ್ಯದ ದಿಕ್ಸೂಚಿಯನ್ನೋ?

ನಾ ದಿವಾಕರ

ಜಾತಿ ಶ್ರೇಣೀಕರಣ, ಬಹುಸಾಂಸ್ಕೃತಿಕ ವೈವಿಧ್ಯತೆ ಮತ್ತು ಬಹುಧರ್ಮೀಯ ನೆಲೆಗಳನ್ನು ಹೊತ್ತು ಶತಮಾನಗಳಷ್ಟು ಮುನ್ನಡೆದಿರುವ ಭಾರತದಂತಹ ದೇಶದಲ್ಲಿ ಸಾಹಿತ್ಯ ಮತ್ತು ಕಲೆ ತಮ್ಮದೇ ಆದ ಬೌದ್ಧಿಕ–ಲೌಕಿಕ–ನೈತಿಕ ಜವಾಬ್ದಾರಿಯನ್ನು ಹೊತ್ತಿರುವುದು ಅತ್ಯವಶ್ಯ. ದೇಶದ ಬಹುಸಂಖ್ಯಾತ ಜನತೆಗೆ ಅಲಭ್ಯವಾಗಿದ್ದ ಅಕ್ಷರ ಸಾಹಿತ್ಯಕ್ಕೆ ಪ್ರತಿಯಾಗಿ ಮೂಡಿಬಂದಂತಹ ಜನಪದ ಸಾಹಿತ್ಯ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ನಿರ್ಲಕ್ಷ್ಯಕ್ಕೊಳಗಾದ ಜನಸಮುದಾಯಗಳಿಗೆ ಬದುಕು ಬವಣೆಗಳನ್ನು ಬಿಂಬಿಸಿತ್ತು. ಶತಮಾನಗಳ ಇತಿಹಾಸ ಇರುವ ಈ ಜನಪದ ಪರಂಪರೆ ಮತ್ತು ಮೌಖಿಕ ಸಾಹಿತ್ಯದ ನೆಲೆಗಳನ್ನು ಇಂದಿಗೂ ಸಹ ವಿಸ್ತರಿಸುತ್ತಲೇ ಬರುತ್ತಿರುವ ಆಧುನಿಕ ಸಮಾಜ, ಸಮಾಜದ ಬೌದ್ಧಿಕ ಫಲವತ್ತತೆಯನ್ನೂ ಸಹ ಈ ನೆಲೆಗಳಿಂದಲೇ ಗುರುತಿಸಬೇಕಾಗಿದೆ. ಈ ಪ್ರಯತ್ನದ ನಡುವೆಯೇ ವರ್ತಮಾನದ ಬದುಕಿಗೆ ಹತ್ತಿರವಾಗುವ ಅಕ್ಷರ ಸಾಹಿತ್ಯದ ಹಲವು ರೂಪಗಳು ಸಾಂಪ್ರದಾಯಿಕ ಸಮಾಜಕ್ಕೆ ಮುಖಾಮುಖಿಯಾಗುತ್ತಲೇ, ಆಧುನಿಕ ಭವಿಷ್ಯದೊಡನೆ ಅನುಸಂಧಾನ ಮಾಡಬೇಕಾಗುತ್ತದೆ. ಅಕ್ಷರ ಸಾಹಿತ್ಯದ ಭಾಷೆ ಮತ್ತು ಭಾಷಿಕರ ನಡುವೆ ಇರುವ ಅಮೂರ್ತ ಸಂಬಂಧಗಳು, ಭೌಗೋಳಿಕ ರಾಜ್ಯ ಮತ್ತು ಭಾಷಿಕ ಸಮುದಾಯಗಳ ನಡುವೆ ಇರುವ ಸೂಕ್ಷ್ಮ ಸಂಬಂಧಗಳು, ಆಡಳಿತ ವ್ಯವಸ್ಥೆ ಮತ್ತು ಜನತೆಯ ಸಾಮಾಜಿಕ–ಸಾಂಸ್ಕೃತಿಕ ನೆಲೆಗಳ ನಡುವೆ ಇರುವ ದೈನಂದಿನ ಬದುಕಿನ ಸವಾಲುಗಳು, ಇವೆಲ್ಲವನ್ನೂ ಗಮನಿಸುತ್ತಲೇ ಸಾಮಾನ್ಯ ಜನತೆಯ ಬದುಕು ಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ ಎದುರಾಗಬಹುದಾದ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಸವಾಲುಗಳಿಗೆ ಮಾನವೀಯ ಸ್ಪರ್ಷ ಮತ್ತು ಸಮನ್ವಯತೆಯ ಆಯಾಮವನ್ನು ನೀಡುವ ಜವಾಬ್ದಾರಿಯೂ ಅಕ್ಷರ ಸಾಹಿತ್ಯ ಲೋಕದ ಮೇಲಿರುತ್ತದೆ. ಜನಪದ ಸಾಹಿತ್ಯ ಸಹಜವಾಗಿಯೇ ಈ ಜವಾಬ್ದಾರಿಯನ್ನು ನಿಭಾಯಿಸುತ್ತದೆ ಏಕೆಂದರೆ ಅದು ಜನಸಮೂಹಗಳ ಗರ್ಭದೊಳಗಿಂದಲೇ ಉಗಮಿಸುತ್ತದೆ. ಬಾಹ್ಯ ಸಮಾಜದಿಂದ ಉಗಮಿಸುವ ಅಕ್ಷರ ಸಾಹಿತ್ಯ ಎಚ್ಚರಿಕೆಯಿಂದಲೇ ಈ ಹೊಣೆಗಾರಿಕೆಯನ್ನು ನಿಭಾಯಿಸಬೇಕಾಗುತ್ತದೆ. 'ಕನ್ನಡ ಸಾಹಿತ್ಯ ಪರಿಷತ್ತು' ಎನ್ನುವ ಒಂದು ಪ್ರಾತಿನಿಧಿಕ ಸಂಸ್ಥೆಯ ಸ್ಥಾಪನೆಯನ್ನು ಈ ಎಲ್ಲ ಆಯಾಮಗಳಿಂದಲೂ ಗಮನಿಸಬೇಕಿದೆ.

ತನ್ನ ಶತಮಾನದ ಇತಿಹಾಸದಲ್ಲಿ ಪರಿಷತ್ತು ಈ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಿದೆಯೇ ಎಂದು ಪ್ರಶ್ನಿಸಿಕೊಂಡಾಗ ಪ್ರಶ್ನೆಯೇ ಜಟಿಲ ಎನಿಸಿಬಿಡುತ್ತದೆ. ಏಕೆಂದರೆ ಕಳೆದ ಕೆಲವು ದಶಕಗಳಲ್ಲಿ ಸಾಹಿತ್ಯ ಪರಿಷತ್ತು ನಡೆದು ಬಂದ ಹಾದಿಯನ್ನು ಗಮನಿಸಿದಾಗ, ಬಾಹ್ಯ ಸಮಾಜದ ರಾಜಕೀಯ–ಸಾಂಸ್ಕೃತಿಕ ವಿದ್ಯಮಾನಗಳೊಂದಿಗೇ, ಮಾರುಕಟ್ಟೆ ಆರ್ಥಿಕತೆ, ಕಾರ್ಪೋರೇಟ್ ಸಂಸ್ಕೃತಿ ಹಾಗೂ ಬದಲಾಗುತ್ತಿರುವ ಜಾತಿ–ಮತ ಕೇಂದ್ರಿತ ಸಾಮಾಜಿಕ ಪಲ್ಲಟಗಳಿಂದ ಪ್ರಭಾವಿತವಾಗಿರುವ ಸಾಹಿತ್ಯ ಪರಿಷತ್ತುತನ್ನ ಮೂಲ ನೆಲೆಯಿಂದ ಬಹುದೂರ ಸಾಗಿರುವುದು ಸ್ಪಷ್ಟವಾಗುತ್ತದೆ. ಅಧಿಕಾರ ರಾಜಕಾರಣ ಮತ್ತುಇದಕ್ಕೆ ಹೊಂದಿಕೊಂಡೇ ಮುನ್ನಡೆಯುವ ಆರ್ಥಿಕತೆ ಸಾಹಿತ್ಯ ಪರಿಷತ್ತಿನ ಪ್ರತೀ ಹೆಜ್ಜೆಯನ್ನೂ ನಿಯಂತ್ರಿಸುತ್ತಿರುವುದು, ನಿರ್ಬಂಧಿಸುತ್ತಿರುವುದು ಸುಸ್ಪಷ್ಟವಾಗಿ ಕಾಣುತ್ತದೆ. ತಾಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೆ ಸಾಹಿತ್ಯ ಪರಿಷತ್ತಿಗೆ ನಡೆಯುವ ಚುನಾವಣೆಗಳಲ್ಲಿ ಇದು ಸ್ಪಷ್ಟವಾಗುತ್ತದೆ. ಹಾವೇರಿಯಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಪಟ್ಟಿಯನ್ನು ನೋಡಿದರೆ ಇದು ಮತ್ತಷ್ಟು ಸ್ಪಷ್ಟವಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತು ಸತ್ವಹೀನವಾಗಲು ಇದೂ ಒಂದು ಕಾರಣ. ಇದಕ್ಕೂ ದೀರ್ಘ ಇತಿಹಾಸವಿದೆ.

ಅಕ್ಷರ ಜಾತ್ರೆ ಎಂದೇ ಪರಿಗಣಿಸಲಾಗುವ ಸಾಹಿತ್ಯ ಪರಿಷತ್ತು ನಡೆಸುವ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಆಯ್ಕೆ ಮತ್ತು ಆದ್ಯತೆಗಳು ಏನಿರಬೇಕು? ಪ್ರತೀ ವರ್ಷ ನಡೆಯುವ ಈ ಸಮ್ಮೇಳನಗಳಲ್ಲಿ ನಾವು ಕಾಣ ಬಯಸುವುದು ಅಕ್ಷರ ಸಾಹಿತ್ಯದ ಅತ್ಮರತಿಯನ್ನೋ ಅಥವಾ ಸಾಹಿತ್ಯ ಪಯಣದ ಆತ್ಮಾವಲೋ ಕನವನ್ನೋ ಅಥವಾ ಭವಿಷ್ಯದ ದಿಕ್ಸೂಚಿಯನ್ನೋ? 50 ವರ್ಷಗಳ ಹಿಂದೆ ನಡೆದ ಸಮ್ಮೇಳನದ ಆದ್ಯತೆ, ಆಶಯಗಳೂ, ವರ್ತಮಾನದ ಆದ್ಯತೆ, ಆಶಯಗಳೂ ಒಂದೇ ಆಗಿರಬೇಕೇ? ತನ್ನ ಸುತ್ತಲಿನ ಪಲ್ಲಟಗಳನ್ನು ಮತ್ತುತಾನು ಪ್ರತಿನಿಧಿಸುವ ಕೋಟ್ಯಂತರ ಜನರ ಬದುಕನ್ನು ಬಾಧಿಸುತ್ತಿರುವ ಸಾಮಾಜಿಕ–ಸಾಂಸ್ಕೃತಿಕ ವ್ಯತ್ಯಯಗಳನ್ನು ಸಾಹಿತ್ಯಕ ವಲಯ ಹೇಗೆ ಗ್ರಹಿಸುತ್ತಿದೆ, ಈ ಹತಾಶೆ ಮತ್ತು ಆಕ್ರೋಶಗಳಿಗೆ ವರ್ತಮಾನದ ಅಕ್ಷರ ಸಾಹಿತ್ಯ ಹೇಗೆ ಸ್ಪಂದಿಸುತ್ತಿದೆ ಎನ್ನುವ ಜಟಿಲ–ಸಂಕೀರ್ಣ ಪ್ರಶ್ನೆಗಳು 'ಅಖಿಲ ಭಾರತ ಸಾಹಿತ್ಯ ಸಮ್ಮೇಳನ'ವನ್ನು ಕಾಡಲೇಬೇಕಲ್ಲವೇ? ಈ ಶೋಧನೆಯನ್ನು ನಡೆಸುವ ವ್ಯಕ್ತಿಗತ ಜವಾಬ್ದಾರಿಯನ್ನು ಲೇಖಕರು, ಕವಿಗಳು, ನಾಟಕಕಾರರು ನಿಭಾಯಿಸುತ್ತಿದ್ದರೂ, ಸಾಮಾಜಿಕ ಸ್ವಾಸ್ಥ್ಯ, ಸಮನ್ವಯ ಮತ್ತು ಸೌಹಾರ್ದವನ್ನು ಕಾಪಾಡಲು ಬಯಸುವ 'ಸಾಹಿತ್ಯ ಲೋಕ/ವಲಯ' ಸಮಷ್ಟಿ ನೆಲೆಯಲ್ಲಿ ಹೇಗೆ ನಿರ್ವಹಿಸುತ್ತಿದೆ. ಕನ್ನಡ ಪಂಥಕ್ಕೆ ಸೇರಿದ್ದು" ಎಂದು ಹೇಳಿದ್ದಾರೆ.

ಸಾಹಿತ್ಯ ಮತ್ತು ವಿಶಾಲ ಸಮಾಜದ ನಡುವಿನ ಸೂಕ್ಷ್ಮ ಕೊಂಡಿಯಲ್ಲಿ ಸಾಕಷ್ಟು ಒಳಬಿರುಕುಗಳಿವೆ

ಈ 'ಕನ್ನಡ ಪಂಥ'ದ ವ್ಯಾಪ್ತಿಯಲ್ಲಿ ನಾವು ನೋಡಬೇಕಿರುವುದು ಕೇವಲ ಗ್ರಾಂಥಿಕ ಅಕ್ಷರಗಳನ್ನಲ್ಲ ಎಂಬ ವಿವೇಚನೆಯೂ ನಮಗಿರಬೇಕಲ್ಲವೇ? ಅಕ್ಷರಗಳಲ್ಲಿ ಮೂಡುವ ಅಭಿವ್ಯಕ್ತಿಗಳನ್ನೂ ಮೀರಿದ ಒಂದು ಸಾಮಾಜಿಕ–ಸಾಂಸ್ಕೃತಿಕ ಜಗತ್ತು ನಮ್ಮ ಸುತ್ತಲೂ ಅನಾವರಣಗೊಳ್ಳುತ್ತಿದೆಯಲ್ಲವೇ? ಈ ಜಗತ್ತಿನಲ್ಲಿ ಢಾಳಾಗಿ ಕಾಣುತ್ತಿರುವ ತಾರತಮ್ಯಗಳು, ದೌರ್ಜನ್ಯಗಳು, ಅಸಮಾನತೆಯ ಮತ್ತು ಶೋಷಣೆಯ ನೆಲೆಗಳನ್ನು ಸಾಹಿತ್ಯ ಲೋಕದ ಪುಟಗಳಲ್ಲಿ ದಾಖಲಿಸಲಾಗುತ್ತಿದೆಯೇ? 'ಇಲ್ಲ' ಎಂದಾದರೆ ಏಕೆ ಎಂಬ ಪ್ರಶ್ನೆ ನಮ್ಮನ್ನು ಕಾಡಬೇಕಲ್ಲವೇ? ಹಾಗೆಯೇ ದಾಖಲಾಗದೆ ಉಳಿದು ಹೋದ ಸಮಾಜವನ್ನು ಶೋಧಿಸಿ ವಾಸ್ತವತೆಯನ್ನು ಹೊರಗೆಳೆಯುವ ಒಂದು ವೇದಿಕೆಯಾಗಿ 'ಸಾಹಿತ್ಯ ಸಮ್ಮೇಳನ' ರೂಪುಗೊಳ್ಳಬೇಕಲ್ಲವೇ? "ಕನಕನ–ಅಲ್ಲಮ–ಬಸವರ–ಕುವೆಂಪು–ಅಂಬೇಡ್ಕರರ ದೃಷ್ಟಿಯಲ್ಲಿಮಹಿಳೆ" ಎಂಬ ವಿಷಯವನ್ನು ಚರ್ಚಿಸಬೇಕಾದ್ದೇನೋ ಹೌದು. ಚಾರಿತ್ರಿಕವಾಗಿ ಸಮಾಜವನ್ನು ಅರಿಯಲು ಇದು ಅವಶ್ಯಕ. ಆದರೆ ಅದಕ್ಕಿಂತಲೂ ಮುಖ್ಯವಾಗಿ ಈ ಮಹನೀಯರ ಸಾಂಸ್ಕೃತಿಕ–ರಾಜಕೀಯ–ಸಾಮಾಜಿಕ ವಾರಸುದಾರರ, ಕಲ್ಪಿತ ಉತ್ತರಾಧಿಕಾರಿಗಳ ಸಮಾಜದಲ್ಲಿ ವರ್ತಮಾನದ ಮಹಿಳೆಯನ್ನು ಹೇಗೆ ಕಾಣಲಾಗುತ್ತಿದೆ ಎಂಬ ಪ್ರಶ್ನೆ ನಮ್ಮನ್ನು ಕಾಡಬೇಕಿದೆ. ಹಾಗೆ ಕಾಡಿದಾಗ ನಮ್ಮ ಗಮನ ಸಹಜವಾಗಿಯೇ ಅಧ್ಯಾತ್ಮ ಕೇಂದ್ರಗಳಲ್ಲಿ ದೌರ್ಜನ್ಯಕ್ಕೊಳಗಾದ ಅಪ್ರಾಪ್ತ ವಯಸ್ಕ ಬಾಲಕಿಯರತ್ತ ಹೊರಳುತ್ತದೆ. ಇದೇ ಸೂತ್ರವನ್ನು ಅಲ್ಪಸಂಖ್ಯಾತಸಮುದಾಯಕ್ಕೂಅನ್ವಯಿಸಬಹುದು, ದಲಿತ–ಅಸ್ಪೃಶ್ಯ–ಶೋಷಿತ ಸಮುದಾಯಗಳಿಗೂ ಅನ್ವಯಿಸಬಹುದು.



ದಿನನಿತ್ಯ ನಮಗೆ ಎದುರಾಗುತ್ತಿರುವ ಸಾಮಾಜಿಕ ಕ್ರೌರ್ಯ ಮತ್ತು ಸಾಂಸ್ಕೃತಿಕ ದಬ್ಬಾಳಿಕೆಗಳಿಗೂ ಈ ಸಮುದಾಯಗಳಿಗೆ ಎದುರಾಗುತ್ತಿರುವ ಸವಾಲುಗಳಿಗೂ ಇರುವ ಸೂಕ್ಷ್ಮ ಸಂಬಂಧಗಳನ್ನು ಹೊರಗೆಳೆಯುವ ಪ್ರಯತ್ನ ಸಾಹಿತ್ಯ ಲೋಕದಿಂದ ನಡೆಯುತ್ತಿದೆಯೇ ಎಂಬ ಪ್ರಶ್ನೆ 'ಅಖಿಲ ಭಾರತ ಸಮ್ಮೇಳನದಲ್ಲಿ' ಚರ್ಚೆಗೊಳಗಾಗ ಬೇಕಲ್ಲವೇ? ಪ್ರಾತಿನಿಧ್ಯದ ಪ್ರಶ್ನೆ ಇಲ್ಲಿ ಮುನ್ನೆಲೆಗೆ ಬರುತ್ತದೆ. ಎಡ–ಬಲ ಇತ್ಯಾದಿ ಪಂಥಗಳ ಲೌಕಿಕತೆಯನ್ನು ಹೊರಗಿಟ್ಟು ನೋಡಿದಾಗಲೂ, ಈ ಸಂಕೀರ್ಣ ಸಮಸ್ಯೆಗಳನ್ನು 'ಕನ್ನಡ ಪಂಥ'ದ ವಾರಸುದಾರರ ಮುಂದಿರಿಸಲಾದರೂ ಸಾಮುದಾಯಿಕ ಪ್ರಾತಿನಿಧ್ಯ ಅವಶ್ಯವಲ್ಲವೇ? ಪ್ರಾತಿನಿಧ್ಯದ ಭಿನ್ನ ಆಯಾಮಗಳ ಸರ್ ಮಿರ್ಜಾ ಇಸ್ಮಾಯೀಲ್ ಅವರ ಭಾವಚಿತ್ರ, ಸಂತ ಶಿಶುನಾಳ ಷರೀಫರ ಹೆಸರಿನ ವೇದಿಕೆ ಇವೆರಡನ್ನೂ ಮುಸ್ಲಿಮ್ ಸಮುದಾಯದ ಪ್ರಾತಿನಿಧಿಕ ಸಂಕೇತಗಳಾಗಿ ಬಿಂಬಿಸುವ ಮಹೇಶ್ ಜೋಷಿಯವರ ಆಲೋಚನಾ ಲಹರಿಯೇ ಪ್ರಶ್ನಾರ್ಹವಾಗಿದೆ. ಷರೀಫರು ಮುಸ್ಲಿಮರ ಪ್ರತಿನಿಧಿಯಾಗಿರಲಿಲ್ಲ, ಬದಲಾಗಿ ಕರ್ನಾಟಕದ ಸಮನ್ವಯ ಸಂಸ್ಕೃತಿಯ ಪ್ರತಿನಿಧಿಯಾಗಿದ್ದರು. ಈ ಸಮನ್ವಯ ಸಂಸ್ಕೃತಿ ಹಂತಹಂತವಾಗಿ ಅವನತಿ ಹೊಂದುತ್ತಿರುವ ಸಂದರ್ಭದಲ್ಲಿ, ಸಮನ್ವಯದ ನೆಲದಲ್ಲೇ ಸಮ್ಮೇಳನ ನಡೆಯುತ್ತಿದೆ.

ವರ್ತಮಾನ ಸಮಾಜದಲ್ಲಿ ಮುಸ್ಲಿಮ್ ಸಮುದಾಯದ ತಲ್ಲಣಗಳನ್ನು ಸಮ್ಮೇಳನದ ವೇದಿಕೆಯಲ್ಲಿ ಪ್ರಸ್ತುತ ಪಡಿಸುವ ವ್ಯಕ್ತಿಯ ಪ್ರಾತಿನಿಧ್ಯಕ್ಕೂ, ಷರೀಫರ ಚಾರಿತ್ರಿಕ ನೆಲೆಗೂ ಇರುವ ಅಂತರವನ್ನು ಗ್ರಹಿಸದಷ್ಟು ಅಸೂಕ್ಷ್ಮವಾಗಿಬಿಟ್ಟಿದ್ದೇವೆಯೇ? ವರ್ತಮಾನದ ಸಮಾಜದಲ್ಲಿ ನಡೆಯುತ್ತಿರುವ ಅಸ್ಪೃಶ್ಯತೆ, ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ, ದಬ್ಬಾಳಿಕೆ, ಜಾತಿ ತಾರತಮ್ಯಗಳು ಮತ್ತು ಅಲ್ಪಸಂಖ್ಯಾತರನ್ನು ಗುರಿಯಾಗಿರಿಸಿದ ದ್ವೇಷ ರಾಜಕಾರಣ ವ್ಯಾಪಿಸಿರುವ ಅಸ್ಪೃಶ್ಯತೆ, ಮಳವಳ್ಳಿಯ ಹಾಸ್ಟೆಲಿನಿಂದ ಚಿತ್ರದುರ್ಗದ ಮುರುಘಾಮಠದವರೆಗೆ ವ್ಯಾಪಿಸಿರುವ ಲೈಂಗಿಕ ದೌರ್ಜನ್ಯ, ಕರಾವಳಿಯಿಂದ ಕೋಲಾರದ ಗಡಿಯವರೆಗೂ ವ್ಯಾಪಿಸಿರುವ ಮತದ್ವೇಷದ ಚಟುವಟಿಕೆಗಳು ಇವೆಲ್ಲವೂ ಕನ್ನಡ ಜನತೆಯನ್ನು ಕಾಡಬೇಕಿರುವ ಜಟಿಲ ಪ್ರಶ್ನೆಗಳು. ಸಾಹಿತ್ಯಕ ನೆಲೆಯಲ್ಲಿ ಈ ಬೆಳವಣಿಗೆಗಳನ್ನು ಹೇಗೆ ವ್ಯಾಖ್ಯಾನಿಸಬೇಕು? ಇಲ್ಲಿ ಸಾಹಿತ್ಯ ಸಮ್ಮೇಳನದ ವೇದಿಕೆ ಮತ್ತು ಅಲ್ಲಿನ ಪ್ರಾತಿನಿಧಿಕ ಪ್ರಶ್ನೆಗಳು ಮುನ್ನೆಲೆಗೆ ಬರುತ್ತವೆ. ಸ್ತ್ರೀಸಂವೇದನೆ, ಲಿಂಗಸೂಕ್ಷ್ಮತೆ, ಜಾತಿ ಸೂಕ್ಷ್ಮತೆ ಮತ್ತು ಮತೀಯ ಸಮನ್ವಯತೆಯ ಜ್ವಲಂತ ಸವಾಲುಗಳನ್ನು ಸಮರ್ಪಕವಾಗಿ ಪ್ರತಿಧ್ವನಿಸುವ ಒಂದು ವೇದಿಕೆಯಾಗಿ ಸಾಹಿತ್ಯ ಸಮ್ಮೇಳನ ಹೊರಹೊಮ್ಮಬೇಕಾದರೆ, ಷರೀಫಜ್ಜನ ಹೆಸರು ಆಲಂಕಾರಿಕವಾಗಿ ಮಾತ್ರವೇ ಕಾಣಬಹುದಷ್ಟೇ.

ಸಮುದಾಯಗಳ ಒಡಲಾಳದ ತಲ್ಲಣಗಳನ್ನು ಹೃದಯ ಸ್ಪರ್ಶಿಯಾಗಿ ಸಮಾಜದ ಮುಂದಿಡುವ ಸಾಹಿತ್ಯಕ ಅವಕಾಶವಾಗಿ 'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ' ವನ್ನು ಪರಿಗಣಿಸುವುದೇ ಆದರೆ, ಸಾಮುದಾಯಿಕ ಪ್ರಾತಿನಿಧ್ಯವೂ ಮುಖ್ಯವಾಗಿ ಕಾಣುವುದು ಸಹಜ. ಇಲ್ಲವಾದರೆ ಮೇಲ್ನೋಟದ ವ್ಯಾಖ್ಯಾನಗಳು, ತೇಲ್ನೋಟದ ವಿಶ್ಲೇಷಣೆಗಳು ಗಾಳಿಯಲ್ಲಿ ಹಾರಿ ಹೋಗುವಂತಿರುತ್ತವೆ. ಈ ಪ್ರಾತಿನಿಧಿತ್ವದೊಂದಿಗೇ, 'ಕನ್ನಡ ಪಂಥ'ವನ್ನು ಪ್ರತಿನಿಧಿಸುವ ಒಂದು ಸಾಹಿತ್ಯಕ ಭೂಮಿಕೆಯಾಗಿ 'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ'ವು ಕನ್ನಡಿಗರು ಎದುರಿಸುತ್ತಿರುವ ಸಮಕಾಲೀನ ಸವಾಲುಗಳು ಮತ್ತು ಜೀವನೋ ಪಾಯದ ಜ್ವಲಂತ ಬಿಕ್ಕಟ್ಟುಗಳನ್ನೂ ಗಮನಿಸಬೇಕಿದೆ. ಯುವ ಸಮೂಹ, ಮಹಿಳೆಯರು, ಭಾಷಿಕ ಮತ್ತು ಮತೀಯ ಅಲ್ಪಸಂಖ್ಯಾತರು ಎದುರಿಸುತ್ತಿರುವ ಸಮಸ್ಯೆಗಳನ್ನು,ಸಮಾಜವನ್ನುದಶದಿಕ್ಕುಗಳಿಂದಲೂ ಒತ್ತರಿಸಿಕೊಂಡು ಬರುತ್ತಿರುವ ನವಉದಾರವಾದ–ಕಾರ್ಪೋರೇಟ್ ಮಾರುಕಟ್ಟೆ ಆರ್ಥಿಕತೆ–ವಾಣಿಜ್ಯೀಕರಣದ ಅಪಾಯಗಳನ್ನು ಹೊರಗಿಟ್ಟು ಚರ್ಚಿಸಲಾಗುವುದಿಲ್ಲ.

ಹೆಚ್ಚಾಗುತ್ತಿರುವ ಅಸ್ಪೃಶ್ಯತೆ, ಮಹಿಳಾ ದೌರ್ಜನ್ಯ, ಮತೀಯ ದ್ವೇಷದ ಕ್ರೌರ್ಯಗಳಿಗೂ, ವಿಸ್ತರಿಸುತ್ತಿರುವ ಬಂಡವಾಳಶಾಹಿ ಆರ್ಥಿಕ ಬಾಹುಗಳಿಗೂ ಸಂಬಂಧ ಇರುವುದನ್ನು ಸಹ ಗಮನಿಸಬೇಕಾಗುತ್ತದೆ. ಆಗ ಮಾತ್ರವೇ 'ಕನ್ನಡ ಪಂಥ' ಎನ್ನುವ ಪದಪುಂಜವೂ ಪ್ರಾತಿನಿಧಿಕವಾಗಿ ಅರ್ಥಪೂರ್ಣವಾಗುತ್ತದೆ. ಇಲ್ಲವಾದರೆ ಈ ಪಂಥವೂ ಯಾವುದೋ ಒಂದು ಸ್ಥಾಪಿತ ಪಂಥದೊಳಗೆ ಹೊಕ್ಕು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಸಾಹಿತ್ಯಕವಾಗಿ ಸತ್ವಹೀನವಾಗಿರುವ ಸಾಹಿತ್ಯ ಪರಿಷತ್ತು ಈ ಬೆಳವಣಿಗೆಗಳ ನಡುವೆ ತತ್ವಹೀನವಾಗುತ್ತಿರುವುದಕ್ಕೆ ಈ ವಿದ್ಯಮಾನವೂ ಕಾರಣವಾಗಿದೆ.

ಬೆಂಗಳೂರಿನಲ್ಲಿ ನಡೆಯುತ್ತಿರುವ ಜನ ಸಾಹಿತ್ಯ ಮೇಳವನ್ನು ಈ ವಿಭಿನ್ನ ಆಯಾಮಗಳಿಂದ ನೋಡಬೇಕಿದೆ. ಅದು ಪರ್ಯಾಯ ಸಮ್ಮೇಳನ ಅಲ್ಲ, ಪ್ರತಿರೋಧದ ಸಮ್ಮೇಳನವೂ ಅಲ್ಲ. ಬದಲಾಗಿ ಕುವೆಂಪು ಪ್ರತಿಪಾದಿಸಿದ ವಿಶ್ವಮಾನವತೆ ಮತ್ತು ಸಮನ್ವಯತೆ ಸಂದೇಶದ ವಿಶಾಲ ವ್ಯಾಪ್ತಿಯನ್ನು, 'ಕನ್ನಡ ಪಂಥ'ವನ್ನು ಪ್ರತಿನಿಧಿಸುವ ಜನಸಾಮಾನ್ಯರಿಗೆ ತಲುಪಿಸುವುದು ಈ ಸಮ್ಮೇಳನದ ಉದ್ದೇಶವಾಗಬೇಕಿದೆ/ಆಗಿದೆ.

ಕೃಪೆ: ವಾರ್ತಾಭಾರತಿ

ಹೊಸ ವರುಷದ ಆಶಯ

ಹಿಂದುತ್ವ–ಕಾರ್ಪೊರೇಟ್ ಆಡಳಿತವನ್ನು ಒಗ್ಗಟ್ಟಿನಿಂದ ಎದುರಿಸೋಣ

ಈಗಷ್ಟೇ ಮುಗಿದಿರುವ 2022ನೇ ವರ್ಷದ ಬಗ್ಗೆ ಒಂದು ಹಿನ್ನೋಟ ಬೀರಿದಾಗ ಭಾರತವು 2020 ಮತ್ತು 2021ರಲ್ಲಿ ಮುಳುಗಿದ್ದ ಆರ್ಥಿಕ ದುಸ್ಥಿತಿಯಿಂದ ಹೊರಬರಲು ಪ್ರಯತ್ನಿಸುತ್ತಿದ್ದ ವರ್ಷವಾಗಿ ಕಾಣುತ್ತದೆ. ಹೆಚ್ಚುತ್ತಿರುವ ಹಣದುಬ್ಬರ, ಬೆಳೆಯುತ್ತಿರುವ ನಿರುದ್ಯೋಗ, ಕೈಗಾರಿಕಾ ಸ್ಥಗಿತತೆ ಮತ್ತು ಆದಾಯ ಮತ್ತು ಸಂಪತ್ತಿನಲ್ಲಿ ಹೆಚ್ಚುತ್ತಲೇ ಇರುವ ಅಸಮಾನತೆಗಳು ಎದ್ದು ಕಾಣುವ ಅಂಶಗಳಾಗಿವೆ. ವರ್ಷಾಂತ್ಯದ ಹೊತ್ತಿಗೆ ನಿರುದ್ಯೋಗ ಸಂಖ್ಯೆ ಐದು ಕೋಟಿಗೂ ಹೆಚ್ಚಾಗಿತ್ತು, ವರ್ಷದ ಹೆಚ್ಚಿನ ಸಮಯ ಚಿಲ್ಲರೆ ಹಣದುಬ್ಬರ ಶೇಕಡ 7 ಕ್ಕಿಂತ ಅಧಿಕವಾಗಿತ್ತು. 2022 ಅಕ್ಟೋಬರ್‌ನಲ್ಲಿ ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಹಿಂದಿನ ವರ್ಷದ ಅಕ್ಟೋಬರ್‌ಗಿಂತ ಅರ್ಧಕ್ಕಿಂತ ಕಡಿಮೆ ಅಂದರೆ ನಾಲ್ಕು ಆಗಿರುವುದರೊಂದಿಗೆ ಕೈಗಾರಿಕಾ ಬೆಳವಣಿಗೆ ಸ್ಥಗಿತವಾಗಿತ್ತು. ಸರ್ಕಾರಿ ಕ್ಷೇತ್ರದ ಉದ್ದಿಮೆಗಳನ್ನು ಖಾಸಗೀಕರಿಸುವ ಮೋದಿ ಸರ್ಕಾರದ ನಡೆ ಮುಂದುವರಿದಿದೆ. ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒಗೆ ಕ್ರಮಕೈಗೊಂಡಿರುವುದು ಆ ಪೈಕಿ ಅತಿ ದೊಡ್ಡ ಹೆಜ್ಜೆಯಾಗಿದೆ. ಇದರಿಂದ ದೇಶದ ಬೃಹತ್ ವಿಮಾ ಕಂಪನಿಯಲ್ಲಿ ಭಾರತದ ಪಾಲು ದುರ್ಬಲವಾಗಿದೆ. ದೇಶದಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗೀಕರಿಸುವ ಒಂದು ಮಸೂದೆಯನ್ನು ಕೂಡ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿದೆ. ಇದು ರಾಜ್ಯ ಸರ್ಕಾರಗಳ ಸ್ವಾಮ್ಯದ ವಿದ್ಯುತ್ ವಿತರಣಾ ಕಂಪನಿಗಳ ಶಕ್ತಿಯನ್ನು ಕುಂದಿಸಲಿದೆ. ದೊಡ್ಡ ಕಾರ್ಪೊರೇಟ್ ಕಂಪನಿಗಳ ಸಾಲಗಳನ್ನು ಮನ್ನಾ ಮಾಡುವುದು ಮುಂದುವರಿದಿದ್ದು ಒಟ್ಟು 10.01 ಲಕ್ಷ ಕೋಟಿ ರೂಪಾಯಿಗಳನ್ನು ಮನ್ನಾ ಮಾಡಲಾಗಿದೆ.

ಸಂಪತ್ತಿನ ಅಸಮಾನತೆ ಹೆಚ್ಚಳ:

ಸರ್ಕಾರದ ಈ ನೀತಿಗಳಿಂದಾಗಿ ಅಸಮಾನತೆಗಳು ಮತ್ತಷ್ಟು ಆಳಗೊಳ್ಳಲು ಕಾರಣವಾಗಿವೆ. 2021ರಲ್ಲಿ ಭಾರತದ ಜನಸಂಖ್ಯೆಯ ಶೇಕಡ ಒಂದು ಭಾಗವು ದೇಶದ ಒಟ್ಟು ಸಂಪತ್ತಿನ ಶೇಕಡ 40.6 ಆಸ್ತಿಯನ್ನು ಹೊಂದಿತ್ತು. ಅದು 2000ನೇ ವರ್ಷದಲ್ಲಿ ಶೇಕಡ 32 ಆಗಿತ್ತು. ಗೌತಮ್ ಅದಾನಿ ಜಗತ್ತಿನ ಮೂರನೇ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ಹೊರಹೊಮ್ಮಿರುವುದು ಈ ಸಂಪತ್ತಿನ ಅಸಹ್ಯತೆಯನ್ನು ಚಿತ್ರಿಸುತ್ತದೆ. ಅದಾನಿ ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿಯೂ ಆಗಿದ್ದು ಆತನ ಒಟ್ಟು ಸಂಪತ್ತು 133 ಬಿಲಿಯ ಡಾಲರ್ ಆಗಿದೆ.

ಅಲ್ಪಸಂಖ್ಯಾತರ ಮೇಲಿನ ದಾಳಿ ಮುಂದುವರಿಕೆ:

ಭಾರತೀಯ ಪ್ರಭುತ್ವ ಮತ್ತು ರಾಜಕೀಯವನ್ನು ಮರುರೂಪಿಸುವ ಹಿಂದುತ್ವ ಶಕ್ತಿಗಳು ತಡೆರಹಿತವಾಗಿ ಮುಂದುವರಿದಿದ್ದನ್ನೂ ಈ ವರ್ಷ ನೋಡಿದೆ. ಕಾಶಿ ವಿಶ್ವನಾಥ ದೇವಸ್ಥಾನ ಕಾರಿಡಾರ್ ಪುನರುಜ್ಜೀವನ ಮತ್ತು ಇತರ ಅನೇಕ ಧಾರ್ಮಿಕ ಕಾರ್ಯಕ್ರಮಗಳ ನೇತೃತ್ವವನ್ನು ಪ್ರಧಾನಿಯೇ ವಹಿಸುವುದರೊಂದಿಗೆ ಇದರ ಅಬ್ಬರ ಜಾಸ್ತಿಯಾಗಿದೆ. ಹಿಂದೂ ಪ್ರಜ್ಞೆಯನ್ನು ಗಟ್ಟಿಗೊಳಿಸುವ ಈ ಪ್ರಯತ್ನಗಳಿಂದಾಗಿ ಮುಸ್ಲಿಮರನ್ನು 'ಇತರರನ್ನಾಗಿ' ಮಾಡುವ ಪ್ರಕ್ರಿಯೆ ಮುಂದುವರಿದಿದೆ. ರಾಮ ನವಮಿ ಮತ್ತು ಹೊಸದಾಗಿ ಉತ್ಪಾದಿಸಲಾದ ಹನುಮಾನ್ ಜಯಂತಿ ಮೆರವಣಿಗೆಗಳಂಥ ಧಾರ್ಮಿಕ ಹಬ್ಬಗಳ ವೇಳೆ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡುವ ಪ್ರಯತ್ನಗಳು ಸತತವಾಗಿ ಮುಂದುವರಿದಿವೆ. ಈ ಹಲ್ಲೆಗಳ ವಿರುದ್ಧ ಮುಸ್ಲಿಮರು ಯಾವುದೇ ಪ್ರತಿಭಟನೆಗಳನ್ನು ನಡೆಸಿದರೆ ಅವರನ್ನು ಬಂಧಿಸಲಾಗುತ್ತಿದೆ ಹಾಗೂ ಮಧ್ಯ ಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿ ಮಾಡಿದಂತೆ ಅವರ ಮನೆಗಳನ್ನು ನಾಶ ಮಾಡಲಾಗುತ್ತಿದೆ.

ಭಾರತದ 75ನೇ ಸ್ವಾತಂತ್ರ್ಯ ಮಹೋತ್ಸವದ ಅವಕಾಶವನ್ನು 'ನವ ಭಾರತ'ದ ಚಿಂತನೆಯನ್ನು ಬಿಂಬಿಸಲು ಬಳಸಲಾಗಿದೆ. ಅದು ಹಿಂದೂ ಬಹುಸಂಖ್ಯಾತ ರಾಷ್ಟ್ರದ ಚಿಂತನೆಯಲ್ಲದೆ ಬೇರೇನೂ ಅಲ್ಲ. 'ಶತಮಾನಗಳ ಕಾಲದ ವಿದೇಶಿ ಆಕ್ರಮಣದಿಂದ' ಸ್ವಾತಂತ್ರ್ಯ ಗಳಿಸುವ ಹಾಗೂ ವಸಾಹತುಶಾಹಿ ಮನೋಭಾವದಿಂದ' ವಿಮೋಚನೆ ಗೊಳಿಸುವ ಬಗ್ಗೆ ಬಹಳಷ್ಟು ಮಾತನಾಡಲಾಗುತ್ತಿದೆ. ಶತಮಾನಗಳ ಕಾಲದ ಮುಸ್ಲಿಂ ಆಡಳಿತದಿಂದ ವಿಮೋಚನೆಗೊಳಿಸುವುದು ಎಂಬುದು ಇದರ ಅರ್ಥವಾಗಿದೆ. ಹಾಗೂ ವಸಾಹತುಶಾಹಿ ಮನೋಭಾವ ಎಂದರೆ ಬ್ರಿಟಿಷ್ ಆಡಳಿತ ಕಾಲಕ್ಕೆ ಸಂಬಂಧಿಸಿದ್ದಲ್ಲ; ಅದು ಮುಸ್ಲಿಂ ಆಡಳಿತ ಯುಗಕ್ಕೆ ಸಂಬಂಧಿಸಿದ್ದಾಗಿದೆ.

ಒಕ್ಕೂಟ ತತ್ವ ಮತ್ತು ರಾಜ್ಯಗಳ ಹಕ್ಕುಗಳ ಮೇಲೆ ತೀವ್ರಗೊಂಡ ದಾಳಿ:

ಪ್ರಭುತ್ವವನ್ನು ಅಜಾತ್ಯತೀತಗೊಳಿಸುವುದಲ್ಲದೆ ಒಕ್ಕೂಟ ತತ್ವ ಮತ್ತು ರಾಜ್ಯಗಳ ಹಕ್ಕುಗಳ ಮೇಲೆ ದಾಳಿಗಳು ಕಳೆದಿರುವ ಈ ವರ್ಷದಲ್ಲಿ ತೀವ್ರಗೊಂಡಿವೆ. ಬಿಜೆಪಿಯೇತರ ಆಡಳಿತದ ರಾಜ್ಯಗಳಲ್ಲಿ ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರುವ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಲು ರಾಜ್ಯಪಾಲರನ್ನು ಎಗ್ಗಿಲ್ಲದೆ ಬಳಸಿಕೊಳ್ಳಲಾಗುತ್ತಿದೆ. ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿಗಳ ಹುದ್ದೆಯನ್ನು ಆಯ್ದ ಜನರನ್ನು ಕುಲಪತಿಗಳನ್ನಾಗಿ ನೇಮಿಸಲು ಹಾಗೂ ರಾಜ್ಯಗಳು ನಡೆಸುವ ವಿವಿಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸಲು ಬಳಸಲಾಗುತ್ತಿದೆ. ರಾಜ್ಯಪಾಲರೇ ಎಲ್ಲ ವಿವಿಗಳ ಕುಲಾಧಿಪತಿ ಆಗಿರುತ್ತಾರೆ. ನಿಧಿಗಳನ್ನು ತರುವ ಹಕ್ಕಿನ ರಾಜ್ಯಗಳ ಪಾಲನ್ನು ವಂಚಿಸಲು ಹೊಸ ಹೊಸ ಮಾರ್ಗೋಪಾಯಗಳನ್ನು ಕೇಂದ್ರ ಸರ್ಕಾರ ಹುಡುಕುತ್ತಿದೆ.

ನ್ಯಾಯಾಂಗದ ಮೇಲೆ ದಾಳಿ:

ಚುನಾವಣೆ ಆಯೋಗ ಮತ್ತು ಇತರ ಸಂಸ್ಥೆಗಳಿಗೆ ಮೂಗುದಾರ ಹಾಕಿದ ನಂತರ, ಕಳೆದ ಎರಡು ತಿಂಗಳಲ್ಲಿ ಸ್ವತಃ ಕಾನೂನು ಸಚಿವರೇ ಉನ್ನತ ನ್ಯಾಯಾಂಗದ ಮೇಲೆ ದಾಳಿ ತೀವ್ರಗೊಳಿಸಿರುವುದನ್ನು ಗಮನಿಸಿದ್ದೇವೆ. ವ್ಯಕ್ತಿ ಸ್ವಾತಂತ್ರ್ಯ ಮತ್ತು ನಾಗರಿಕರ ಹಕ್ಕುಗಳನ್ನು ರಕ್ಷಿಸುವ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನ ಧೋರಣೆ ಸರ್ವಾಧಿಕಾರಿ ಆಡಳಿತಗಾರರ ಕಣ್ಣು ಕೆಂಪಾಗಲು ಕಾರಣವಾಗಿದೆ. ಹಿಂದೂತ್ವ ರಾಜಕಾರಣದ ವಿರುದ್ಧ ಬಹಿರಂಗವಾಗಿ ಭಿನ್ನಮತ ವ್ಯಕ್ತಪಡಿಸುವವರ ನಾಗರಿಕ ಹಕ್ಕುಗಳು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಆಡಳಿತಗಾರರು ತುಳಿದು ಹಾಕುವುದನ್ನು ಮುಂದುವರಿಸಿದ್ದಾರೆ.

ಯುಪಿ ಮತ್ತು ಗುಜರಾತ್ ಚುನಾವಣೆಗಳು ಒಂದು ಎಚ್ಚರಿಕೆಯ ಗಂಟೆ:

ಈ ವರ್ಷ ಏಳು ರಾಜ್ಯ ವಿಧಾನಸಭೆಗಳಿಗೆ ಚುನಾವಣೆ ನಡೆದಿದೆ. ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಮಣಿಪುರ, ಗೋವಾ, ಗುಜರಾತ್ ಮತ್ತು ಹಿಮಾಚಲ ಪ್ರದೇಶ. ಈ ಏಳು ರಾಜ್ಯ ಅಸೆಂಬ್ಲಿಗಳಲ್ಲಿ ಬಿಜೆಪಿ ಐದರಲ್ಲಿ ಗೆದ್ದಿದೆ. ಪಂಜಾಬ್ ಮತ್ತು ಹಿಮಾಚಲ ಪ್ರದೇಶವನ್ನು ಕಳೆದುಕೊಂಡಿದೆ. ದೆಹಲಿ ಮುನಿಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಕೂಡ ಬಿಜೆಪಿ ಪರಾಭವಗೊಂಡಿದೆ. ಉತ್ತರ ಪ್ರದೇಶ ಮತ್ತು ಗುಜರಾತ್ ಚುನಾವಣೆಗಳು ಒಂದು ಎಚ್ಚರಿಕೆಯ ಗಂಟೆಯಾಗಿದೆ. ಏರುತ್ತಿರುವ ಬೆಲೆಗಳು, ನಿರುದ್ಯೋಗ, ಕೃಷಿ ಬಿಕ್ಕಟ್ಟು ಮತ್ತು ಬಡತನದ ವಿರುದ್ಧ ಜನರಲ್ಲಿ ಅತೃಪ್ತಿ ಬೆಳೆಯುತ್ತಿದ್ದರೂ ಆಳಗೊಳ್ಳುತ್ತಿರುವ ಕೋಮುವಾದಿ ಧ್ರುವೀಕರಣ ಮತ್ತು ಹಿಂದುತ್ವವಾದಿ ಕ್ರೋಡೀಕರಣವು ಈ ಎಲ್ಲ ಸಮಸ್ಯೆಗಳನ್ನು ಎದುರಿಸಿ ಚುನಾವಣೆಯಲ್ಲಿ ಗೆಲ್ಲಲು ಬಿಜೆಪಿಗೆ ನೆರವಾಗಿದೆ. ಜನರ ಜೀವನೋಪಾಯ ರಕ್ಷಣೆ, ಖಾಸಗೀಕರಣ ವಿರುದ್ಧ ಮತ್ತು ದುಡಿಯುವ ವರ್ಗ ವಿರೋಧಿ, ರೈತ–ವಿರೋಧಿ ನೀತಿಗಳ ವಿರುದ್ಧದ ಹೋರಾಟಗಳನ್ನು ಜಂಟಿಯಾಗಿ ನಡೆಸುವುದು ಅಗತ್ಯ ಎನ್ನುವುದನ್ನು ಇದು ತೋರಿಸುತದೆ. ಹಿಂದೂತ್ವ ಸಿದ್ಧಾಂತದ ವಿರುದ್ಧ ಜನರ, ಸತತವಾದ ಆಂದೋಲನ ನಡೆಸಬೇಕಿದೆ.

> 2024ರ ಲೋಕಸಭೆ ಚುನಾವಣೆಗೂ ಮುನ್ನ 2023 ನಿರ್ಣಾಯಕ ವರ್ಷವಾಗಲಿದೆ. ಈ ವರ್ಷ ಎಲ್ಲ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳು ಜನತಾ ಹೋರಾಟಗಳನ್ನು ನಡೆಸಲು ತಮ್ಮೆಲ್ಲ ಸಂಪನ್ಮೂಲಗಳನ್ನು ಕ್ರೋಡೀಕರಿಸಬೇಕು ಮತ್ತು ಹಿಂದುತ್ವ–ಕಾರ್ಪೊರೇಟ್ ಆಡಳಿತದ ರಾಜಕೀಯ ಮತ್ತು ಸೈದ್ಧಾಂತಿಕ ದಾಳಿಯನ್ನು ಒಗ್ಗಟ್ಟಿನಿಂದ ಎದುರಿಸಬೇಕು.
>
> **ಪ್ರಕಾಶ್ ಕಾರತ್**

ಜನ ವಿಭಾಗಗಳ ಹೆಚ್ಚುತಿರುವ ಪ್ರತಿರೋಧ:

2022ನೇ ವರ್ಷ ದುಡಿಯುವ ವರ್ಗದ ಮತ್ತು ದುಡಿಯುವ ಇತರ ಜನ ವಿಭಾಗಗಳ ಹೆಚ್ಚುತ್ತಿರುವ ಪ್ರತಿರೋಧಕ್ಕೆ ಸಾಕ್ಷಿಯಾಗಿದೆ. ಕೇಂದ್ರೀಯ ಟ್ರೇಡ್ ಯೂನಿಯನ್‌ಗಳು ಮಾರ್ಚ್ 28 ಮತ್ತು 29ರಂದು ಕರೆ ನೀಡಿದ್ದ ಎರಡು ದಿನಗಳ ಸಾರ್ವತ್ರಿಕ ಮುಷ್ಕರ ದೊಡ್ಡ ಪ್ರಮಾಣದಲ್ಲಿ ಯಶಸ್ವಿಯಾಗಿದೆ ಮತ್ತು ಹೆಚ್ಚೆಚ್ಚು ಕಾರ್ಮಿಕರು ಹಾಗೂ ನೌಕರರು ಮುಷ್ಕರ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಹೋರಾಟವನ್ನು ಮುಂದುವರಿಸಿದೆ. ಸ್ವಾಮಿನಾಥನ್ ಆಯೋಗದ ಸಿ2+50% ಸೂತ್ರದ ಆಧಾರದಲ್ಲಿ ಕನಿಷ್ಠ ಬೆಂಬಲ ಬೆಲೆಗೆ ಕಾನೂನಾತ್ಮಕ ಖಾತರಿ ನೀಡಬೇಕೆಂದು ಹೋರಾಟದ ಪ್ರಮುಖ ಬೇಡಿಕೆಯಾಗಿದೆ. ಸಾಂಕ್ರಾಮಿಕತೆಯ ಅಸ್ತವ್ಯಸ್ತತೆ ನಂತರ, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಶಿಕ್ಷಣದ ಮೇಲಿನ ಇತರ ದಾಳಿಗಳ ವಿರುದ್ಧ ಸುದೀರ್ಘ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ.

ವಿದ್ಯುತ್ ತಿದ್ದುಪಡಿ ಮಸೂದೆ ರಾಷ್ಟ್ರವ್ಯಾಪಿ ಹೋರಾಟ ನಡೆಸಬೇಕಾದ ಒಂದು ಪ್ರಮುಖ ವಿಷಯವಾಗಿದೆ. ಈ ಮಸೂದೆ ಅಂಗೀಕಾರವಾದರೆ ರೈತರ ಸಹಿತ ವಿದ್ಯುತ್ ಬಳಸುವ ಎಲ್ಲರೂ ಮತ್ತು ವಿದ್ಯುತ್ ಕ್ಷೇತ್ರದಲ್ಲಿನ ಲಕ್ಷಾಂತರ ಕಾರ್ಮಿಕರು ಹಾಗೂ ಇಂಜಿನಿಯರ್‌ಗಳಿಗೆ ವಿನಾಶಕಾರಿಯಾಗಿ ಪರಿಣಮಿಸಲಿದೆ.

2024ರ ಲೋಕಸಭೆ ಚುನಾವಣೆಗೂ ಮುನ್ನ 2023 ನಿರ್ಣಾಯಕ ವರ್ಷವಾಗಲಿದೆ. ಈ ವರ್ಷ ಎಲ್ಲ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳು ಜನತಾ ಹೋರಾಟಗಳನ್ನು ನಡೆಸಲು ತಮ್ಮೆಲ್ಲ ಸಂಪನ್ಮೂಲಗಳನ್ನು ಕ್ರೋಡೀಕರಿಸಬೇಕು ಮತ್ತು ಹಿಂದುತ್ವ–ಕಾರ್ಪೊರೇಟ್ ಆಡಳಿತದ ರಾಜಕೀಯ ಮತ್ತು ಸೈದ್ಧಾಂತಿಕ ದಾಳಿಯನ್ನು ಒಗ್ಗಟ್ಟಿನಿಂದ ಎದುರಿಸಬೇಕು.

ಅನು: ವಿಶ್ವ



ಜನತೆಯ ನವಕರ್ನಾಟಕ ಕಟ್ಟುವ...... ಪುಟ 3 ರಿಂದ

ಲೈಂಗಿಕ ಹಗರಣಗಳಲ್ಲಿ, ಭ್ರಷ್ಟಾಚಾರದ ಹಗರಣಗಳಲ್ಲಿ ರಾಜೀನಾಮೆ ಸಲ್ಲಿಸಬೇಕಾಗಿ ಬಂತು. ಅಧಿಕಾರದ ವ್ಯಸನದಲ್ಲಿ ಅನೇಕ ನಾಯಕರು ಪ್ರತಿನಿತ್ಯವೂ ನರಳುತ್ತಾರೆ. ಬಣಗಳ ಬಡಿದಾಟದಲ್ಲೂ ಬಿಜೆಪಿ ನಾಯಕರಿದ್ದಾರೆ.

ಒಟ್ಟಾರೆ, ಇಂತಹ ಅಧಿಕಾರದಾಹಿ, ಭ್ರಷ್ಟ, ದುರಾಡಳಿತದಿಂದ ಬೇಸತ್ತು ಜನ ಅತೃಪ್ತಗೊಂಡಿರುವಾಗ ತನ್ನ ದುರಾಡಳಿತವನ್ನು ಕಾಣದಂತೆ ಮರೆಮಾಚಲು ರಾಜ್ಯದಲ್ಲಿ ಕೋಮು ದ್ವೇಷದ ಉನ್ಮಾದವನ್ನು ಬಿಜೆಪಿ–ಆರ್.ಎಸ್.ಎಸ್. ಮತ್ತು ಅದರ ಪರಿವಾರ ಅತ್ಯಂತ ಆಕ್ರಮಣಕಾರಿಯಾಗಿ ವ್ಯಾಪಕಗೊಳಿಸಿರುವುದು ಕಳೆದ ವರ್ಷದಲ್ಲಿ ಕಾಣುವ ಅತಿ ದೊಡ್ಡ ವಿದ್ಯಾಮಾನ. ಹಿಂದುತ್ವದ ಹೆಸರಿನಲ್ಲಿ ಕನ್ನಡ ನಾಡಿನ ಸೌಹಾರ್ದತೆ, ಶಾಂತಿ, ಸಹ ಬಾಳ್ವೆ ಮತ್ತು ಸಮನ್ವಯದ ಬಹು ಸಂಸ್ಕೃತಿಯ ಪರಂಪರೆಗೆ ಮಸಿ ಬಳಿಯುವ ಹಲವು ಕೃತ್ಯಗಳನ್ನು ಸಂಘ ಪರಿವಾರ ನಡೆಸಿತು ಮತ್ತು ಅಂತಹ ಬಹುತೇಕ ಪ್ರಕರಣಗಳಲ್ಲಿ ಸರ್ಕಾರವೇ ಬೆಂಗಾವಲಾಗಿ ನಿಂತು ಕುಕೃತ್ಯಗಳಿಗೆ ಕೈಜೋಡಿಸಿತು. 2022ನೇ ಇಸ್ವಿ ಹಿಂದೆಂದೂ ಕಾಣದಂತಹ ಕೋಮು ದ್ವೇಷದ ಪ್ರಸಾರ, ಮತೀಯ ವಿಭಜನೆ, ಹಿಂಸೆಯನ್ನು ಕಂಡಿತು. ಬಾಬಾಬುಡನ್ ಗಿರಿ ಯಲ್ಲಿ ಇದ್ದ ಸೌಹಾರ್ದತೆಯ ಬಹುಮುಖಿ ಸೂಫಿ ಸಂಸ್ಕೃತಿಗೆ ಮಸಿ ಬಳಿಯುವಂತೆ ಕ್ರಮಗಳನ್ನು ಕೈಗೊಂಡಿದೆ. ಮತ್ತೊಂದೆಡೆ, ತನ್ನ ಹಿಂದುತ್ವದ ಅಜೆಂಡಕ್ಕಾಗಿ ಹಂಪಿ ಪ್ರದೇಶದ ಅಂಜನಾದ್ರಿ ಬೆಟ್ಟವನ್ನು ಮತ್ತು ಆಂಜನೇಯನನ್ನು ತನ್ನ ದುರುದ್ದೇಶಕ್ಕೆ ಬಳಸಿಕೊಳ್ಳಲು ಹೊರಟಿದೆ.

ಮೀಸಲಾತಿಯ ಪ್ರಶ್ನೆಯನ್ನು ಅರ್ಥಹೀನಗೊಳಿಸುವಂತಹ ಕ್ರಮಗಳನ್ನು ಮತ್ತು ವ್ಯಾಪಕ ಭ್ರಮೆಗಳನ್ನು ಬೆಳೆಸಲು ಸರ್ಕಾರ ಜಾತಿ ರಾಜಕಾರಣವನ್ನು ಮಾಡುತ್ತಿದೆ. ಒಟ್ಟಾರೆ, ರಾಜ್ಯದಲ್ಲಿ ಕಾರ್ಪೊರೇಟ್ ಲೂಟಿಯ ಆರ್ಥಿಕ ನೀತಿಗಳು ಮತ್ತು ಮತೀಯ ದ್ವೇಷದ ಕೋಮುವಾದ ಹಿಂದೆಂದೂ ಮಾಡದಷ್ಟು ಹೆಚ್ಚಿನ ಅನಾಹುತವನ್ನು ಈಗ ಬಿಜೆಪಿ ಆಡಳಿತದಲ್ಲಿ ಉಂಟಾಗುತ್ತಿದೆ. ಮತ್ತು ಅದಕ್ಕೆ ಎಲ್ಲ ರೀತಿಯ ಕುಮಕ್ಕು ಸಿಗುತ್ತಿದೆ. ಬಿಜೆಪಿ ಆರ್ ಎಸ್ ಎಸ್ ಗಳು ಬಹಿರಂಗವಾಗಿ ಪ್ರಕಟಿಸಿದಂತೆ ಕರ್ನಾಟಕವನ್ನು ಫ್ಯಾಶಿಸ್ಟ್ ಮಾದರಿಯ ಗುಜರಾತನ್ನಾಗಿಸುವ ಉದ್ದೇಶವನ್ನು ಬಹಿರಂಗವಾಗಿ ಹೇಳುತ್ತಿವೆ. ಕರ್ನಾಟಕದ ಭಾಷೆ ಸಂಸ್ಕೃತಿ, ಆರ್ಥಿಕತೆ, ಅಸ್ಮಿತತೆಗಳನ್ನು ನಾಶಗೊಳಿಸುತ್ತಿವೆ.

ಈ ವರ್ಷದ ಎಪ್ರಿಲ್ ಮೇ ತಿಂಗಳಿನಲ್ಲೇ ವಿಧಾನಸಭೆಗೆ ಚುನಾವಣೆಗಳು ನಡೆಯಲಿದ್ದು ಅತ್ಯಂತ ನಿರ್ಣಾಯಕವಾದ ಸಂದರ್ಭವಿದು. ಈ ಪ್ಯಾಸಿಸ್ಟ್ ಮಾದರಿಯ ಶಕ್ತಿಗಳನ್ನು ಅಧಿಕಾರದಿಂದ ತೊಲಗಿಸದೆ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಅದರ ಬೇರುಗಳನ್ನು ಕಿತ್ತೆಸೆಯದೆ ಸೌಹಾರ್ದ ಮತ್ತು ಸಮೃದ್ಧ ಕರ್ನಾಟಕ ಉಳಿಯುವುದು ಮತ್ತು ಬೆಳೆಯುವುದು ಅಸಾಧ್ಯ. ಆದ್ದರಿಂದ ಮುಂದಿನ ಚುನಾವಣೆಯಲ್ಲಿ ಇಂತಹ ಜನವಿಭಜಕ, ಕೋಮು ವಿದ್ವೇಷದ ಶಕ್ತಿಗಳನ್ನು ಅಧಿಕಾರದಿಂದ ಕಿತ್ತೆಸೆಯಬೇಕು. ಜಾತ್ಯಾತೀತತೆ, ಪ್ರಜಾಪ್ರಭುತ್ವ, ಸಂವಿಧಾನದ ರಕ್ಷಣೆಗೆ, ಕಾನೂನು ಬದ್ಧ ಆಡಳಿತ ಉಳಿವಿಗೆ ಅತ್ಯಗತಯ. ಇದು ಅತ್ಯಂತ ಪ್ರಮುಖವಾದ ಒಂದು ಸಂಕಲ್ಪವಾಗಿರಬೇಕಿದೆ. ಆ ದೆಸೆಯಲ್ಲಿ ಎಲ್ಲರನ್ನೂ ಒಗ್ಗೂಡಿಸಿ ಯಶಸ್ಸು ಪಡೆಯುವ ಕಾರ್ಯಕ್ಕೆ ಇಳಿಯಬೇಕಾಗಿದೆ ಎನ್ನುವುದು ಈ ವರ್ಷದ ಮಹತ್ವದ ಒಂದು ಸಂಕಲ್ಪವಾಗಬೇಕು.

ವಿದ್ಯುತ್ ಬಳಕೆಗೂ ಈಗ ಪ್ರಿಪೇಯ್ಡ್ ಮೀಟರ್
ವಿದ್ಯುತ್ ವಲಯ ಖಾಸಗೀಕರಣದತ್ತ

ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ವಿದ್ಯುತ್ (ತಿದ್ದುಪಡಿ) ಖಾಯಿದೆಯ ಸೆಕ್ಷನ್ 65 ಮತ್ತು 66 ರಲ್ಲಿ ಉಚಿತ ಹಾಗೂ ಸಬ್ಸಿಡಿ ದರದಲ್ಲಿ ಸರಭರಾಜನ್ನು ನಿರ್ಭಂದಿಸಿದೆ. ಇದು ಕೃಷಿ ಉತ್ಪಾದನೆ ಮತ್ತು ಆಹಾರ ಭದ್ರತೆಗೆ ಗಂಭೀರ ಅಪಾಯ ತಂದೊಡ್ಡುತ್ತದೆ. ಕರ್ನಾಟಕ ಸೇರಿದಂತೆ ಬಹುತೇಕ ರಾಜ್ಯಗಳಲ್ಲಿ ಹತ್ತು ಎಚ್.ಪಿ. ವರೆಗೆ ಕೃಷಿ ಉದ್ದೇಶದ ಪಂಪ್ ಸೆಟ್ ಗಳಗೆ ಉಚಿತ ವಿದ್ಯುತ್ ಸರಬರಾಜು ಇದೆ. ಈ ಎಲ್ಲಾ ಪಂಪ್ ಸೆಟ್ ಗಳಗೆ ಮೀಟರ್ ಅಳವಡಿಸಿ, ಯಾವುದೇ ವಿನಾಯಿತಿ, ರಿಯಾಯಿತಿ ನೀಡದೆ ವಿದ್ಯುತ್ ಶುಲ್ಕ ವಸೂಲು ಮಾಡಲು ಈ ತಿದ್ದುಪಡಿ ಖಾಯ್ದೆ ವಿತರಣಾ ನಿಗಮಗಳಗೆ ಅಧಿಕಾರ ನೀಡುತ್ತದೆ. ಇದರ ಪರಿಣಾಮ ಪ್ರತಿ ಪಂಪ್ ಸೆಟ್ ಬಳಕೆದಾರ ರೈತ ಕುಟುಂಬವು ವಾರ್ಷಿಕ ಕನಿಷ್ಠ ಒಂದರಿಂದ ಎರಡು ಲಕ್ಷ ರೂ. ವರೆಗೆ ವಿದ್ಯುತ್ ಶುಲ್ಕ ಪಾವತಿಸಬೇಕಾಗುತ್ತದೆ. ಇದರ ಹೊರೆ ಹರಲಾಗದೆ ಬಹಳಷ್ಟು ರೈತರು ಕೃಷಿ ಮಾಡುವುದನ್ನೇ ತೊರೆಯಬೇಕಾದ ಅನಿವಾರ್ಯತೆ ಬರುತ್ತದೆ. ಇದು ಆಹಾರ ಉತ್ಪಾದನೆ ಕುಂಠಿತವಾಗಲು ಕಾರಣವಾಗುತ್ತದೆ. ಕೃಷಿ ಕಾರ್ಪೋರೇಟ್ ಕಂಪನಿಗಳ ಪಾಲಾಗುತ್ತದೆ. ಆಹಾರ ಪದಾರ್ಥಗಳ ಬೆಲೆಗಳು ವಿಪರೀತವಾಗಿ ಏರಿಕೆಯಾಗುತ್ತದೆ.



ಸರ್ಕಾರ ವಿದ್ಯುತ್ ವಲಯವನ್ನು ಸಂಪೂರ್ಣ ಖಾಸಗೀಕರಣ ಮಾಡಲು ಹೊರಟಿದೆ. ವಿದ್ಯುತ್ (ತಿದ್ದುಪಡಿ) ಮಸೂದೆ–2022 ನ್ನು ಕಾಯ್ದೆಯನ್ನಾಗಿ ಮಾಡಲು ಸಂಸತ್ತಿನಲ್ಲಿ ಮಂಡನೆ ಮಾಡಿದೆ.. ವಿದ್ಯುತ್ ಉತ್ಪಾದನೆ, ಸಾಗಣೆ ಮತ್ತು ವಿತರಣೆ ಈ ಮೂರು ವಿಭಾಗಗಳನ್ನು ಖಾಸಗಿ ಬಂಡವಾಳಗಾರರಿಗೆ ಒಪ್ಪಿಸಲು ಈ ಮಸೂದೆ ಅವಕಾಶ ನೀಡುತ್ತದೆ. ಈ ಮಸೂದೆ ಅತ್ಯಂತ ಜನವಿರೋಧಿ, ರೈತ ವಿರೋಧಿಯಾಗಿದೆ. ಸದ್ಯ ಈ ಮಸೂದೆ ಸಂಸದೀಯ ಸಮಿತಿಯ ಪರಾಮರ್ಶೆಗೆ ವರ್ಗಾಹಣೆ ಆಗಿದೆಯಾದರೂ, ಆ ಸಮಿತಿಯಲ್ಲೂ ಆಳುವ ಪಕ್ಷದ ಸದಸ್ಯರೇ ಬಹುಮತದಲ್ಲಿ ಇದ್ದಾರೆ. ಈ ಕಾರಣದಿಂದ ಆ ಸಮಿತಿ ಕೇಂದ್ರ ಸರ್ಕಾರದ ಅಣತಿಯಂತೆ ನಡೆದುಕೊಳ್ಳುತ್ತದೆ ಎಂಬುದಂತೂ ಸತ್ಯ. ಲೋಕಸಭೆಯಲ್ಲೂ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ಬಲ ಹೆಚ್ಚಾಗಿಯೇ ಇದೆ. ಈ ಕಾರಣದಿಂದಾಗಿಯೇ ಬಿಜೆಪಿ ಸರ್ಕಾರ ಈ ಮಸೂದೆಯನ್ನು ಸತಾಯ ಗತಾಯ ಅಂಗೀಕಾರ ಮಾಡಲು ಮುಂದಾಗಿದೆ. ಇದನ್ನು ತಡೆಯುವ ಮಾರ್ಗವೆಂದರೆ, ರೈತರು, ವಿದ್ಯುತ್ ಬಳಕೆದಾರರಾದ ಜನಸಾಮಾನ್ಯರು ಮತ್ತು ವಿದ್ಯುತ್ ಕಂಪನಿಗಳ ನೌಕರರು ಸೇರಿ ಬೃಹತ್ ಪ್ರಮಾಣದ ಹೋರಾಟ ನಡೆಸುವುದು.

ಸಿ. ಸಿದ್ದಯ್ಯ

ನವ–ಉದಾರೀಕರಣದ ಪರಿಣಾಮ:

2014 ರಿಂದಲೂ ಸರ್ಕಾರ ಪ್ರಯತ್ನ ಮಾಡುತ್ತಿದೆ. 1991ರ ನಂತರ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳನ್ನು(ಎಲ್.ಪಿ.ಜಿ.) ಭಾರತ ಸರ್ಕಾರ ಒಪ್ಪಿಕೊಂಡಿತು. ಅಂದು ಎಡ ಮತ್ತು ಪ್ರಗತಿಪರ ಸಂಘಟನೆಗಳು, ರೈತ ಮತ್ತು ಕಾರ್ಮಿಕ ಸಂಘಟನೆಗಳು ಕೇಂದ್ರ ಸರ್ಕಾರದ ಈ ನೀತಿಗಳನ್ನು ವಿರೋಧಿಸಿ ದೊಡ್ಡ ಮಟ್ಟದ ಹೋರಾಟ ನಡೆಸಿದರು. ಜನತೆಯ ಇಂತಹ ಪ್ರತಿರೋಧದಿಂದಾಗಿ ಎಲ್ ಪಿ ಜಿ ನೀತಿಗಳ ಜಾರಿಯ ವೇಗಕ್ಕೆ ತಡೆವೊಡ್ಡಲು ಸಾಧ್ಯವಾಗಿದೆಯಾದರೂ, ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗಲಿಲ್ಲ. ನಂತರ ಬಂದ ಸರ್ಕಾರಗಳು ಈ ನೀತಿಗಳನ್ನು ಅನುಸರಿಸುತ್ತಾ ಬಂದಿವೆ. ಹಲವು ಸಾರ್ವಜನಿಕ ಕ್ಷೇತ್ರಗಳನ್ನು ಖಾಸಗಿ ಬಂಡವಾಳಗಾರರ ತೆಕ್ಕೆಗೆ ಹಾಕಲಾಗುತ್ತಿದೆ. ಇಂತಹ ಕ್ಷೇತ್ರಗಳಲ್ಲಿ ವಿದ್ಯುತ್ ಕ್ಷೇತ್ರವೂ ಒಂದು.

ವಿದ್ಯುತ್ ವಲಯವನ್ನು ಖಾಸಗೀಕರಣ ಮಾಡುವ ಪ್ರಯತ್ನವಾಗಿ 'ವಿದ್ಯುತ್ ಕಾಯ್ದೆ 2003' ಅಸ್ತಿತ್ವಕ್ಕೆ ತರಲಾಯಿತು. ಇದಕ್ಕೂ ಮೊದಲು ವಿದ್ಯುತ್ ವಲಯದ ಎಲ್ಲಾ ಹಂತಗಳೂ ಸಾರ್ವಜನಿಕ ವಲಯದಲ್ಲಿದ್ದವು. ಉತ್ಪಾದನೆ, ಸಾಗಣೆ ಮತ್ತು ಪೂರೈಕೆ ಎಲ್ಲವನ್ನೂ ಸರ್ಕಾರವೇ ನಿಯಂತ್ರಿಸುತ್ತಿತ್ತು. ಈ ಪದ್ಧತಿಗೆ ಬದಲಾಗಿ ಉತ್ಪಾದನೆ ಮಾಡಲು ಒಂದು ನಿಗಮ, ಸಾಗಣೆ ಮಾಡಲು ಮತ್ತೊಂದು ನಿಗಮ, ಪೂರೈಕೆ ಮಾಡಲು ಮಗದೊಂದು ನಿಗಮ ಹೀಗೆ ಮೂರು ನಿಗಮಗಳು ಅಸ್ತಿತ್ವಕ್ಕೆ ತಂದರು. ಇಷ್ಟಕ್ಕೆ ಸುಮ್ಮನಾಗದ ಸರ್ಕಾರ ವಿದ್ಯುತ್ ಉತ್ಪಾದನೆ ಮಾಡಲು ಖಾಸಗಿ ಬಂಡವಾಳಗಾರರಿಗೆ ಅವಕಾಶ ಕೊಡಲಾಯ್ತು.

ಖಾಸಗಿ ಕಂಪನಿಗಳು ಉತ್ಪಾದನೆ ಮಾಡುವ ವಿದ್ಯುತ್ ಅನ್ನು ಸಾರ್ವಜನಿಕ ಕ್ಷೇತ್ರದ ವಿತರಣಾ ಕಂಪನಿಗಳು ಖರೀದಿ ಮಾಡಿ ವಿತರಣೆ ಮಾಡುತ್ತಿವೆ. ಈ ಖರೀದಿ ವ್ಯವಹಾರದಲ್ಲೂ ಖಾಸಗಿ ವಿದ್ಯುತ್ ಉತ್ಪಾದನಾ ಕಂಪನಿಗಳು ಲಾಭ ಮಾಡಿಕೊಳ್ಳತೊಡಗಿವೆ. ಸರ್ಕಾರದ ಮೇಲೆ ಪ್ರಭಾವ ಬೀರುವ ಮೂಲಕ ದುಬಾರಿ ದರಕ್ಕೆ ವಿದ್ಯತ್ ಖರೀದಿ ಮಾಡುವಂತೆ ನೋಡಿಕೊಂಡಿವೆ. ಇಂದು ಎಲ್ಲಾ ರೀತಿಯ ಗ್ರಾಹಕರಿಗೆ ವಿದ್ಯುಚ್ಛಕ್ತಿ ದುಬಾರಿಯಾಗಲು ಖಾಸಗಿ ಕಂಪನಿಗಳ ಲಾಭದ ದುರಾಸೆಯೇ ಕಾರಣ. ದೇಶದ ಜನತೆಯ ಇಂಧನದ ಅವಶ್ಯಕತೆಯನ್ನು ಪ್ರಧಾನ ಗುರಿಯಾಗಿಸಿಕೊಳ್ಳಬೇಕಿದ್ದ ಸರ್ಕಾರದ ಇಂದಿನ ನೀತಿಯು ಖಾಸಗಿ ಕಾರ್ಪರೇಟ್ ಕಂಪನಿಗಳ ಲಾಭಕೋರತನವನ್ನು ಪ್ರೋತ್ಸಾಹಿಸುವ ನೀತಿಗಳಾಗಿ ಬದಲಾಗಿದೆ.

ಇಂದಿಗೂ ಒಂದು ಕೋಟಿ ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ:

ಒಂದು ಅಂಕಿ ಅಂಶದ ಪ್ರಕಾರ ಭಾರತದ ಶೇ 3.3 ಕುಟುಂಬಗಳಿಗೆ ಇನ್ನೂ ವಿದ್ಯುತ್ ಸಂಪರ್ಕ ದೊರೆತಿಲ್ಲ. ಅಂದರೆ ಒಂದು ಕೋಟಿ ಮನೆಗಳಿಗೆ ಇಂದಿಗೂ ವಿದ್ಯು ತ್ ಸಂಪರ್ಕವಿಲ್ಲ. ಆದರೆ, ಪಡಿತರ ಪಡೆಯಲು, ವೃದ್ಧಾಪ್ಯ ವೇತನ, ವಿದವಾ ವೇತನ, ಅಂಗವಿಕಲರ ವೇತನ ಪಡೆಯುವವರು ಮಾತ್ರವಲ್ಲದೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ➚

ಏನಿದು ಪ್ರಿಪೇಯ್ಡ್ ಮೀಟರ್?

ಪ್ರಿಪೇಯ್ಡ್ ಎಂದರೆ ನೀವು ಪಡೆಯುವ ಸೇವೆಗೆ ಮೊದಲೇ ಹಣ ಪಾವತಿಸು ಎಂದರ್ಥ. ಮೊಬೈಲ್ ಬಳಕೆ ಮಾಡುವವರು ಮೊದಲೇ ಒಂದಷ್ಟು ಹಣ ಕೊಟ್ಟು ರೀಚಾರ್ಜ್ ಮಾಡಿಸುತ್ತಾರಲ್ಲಾ ಹಾಗೆ. ಸಾಮಾನ್ಯಯವಾಗಿ 28 ದಿನಗಳಿಗೆ ಮೊಬೈಲ್ ರೀಚಾರ್ಜ್ ಮಾಡಿಸುತ್ತೇವೆ. 28 ನೇ ದಿನ ಮದ್ಯರಾತ್ರಿ 12 ಗಂಟೆಗೆ ಸರಿಯಾಗಿ ನಮ್ಮ ಮೊಬೈಲ್ ಸಂಪರ್ಕ ಕಡಿತಗೊಳ್ಳುತ್ತದೆ. ಮತ್ತೆ ಮೊಬೈಲ್ ಕಂಪನಿಗಳು ನಿಗದಿಪಡಿಸಿದ ಯಾವುದಾದರೂ ಒಂದು ಮೊತ್ತ ನೀಡಿ ರೀಚಾರ್ಜ್ ಮಾಡಿಸಬೇಕು. ನಮ್ಮ ಬಳಿ ಹಣ ಇಲ್ಲದಿದ್ದರೆ ಮೊಬೈಲ್ ಬಳಕೆ ಮಾಡಲಾಗದು.

ವಿದ್ಯುತ್ ಪ್ರಿಪೇಯ್ಡ್ ಮೀಟರ್ ಇದೇ ರೀತಿ ಕೆಲಸ ಮಾಡುತ್ತದೆ. ನಮ್ಮ ಮನೆಗೆ ಅಥವಾ ನಮ್ಮ ಜಮೀನಿನ ಪಂಪ್ ಸೆಟ್ ಗಳಿಗೆ ವಿದ್ಯುತ್ ಸಂಪರ್ಕ ಬೇಕು ಎಂದರೆ ಪ್ರಿಪೇಯ್ಡ್ ಮೀಟರ್ ಅಳವಡಿಸಿಕೊಳ್ಳಬೇಕು. ವಿತರಣಾ ಕಂಪನಿಗಳು ತಿಂಗಳೊಂದಕ್ಕೆ ನಿಗದಿಪಡಿಸಿದ ಕನಿಷ್ಠ ಮೊತ್ತದ ಜೊತೆಗೆ ನಮಗೆ ಅವಶ್ಯಕವಿರುವ ವಿದ್ಯುತ್ ಗೆ ಮೊದಲೇ ಹಣ ಕೊಟ್ಟು ರೀಚಾರ್ಜ್ ಮಾಡಿಸಬೇಕು. ಉದಾಹರಣೆಗೆ, ಮನೆಗಳಿಗೆ ಒಂದು ಎಚ್ ಪಿ ಸಂಪರ್ಕ ಪಡೆದಿರುವ ಸಾಮಾನ್ಯ ಬಳಕೆದಾರರಿಗೆ ನಿಗದಿತ ಮಾಸಿಕ ಶುಲ್ಕ 100 ರೂ. ಇದೆ. ಬೋರ್ ವೆಲ್ ಕೊರೆದು, ಅದರ ನೀರು ಬಳಕೆ ಮಾಡುವ 3 ಎಚ್ ಪಿ ಸಂಪರ್ಕ ಪಡೆದಿರುವ ಮನೆಗಳಿಗೆ ಇನ್ನೂ ಹೆಚ್ಚು. (ಖಾಸಗಿಯವರ ತೆಕ್ಕೆಗೆ ಹೋದರೆ ಈ ನಿಗದಿತ ಶುಲ್ಕ ಎಷ್ಟಾಗುತ್ತದೋ ಹೇಳಲಾಗದು.) ಇದರ ಜೊತೆಗೆ ಮತ್ತಷ್ಟು ಹಣವನ್ನು ಸೇರಿಸಿ ರೀಚಾರ್ಜ್ ಮಾಡಿಸಬೇಕು. ಈ ಮೊತ್ತಕ್ಕೆ ಸರ್ಕಾರ ವಿಧಿಸುವ ಶೇ. 5 ರಷ್ಟು ತೆರಿಗೆಯೂ ಸೇರುತ್ತದೆ. ನೀವು ಎಷ್ಟು ಹಣವನ್ನು ತುಂಬಿರುತ್ತೀರೋ ಅಷ್ಟು ಹಣದ ವಿದ್ಯುತ್ ಖರ್ಚಾಗುವ ವರೆಗೂ ನಿಮ್ಮ ಮನೆಗೆ ವಿದ್ಯುತ್ ಸಂಪರ್ಕ ಇರುತ್ತದೆ. ಹಣ ಖಾಲಿಯಾಗುತ್ತಿದ್ದಂತೆ ವಿದ್ಯುತ್ ಸಂಪರ್ಕ ಕಡಿತವಾಗುತ್ತದೆ. ನಿಮಗೆ ವಿದ್ಯುತ್ ಬೇಕೆಂದರೆ ಮತ್ತೆ ಹಣ ತುಂಬಿ ರೀಚಾರ್ಜ್ ಮಾಡಿಸಬೇಕು. ಈ ರೀತಿ ಮದ್ಯದಲ್ಲಿ ರೀಚಾರ್ಜ್ ಮಾಡಿಸಿದರೂ, ನೀವು ರೀಚಾರ್ಜ್ ಮಾಡಿಸಿದ ಹಣದಷ್ಟು ವಿದ್ಯುತ್ ಬಳಕೆ ಮಾಡದಿದ್ದರೂ 28 ನೇ ದಿನದ ಮಧ್ಯರಾತ್ರಿ 12 ಗಂಟೆಗೆ ಸರಿಯಾಗಿ ವಿದ್ಯುತ್ ಸಂಪರ್ಕ ಕಡಿತವಾಗುತ್ತದೆ. ಮತ್ತೆ ಮಾಸಿಕ ಶುಲ್ಕದ ಜೊತೆಗೆ ಒಂದಷ್ಟು ಹಣ ಸೇರಿಸಿ ರೀಚಾರ್ಜ್ ಮಾಡಿಸಬೇಕು. ಅಥವಾ ರೀಚಾರ್ಜ್ ಅವಧಿ ಮುಗಿಯುವ ಒಂದು ದಿನ ಮೊದಲೇ ರೀಚಾರ್ಜ್ ಮಾಡಿಸಿದರೆ ವಿದ್ಯುತ್ ಸಂಪರ್ಕ ಕಡಿತವಾಗುವುದಿಲ್ಲ.

ಸಂಯುಕ್ತ ಹೋರಾಟ-ಕರ್ನಾಟಕ ಸಮಿತಿಯು ವಿದ್ಯುತ್ (ತಿದ್ದಪಡಿ) ಮಸೂದೆ–2022 ರ ಕುರಿತು ಡಿಸೆಂಬರ್ 27ರಂದು ಬೆಂಗಳೂರಿನಲ್ಲಿ ವಿಚಾರ ಸಂಕಿರಣ ಏರ್ಪಡಿಸಿತ್ತು. ಇದರಲ್ಲಿ ಹಲವು ರೈತ ಸಂಘಟನೆಗಳು, ಕೃಷಿ ಕೂಲಿಕಾರರ ಸಂಘಟನೆಗಳು ಮತ್ತು ಕೆಲ ದಲಿತ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ವಿಚಾರ ಸಂಕಿರಣದಲ್ಲಿ ಮಾತನಾಡಿದ ಅಖಿಲ ಭಾರತ ವಿದ್ಯುತ್ ಚ್ಛಕ್ತಿ ನೌಕರರ ಫೆಡರೇಷನ್ ನ ಉಪ ಕಾರ್ಯದರ್ಶಿ ಮಹಮ್ಮದ್ ಸಮೀಉಲ್ಲಾ ಅವರು ವಿದ್ಯುತ್ ಖಾಸಗೀಕರಣದಿಂದ ರೈತರಿಗೆ, ಬಡ ಕುಟುಂಬಗಳಗೆ, ಜನಸಾಮಾನ್ಯರಿಗೆ ಹಾಗೂ ವಿದ್ಯುತ್ ಕಂಪನಿಗಳ ನೌಕರರ ಉದ್ಯೋಗಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಎಳೆ ಎಳೆಯಾಗಿ ಬಿಡಿಸಿ ಹೇಳಿದರು. ಜನತೆ ಇದರ ವಿರುದ್ದ ಹೋರಾಟ ಮಾಡಿ, ಖಾಸಗೀಕರಣವನ್ನು ತಡೆಯದಿದ್ದರೆ ಅಪಾಯ ಖಂಡಿತ ಎಂದು ಎಚ್ಚರಿಸಿದ ಅವರು ನಮ್ಮ ನೌಕರರ ಸಂಘಟನೆ ಸದಾ ಕಾಲ ಈ ಖಾಸಗೀಕರಣ ನೀತಿಗಳ ವಿರುದ್ಧದ ಹೋರಾಟದಲ್ಲಿ ಭಾಗಿಯಾಗುತ್ತದೆ ಎಂದರು. ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ನಾಯಕರು ಮಾತನಾಡಿದರು. ಮೂರು ಕೃಷಿ ಖಾಯ್ದೆಗಳ ವಿರುದ್ದ ರೈತರು ನಡೆಸಿದ ನಿರಂತರ ಹೋರಾಟದಂತೆ ವಿದ್ಯುತ್ ಖಾಸಗೀಕರಣದ ವಿರುದ್ದ ವಿವಿಧ ಹಂತಗಳ ಹೋರಾಟ ನಡೆಸಲು ಮತ್ತು ಬೃಹತ್ ಪ್ರಮಾಣದ ಹೋರಾಟ ರೂಪಿಸಲು ನಿರ್ಣಯ ತೆಗೆದುಕೊಂಡರು.





ಪಂಪ್ ಸೆಟ್‌ಗಳಿಗೂ ಮೀಟರ್

ಹೌದು, ನೀವು ಕೃಷಿಗಾಗಿ ನಿಮ್ಮ ಜಮೀನಿನಲ್ಲಿ ಅಳವಡಿಸಿರುವ ಪಂಪ್ ಸೆಟ್ ಗಳಿಗೆ ಉಚಿತವಾಗಿ ವಿದ್ಯುತ್ ಬಳಕೆ ಮಾಡುತ್ತಿರುವಿರಿ. ನೀವು ತಿಂಗಳಿಗೆ 10 ಸಾವಿರ ರೂ ವಿದ್ಯುತ್ ಬಳಕೆ ಮಾಡುತ್ತಿರುವಿರಿ ಎಂದಿಟ್ಟುಕೊಳ್ಳಿ. ಈಗ ಅದನ್ನು ನೀವು ಕಟ್ಟಬೇಕಿಲ್ಲ. ನೀವು ಬಿಲ್ ಕಟ್ಟಲಿಲ್ಲ ಎಂದು ವಿದ್ಯುತ್ ಕಂಪನಿಯ ನೌಕರ ನಿಮ್ಮ ಪಂಪ್ ಸೆಟ್ ಬಳಿ ಬಂದು ವಿದ್ಯುತ್ ಸಂಪರ್ಕ ಕಡಿತ ಮಾಡುವುದಿಲ್ಲ. ಏಕೆಂದರೆ ಸರ್ಕಾರ ಈ ಹಣವನ್ನು ವಿದ್ಯುತ್ ವಿತರಣಾ ಕಂಪನಿಗಳಿಗೆ ಭರ್ತಿ ಮಾಡಿಕೊಡುತ್ತದೆ. ಆದರೆ, ವಿದ್ಯುತ್ (ತಿದ್ದುಪಡಿ) ಮಸೂದೆ–2022 ಖಾಯ್ದೆಯಾದರೆ ಪಂಪ್ ಸೇಟ್ ಗಳಿಗೂ ಮೀಟರ್ ಅಳವಡಿಸಬೇಕು. ವಿದ್ಯುತ್ ಬಳಕೆ ಮಾಡುವ ಪ್ರತಿಯೊಬ್ಬರಿಗೂ ಮೀಟರ್ ಅಳವಡಿಸಲು ವಿದ್ಯುತ್ ವಿತರಣಾ ಕಂಪನಿಗಳಿಗೆ ಈ ತಿದ್ದುಪಡಿ ಖಾಯ್ದೆ ಅಧಿಕಾರ ಕೊಡುತ್ತದೆ. ರೈತರೂ ಸಹಾ ಪ್ರಿಪೇಯ್ಡ್ ಮೀಟರ್ ಗಳನ್ನೇ ಅಳವಡಿಸಿಕೊಳ್ಳಬೇಕು. ರೈತರಿಗೆ ವಿದ್ಯುತ್ ಸಂಪರ್ಕ ಬೇಕು ಎನಿಸಿದರೆ ಮೊದಲೇ ಹತ್ತು ಸಾವಿರ ರೂ ಹಣ ಕೊಟ್ಟು ರೀಚಾರ್ಜ್ ಮಾಡಿಸಬೇಕು. ತುಂಬಿರುವ ಹಣ ಖಾಲಿಯಾಗುತ್ತಿದ್ದಂತೆ ವಿದ್ಯುತ್ ಸಂಪರ್ಕ ಕಡಿತವಾಗುತ್ತದೆ. ಇಂದು ಬಹಳಷ್ಟು ಬಡ ರೈತರು ಬಿತ್ತನೆ ಮಾಡುವುದರಿಂದ ಹಿಡಿದು ಬೆಳೆ ಕಟಾವು ಮಾಡುವ ವರೆಗೂ ಸಾಲ ಮಾಡಿಯೇ ವ್ಯವಸಾಯ ಮಾಡುವ ಸ್ಥಿತಿಯಲ್ಲಿದ್ದಾರೆ. ಇನ್ನು ವಿದ್ಯುತ್ ಮೀಟರ್ ರೀಚಾರ್ಜ್ ಮಾಡಿಸಲೂ ಹತ್ತಾರು ಸಾವಿರ ಸಾಲ ಮಾಡಬೇಕಾಗುತ್ತದೆ.

ನೇರ ನಗದು ಯೋಜನೆ ಎಂಬ ವಂಚನೆ:

ಈ ಮಸೂದೆಯಲ್ಲಿ ಮತ್ತೊಂದು ವಂಚನೆಯ ಅಂಶವಿದೆ. ಅದೇನೆಂದರೆ ನೇರ ನಗದು ಯೋಜನೆ. ರೈತರು ಮತ್ತು ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಯೋಜನೆಯ ಫಲಾನುಭವಿಗಳು ಮೊದಲೇ ಹಣ ಕೊಟ್ಟು ವಿದ್ಯುತ್ ಮೀಟರ್ ಗೆ ರೀಚಾರ್ಜ್ ಮಾಡಿಸಿಕೊಳ್ಳಬೇಕು. ಆ ಹಣವನ್ನು ನೇರನಗದು ಯೋಜನೆ ಮೂಲಕ ಫಲಾನುಭವಿಗಳ ಖಾತೆಗೆ ಹಾಕಲಾಗುವುದು ಎಂಬ ಅಂಶವನ್ನು ಈ ಮಸೂದೆಯಲ್ಲಿ ಸೇರಿಸಲಾಗಿದೆ. ವಿದ್ಯುತ್ (ತಿದ್ದುಪಡಿ) ಮಸೂದೆಗೆ ಬಡ ಜನತೆಯ, ರೈತರ ವಿರೋಧ ಬಾರದಿರುವಂತೆ ನೋಡಿಕೊಳ್ಳಲು ಸರ್ಕಾರ ಪ್ರಾರಂಭದಲ್ಲಿ ಇಂತಹ ಹಲವು 'ಅಮಿಷ'ಗಳನ್ನೊಳಗೊಂಡ ಯೋಜನೆಗಳನ್ನು ಘೋಷಣೆ ಮಾಡಬಹುದು. ಅವುಗಳಲ್ಲಿ 'ನೇರ ನಗದು ಯೋಜನೆ' ಒಂದು ತಂತ್ರವಷ್ಟೆ. 'ರೈತರು ಮತ್ತು ಬಡವರ ಹೆಸರಿನಲ್ಲಿ ಉಳ್ಳವರು ಉಚಿತ ವಿದ್ಯುತ್ ಪಡೆಯುತ್ತಿದ್ದಾರೆ. ಜನರ ತೆರಿಗೆಯ ಹಣ ಹೀಗೆ ವ್ಯರ್ಥವಾಗುತ್ತಿದೆ. ಇದನ್ನು ತಪ್ಪಿಸಬೇಕಾಗಿದೆ. ಎಲ್ಲರೂ ಮೀಟರ್ ಅಳವಡಿಕೊಳ್ಳಿ. ಮೊದಲೇ ವಿದ್ಯುತ್ ಬಿಲ್ ಕಟ್ಟಿ. ನಿಮ್ಮ ಹಣವನ್ನು ನೇರ ನಗದು ಯೋಜನೆ ಮೂಲಕ ನಿಮ್ಮ ಖಾತೆಗೆ ತುಂಬಿಕೊಡುತ್ತೇವೆ. ನಮ್ಮ ಸರ್ಕಾರ ರೈತರು ಮತ್ತು ಕಡು ಬಡವರ ಪರವಾಗಿದೆ' ಎಂದು ನಮ್ಮನ್ನು ನಂಬಿಸಲು ಸರ್ಕಾರ ಮುಂದಾಗುತ್ತದೆ. ಇದೇ ರೀತಿಯ ತಂತ್ರ ಅನುಸರಿಸುವ ಮೂಲಕ ಅಡುಗೆ ಅನಿಲದ ಮೇಲಿನ ಸಬ್ಸಿಡಿಯನ್ನು ಸಂಪೂರ್ಣವಾಗಿ ಹಿಂಪಡೆದದ್ದನ್ನು ಮರೆಯಲಾದೀತೆ? ಇದನ್ನೇ ಉಚಿತ ವಿದ್ಯುತ್ ಬಳಕೆದಾರರಿಗೂ ಅನ್ವಹಿಸಲು ಕೇಂದ್ರ ಸರ್ಕಾರ ಹೊರಟಿದೆ.

ಮೂಲಕ ತಮ್ಮ ಕೂಲಿಯನ್ನು ನೇರನಗದು ಯೋಜನೆ ಮೂಲಕವೇ ಪಡೆಯುವಂತೆ ಮಾಡುವ ಮೂಲಕ, ಪ್ರತಿಯೊಂದು ಕುಟುಂಬವೂ ಒಂದಾದರೂ ಮೊಬೈಲ್ ಹೊಂದಿರಲೇ ಬೇಕಾದ ಅನಿವಾರ್ತೆಯನ್ನು ಸರ್ಕಾರ ತಂದಿಟ್ಟಿದೆ. ವಿದ್ಯುತ್ ಸಂಪರ್ಕ ಪಡೆಯದ ಈ ಕುಟುಂಬಗಳು ಮೊಬೈಲ್ ಚಾರ್ಜ್ ಮಾಡುಲೂ ನೆರೆಮನೆಯವರನ್ನು ಅವಲಂಭಿಸಬೇಕಾದ ಸ್ಥಿತಿ ಇದೆ. ಈ ತಿದ್ದಪಡಿ ಮಸೂದೆ ಜಾರಿಗೆ ಬಂದರೆ ಬಿಪಿಎಲ್ ಕುಟುಂಬಗಳಿಗೆ, ಪರಿಶಿಷ್ಠ ಜಾತಿ ಮತ್ತು ಪಂಗಡಗಳಿಗೆ ರಾಜ್ಯ ಸರ್ಕಾರಗಳು ಒದಗಿಸುತ್ತಿರುವ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಸೌಲಭ್ಯಗಳು ಇಲ್ಲದಂತಾಗುತ್ತವೆ. ತಿಂಗಳಿಗೆ 50–60 ಯೂನಿಟ್ ವಿದ್ಯುತ್ ಬಳಸುತ್ತಿರುವ ಬಿಪಿಎಲ್ ಕುಟುಂಬಗಳು ವಿದ್ಯುತ್ ಬಳಕೆಯಿಂದ ವಂಚಿರಾಗಬೇಕಾಗುತ್ತದೆ.

ಪವರ್ ಗ್ರಿಡ್ ಗಳ ಜಾಲ ನಗದೀಕರಣ:

2014ರಲ್ಲಿ ಲೋಕಸಭೆಯಲ್ಲಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಉದಾರೀಕರಣ ನೀತಿಗಳ ವೇಗವಾಗಿ ಜಾರಿಗೆ ತರುತ್ತಿದೆ. ರಾಷ್ಟ್ರೀಯ ಸಂಪತ್ತು ಮತ್ತು ಆಸ್ತಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗುತ್ತಿದೆ. ಇದರಲ್ಲಿ ವಿದ್ಯುತ್ ವಲಯವೂ ಸೇರಿದೆ. ವಿದ್ಯುತ್ (ತಿದ್ದುಪಡಿ) ಕಾಯ್ದೆ ಜಾರಿಗೆ ತರಲು 2014ರ ನಂತರ ಐದು ಬಾರಿ ಪ್ರಯತ್ನಪಟ್ಟು ಅದರಲ್ಲಿ ವಿಫಲವಾಗಿದೆ. ಪವರ್ ಗ್ರಿಡ್ ಗಳ ಜಾಲವನ್ನು ನಗದೀಕರಿಸುವುದಾಗಿ ಘೋಷಣೆ ಮಾಡಿದೆ. 'ನಗದೀಕರಣ' ಎಂಬ ಹೆಸರಿಟ್ಟು ಅತ್ಯಲ್ಪ ಹಣಕ್ಕೆ ಪವರ್ ಗ್ರಿಡ್ ಗಳನ್ನು ಖಾಸಗಿಯವರಿಗೆ ಒಪ್ಪಿಸಲು ಸರ್ಕಾರ ಮುಂದಾಗಿದೆ. ಇದರ ಮುಂದುವರಿದ ಭಾಗವಾಗಿ ವಿದ್ಯುತ್ ವಲಯವನ್ನು ಸಂಪೂರ್ಣವಾಗಿ ಖಾಸಗೀಕರಣ ಮಾಡಲು ವಿದ್ಯುತ್ ಮಸೂದೆ 2022 ಅನ್ನು ಕಾಯ್ದೆಯನ್ನಾಗಿಸಲು ಕೇಂದ್ರ ಸರ್ಕಾರ ಶತಪ್ರಯತ್ನ ಮಾಡುತ್ತಿದೆ.

ಸಣ್ಣ ಕೈಗಾರಿಕೆಗಳಿಗೂ ಆಪತ್ತು: ಈ ತಿದ್ದುಪಡಿ ಮಸೂದೆಯಲ್ಲಿ ಮತ್ತೊಂದು ಅಂಶ ಸೇರಿಸಲಾಗಿದೆ. ಅದೇನೆಂದರೆ, ವಿದ್ಯುತ್ ಉತ್ಪಾದನೆಯಿಂದ ಪ್ರಾರಂಭವಾಗಿ ವಿತರಣೆವರೆಗೆ ಆಗುವ ವೆಚ್ಚಗಳನ್ನು ಲೆಕ್ಕ ಹಾಕಿ, ಅದಕ್ಕೆ ಶೇ. 17ರಷ್ಟು ಲಾಭಾಂಶ ಸೇರಿಸಿ ದರ ನಿಗದಿ ಮಾಡಲು ಕಂಪನಿಗಳಿಗೆ ಅವಕಾಶ ಕೊಟ್ಟಿದೆ. (ಆಫ್ ಆಧಾರಿತ ಟ್ಯಾಕ್ಸಿ ಸೇವೆಯಲ್ಲಿ ತೊಡಗಿರುವ ಕಂಪನಿಗಳು ಸರ್ಕಾರ ನಿಗಧಿಪಡಿಸಿರುವ ದರಕ್ಕೆ ಕಿಮ್ಮತ್ತು ಕೊಡುತ್ತಿಲ್ಲ ಎಂಬುದನ್ನು ಗಮನಿಸಿದಾಗ, ಖಾಸಗೀ ವಿದ್ಯುತ್ ಕಂಪನಿಗಳು ಏನು ಮಾಡಿಯಾರು ಎಂಬುದನ್ನು ಈಗಲೇ ಊಹಿಸಬಹುದು) ಇದರರ್ಥ ವಿದ್ಯುತ್ ವಲಯ ಖಾಸಗಿಯವರ ಪಾಲಾದರೆ ವಿದ್ಯುತ್ ದರ ವಿಪರೀತ ಹೆಚ್ಚಳವಾಗುತ್ತದೆ. ಕೈಗಾರಿಕೆಗಳು ಬಳಸುವ ವಿದ್ಯುತ್ ದುಬಾರಿಯಾಗುತ್ತವೆ. ಪ್ರಿಪೇಯ್ಡ್ ಮೀಟರ್ ವ್ಯವಸ್ಥೆಯಿಂದಾಗಿ ಸಣ್ಣ ಕೈಗಾರಿಕೆಗಳು ಬಂಡವಾಳ ತೊಡಗಿಸಲಾಗದೆ ಸೊರಗುತ್ತವೆ. ಮತ್ತೊಂದೆಡೆ ಉತ್ಪಾಧನಾ ವೆಚ್ಚ ಹೆಚ್ಚಾಗುತ್ತದೆ. ಉತ್ಪಾಧನಾ ವೆಚ್ಚವನ್ನು ತುಂಬಿಕೊಳ್ಳಲು ಉತ್ಪನ್ನಗಳ ಬೆಲೆ ಹೆಚ್ಚಿಸುತ್ತಾರೆ. ಅಗತ್ಯ ವಸ್ತುಗಳ ಬೆಲೆ ದುಬಾರಿಯಾಗುತ್ತವೆ. ಅಂತಿಮವಾಗಿ ಇದು ಗ್ರಾಹಕರಿಗೆ

ಪುಟ 10 ಕ್ಕೆ



ಕಾರ್ಮಿಕರ ಸಮ್ಮೇಳನಕ್ಕೆ ಅಪೂರ್ವ ಸ್ಪಂದನ

ಆರ್‌ಎಸ್‌ಎಸ್ ನವರು ಕೆಂಬಾವುಟಕ್ಕೆ ಹಣ ನೀಡೋಲ್ಲ ಎಂದರೆ... ಹಣ್ಣು ನೀಡಿ ಹಣ ನೀಡಿದವರೂ ಇದ್ದಾರೆ

ದೇವಿಕ ರಾಮು

2023 ಜನವರಿ 18 ರಿಂದ 22 ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನ ತಯಾರಿ ಭರದಿಂದ ನಡೆಯುತ್ತಿದೆ. ಬೆಂಗಳೂರಿನ ಉದ್ದಗಲದಲ್ಲೂ ಸ್ಥಳೀಯ ಸ್ವಾಗತ ಸಮಿತಿಗಳನ್ನು ರಚಿಸಿಕೊಂಡು ಬೀದಿ ಸಂಗ್ರಹ, ಮನೆ–ಮನೆ ನಿಧಿ ಸಂಗ್ರಹ, ಪ್ರಚಾರ ನಡೆಯುತ್ತಿವೆ.

ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ನವೆಂಬರ್ 19, 2022 ರಿಂದ ಸಾಮೂಹಿಕ ನಿಧಿ ಸಂಗ್ರಹಕ್ಕೆ ಕರೆ ನೀಡಿತ್ತು. ಜ್ಯೋತಿಬಸು ಭವನ ಸಿಬ್ಬಂದಿಗಳ ತಂಡಕ್ಕೂ ರೂ.50 ಸಾವಿರ ಕೋಟಾ ನೀಡಿತ್ತು. ನಾವು ಸಹಾ ನವೆಂಬರ್ 19 ರಿಂದ ನಿಧಿ ಸಂಗ್ರಹ ಮಾಡಲು ಆರಂಭಿಸಿದೆವು. ಪ್ರಾರಂಭದ ಮೊದಲ ದಿನವೇ ನೀರಸ ಪ್ರತಿಕ್ರಿಯೆ. ಕಾರಣ ನಾವು ಪ್ರಾರಂಭಿಸಿದ ಪ್ರದೇಶ ಗಾಂಧಿ ಬಜಾರ್ ಹೇಳಿ ಕೇಳಿ ಕೇಸರಿ ಪಡೆಯ ಪ್ರದೇಶ. ಅವರು ನಮ್ಮ ಕೆಂಪು ಧ್ವಜದ ಮನವಿ ಕೇಳುತ್ತಾರೆಯೇ? ಯಾರೊಬ್ಬರೂ ನಮ್ಮ ಮಾತನ್ನು ಕೇಳಲು ತಯಾರಿರಲಿಲ್ಲ. ದೊಡ್ಡ ದೊಡ್ಡ ಅಂಗಡಿಗಳಿಗೆ ಹೆಸರುವಾಸಿಯಾದ ಗಾಂಧಿ ಬಜಾರಿನಲ್ಲಿ ಅಂಗಡಿಯ ಮಾಲೀಕರಿಗೆ ನಮ್ಮ ಕರಪತ್ರ ಪಡೆಯಲಾಗಲಿ, ನಮ್ಮ ಮಾತನ್ನಾಗಲಿ ಕೇಳುವ ತಾಳ್ಮೆ, ಆಸಕ್ತಿ ಇರಲಿಲ್ಲ. ಕನಿಷ್ಟ ಹತ್ತು ರೂಪಾಯಿ ಕೊಡುವ ಮನಸ್ಥಿತಿಯೂ ಅವರಲ್ಲಿ ಇರಲಿಲ್ಲ. ಅಂದು ನಮಗೆ ಕಾಡಿದ ಪ್ರಶ್ನೆ ನಮ್ಮಿಂದ ಕೋಟಾ ಪ್ರಕಾರ 50 ಸಾವಿರ ರೂ ನಿಧಿ ಸಂಗ್ರಹ ಸಾಧ್ಯವೇ? ಎಂಬುದು.

ಪುಟ್ಟ ಬಂಡವಾಳಿಗರ ಗುಣ:

ಅಂದು ಎಲ್ಲಾ ಪ್ರದೇಶಗಳಲ್ಲಿ ಒಳ್ಳೆಯ ನಿಧಿಸಂಗ್ರಹವಾಗಿತ್ತು. ಆದರೆ ನಮ್ಮ ತಂಡದಿಂದ ಅಂತಹ ದೊಡ್ಡ ಮೊತ್ತವೇನು ಸಂಗ್ರಹವಾಗಿರಲಿಲ್ಲ ಇರಲಿ ನೋಡೋಣ ಎಂದುಕೊಂಡೆವು. ಮರುದಿನದಿಂದ ಮತ್ತೆ ನಮ್ಮ ಪ್ರಯತ್ನಗಳು ಮುಂದುವರೆಯಿತು. ಅದೇ ಪ್ರತಿಕ್ರಿಯೆ. ಆದರೂ ಪ್ರತಿ ಅಂಗಡಿಯ ಮುಂದೆ ನಿಂತು ನಮ್ಮ ಕರಪತ್ರ ನೀಡಿ ಧನ ಸಹಾಯ ಮಾಡಲು ಕೋರುವುದನ್ನು ಬಿಡಲಿಲ್ಲ. ಹತ್ತು ಅಂಗಡಿ ಕೇಳಿದರೆ ಒಂದು ಅಂಗಡಿಯವರು ನೀಡುತ್ತಿದ್ದರು. ಅದೂ ಬಹುತೇಕ ರೂ. 20/–ಆಗಿತ್ತು. ಆದರೆ ನಮ್ಮ ಶ್ರಮಕ್ಕೆ ಪ್ರತಿಕ್ರಿಯಿಸಿದ್ದೆ ಅಲ್ಲಿನ ಬೀದಿಬದಿ ವ್ಯಾಪಾರಿಗಳು. ಅವರ ಮುಂದೆ ನಾವು ನಿಂತು ಕೇಳಿದ ಕೂಡಲೇ ಹಣ ನೀಡುತ್ತಿದ್ದರು. ಆದರೆ ಅಂಗಡಿ ಮಾಲೀಕರು ಕಾರ್ಮಿಕರ ಪರ ಸಮ್ಮೇಳನಕ್ಕೆ ನಾವು ಮಾಲೀಕರು ಯಾಕೆ ಸಹಾಯ ಮಾಡಬೇಕು. ಕಾರ್ಮಿಕರನ್ನು ಮಾಲೀಕರ ಪರ ಎತ್ತಿಕಟ್ಟಲು ನಾವು ಹಣ ಕೊಡಬೇಕಾ ಅನ್ನುತ್ತಿದ್ದರು. 'ದುಡಿದ ಶ್ರಮಕ್ಕೆ ಅನುಗುಣವಾಗಿ ಸಂಬಳ ನೀಡಿದರೆ ಯಾವ ಕಾರ್ಮಿಕ ತಾನೇ ಮಾಲೀಕರ ವಿರುದ್ಧ ತಿರುಗಿ ಬೀಳುತ್ತಾರೆ ಸಾರ್' ಅಂತ ನಾವು ಹೇಳುವ ಮಾತು ಕೇಳೋ ತಾಳ್ಮೆ ಅವರಿಗಿರಲಿಲ್ಲ. ಆಗ ನಮಗೆ ವ್ಯಾಪಾರಿಗಳ ಕುರಿತು, ಅವರುಗಳ ನಡುವೆ ಇರುವ ವಿವಿಧ ತರಹದ ವ್ಯಾಪಾರಿಗಳ ವಿಭಾಗಗಳು, ಬೀದಿಬದಿ ವ್ಯಾಪಾರಿಗಳು, ಅಂಗಡಿ ವ್ಯಾಪಾರಿಗಳು, ಸಂಘಟಿತ ವಲಯ ವ್ಯಾಪಾರಿಗಳು ಮತ್ತು ಅವರ ವರ್ಗ ನೆಲೆ, ಅವರ ರಾಜಕೀಯ ಒಲುವು–ನಿಲುವುಗಳು ಅವರ ಪ್ರತಿಕ್ರಿಯೆಯಿಂದ ತಿಳಿಯಲಾರಂಭವಾಯಿತು.

ನಾವು ಆರ್‌ಎಸ್‌ಎಸ್–ಹಣ ಕೊಡುವುದಿಲ್ಲ:

ಕೆಲವು ಅಂಗಡಿ ಮಾಲೀಕರು ನಾವು ಆರ್.ಎಸ್.ಎಸ್. ನಾವು ಹಣ ಕೊಡುವುದಿಲ್ಲ ಎಂದು ನೇರವಾಗಿ ಹೇಳುತ್ತಿದ್ದರು. ಇನ್ನು ಕೆಲವರು ನಮ್ಮನ್ನು ಅನುಮಾನದ ದೃಷ್ಟಿಯಲ್ಲಿ ನೋಡಿದರು. ನೀವು ಯಾವ ಸಂಘಟನೆಯವರು? ನಿಮ್ಮಲ್ಲಿ ಬ್ಯಾಡ್ಜ್ ಇದೆಯಾ ತೋರಿಸಿ ಎಂದೆಲ್ಲಾ ಕೇಳಿದರು. ಬ್ಯಾಡ್ಜ್ ಯಾಕೆ ಸರ್ ನಮ್ಮಲ್ಲಿ ಕರಪತ್ರವಿದೆ, ಕೂಪನ್ ಇದೆ ಸಾಲದೇ ಅಂದರೆ, ನಾನು ಕೂಡ ಒಂದು ಗಂಟೆಯಲ್ಲಿ ಇದನ್ನೆಲ್ಲ ಪ್ರಿಂಟ್ ಹಾಕಿಸಬಲ್ಲೆ ಅನ್ನುತ್ತಿದ್ದರು. ಇನ್ನು ಕೆಲವರು ನಮ್ಮ ಕೂಪನ್ ಪುಸ್ತಕಗಳನ್ನು ಪಡೆದುಕೊಂಡು ಪ್ರತಿಯನ್ನು ಗಮನಿಸಿ, ವ್ಯಂಗ್ಯವಾಗಿ ನಕ್ಕು ವಾಪಸ್ ಕೊಟ್ಟು, ನಾವೇನು ಕೊಡುವುದಿಲ್ಲ ಎಂದು ಹೇಳಿ ಕಳುಹಿಸುತ್ತಿದ್ದರು.. ಇದರ ನಡುವೆಯೇ ನಮ್ಮ ನಿಧಿ ಸಂಗ್ರಹ ಮುಂದುವರೆಯಿತು.

ಕಮ್ಯೂನಿಸ್ಟರಿಗೆ ಸಹಾಯ ನೀಡುವುದಿಲ್ಲ:

ಎಷ್ಟು ಅಂಗಡಿ ತಿರುಗಿದರೂ ನಿಧಿ ಸಂಗ್ರಹದ ಪ್ರಮಾಣ ಮಾತ್ರ ಹೆಚ್ಚುತ್ತಿರಲಿಲ್ಲ ಕೊನೆಗೆ ಗಾಂಧಿಬಜಾರಿಗೆ ಗುಡ್‌ಬೈ ಹೇಳಿ ಹನುಮಂತನಗರ,

ಪುಟ 10 ಕ್ಕೆ

ಕಾರ್ಮಿಕರ ಸಮ್ಮೇಳನಕ್ಕೆ ಅಪೂರ್ವ ಸ್ಪಂದನ...... ಪುಟ 9 ರಿಂದ

ಬ್ಯಾಂಕ್ ಕಾಲೋನಿ, ಶ್ರೀನಿವಾಸನಗರ, ಶ್ರೀನಗರ, ಕತ್ರಿಗುಪ್ಪೆ, ವಿದ್ಯಾಪೀಠ, ಅಶೋಕನಗರ ಈ ಪ್ರದೇಶಗಳಲ್ಲಿ ಸಂಗ್ರಹ ಮಾಡಲು ಪ್ರಾರಂಭಿಸಿದೆವು. ಇಲ್ಲಿ ಗಾಂಧಿಬಜಾರಿಗಿಂತ ಒಳ್ಳೆಯ ಪ್ರತಿಕ್ರಿಯೆ ಇತ್ತು ಕೂಡಾ. ಅಲ್ಲೂ ಕೆಲವೊಂದು ಮಾಲೀಕರು ಕೇಸರಿ ಪಡೆಯವರಾಗಿದ್ದು ಅವರ ಪ್ರತಿಕ್ರಿಯೆ ನೀರಸವಾಗಿತ್ತು. ಉಳಿದಂತೆ ತಕ್ಕಮಟ್ಟಿಗೆ ನಿಧಿ ಸಂಗ್ರಹವಾಗುತ್ತಿತ್ತು. ಕೆಲವರು ನಮ್ಮ ಕರಪತ್ರ ಪಡೆದು ನಮ್ಮ ಮಾತು ಕೇಳಿ ಕುಡುಗೋಲು ಸುತ್ತಿಗೆ ನೋಡಿದ ತಕ್ಷಣ 'ನೀವು ಕಮ್ಯೂನಿಸ್ಟರಾ, ನಾವು ಸಹಾಯ ಮಾಡುವುದಿಲ್ಲ. ನಿಮ್ಮದು ನಮ್ಮ ದೇಶದ ಸಿದ್ಧಾಂತವಲ್ಲ, ಚೀನಾ ದೇಶದ ಸಿದ್ಧಾಂತ. ಪರದೇಶದ ಸಿದ್ಧಾಂತ ನಮಗೇಕೇ? ನಮ್ಮ ದೇಶದ ಸಿದ್ಧಾಂತವಿಲ್ಲವೇ? ನಮ್ಮ ಸಹಾಯವಿಲ್ಲ' ಎಂದು ನೇರವಾಗಿ ಹೇಳುತ್ತಿದ್ದರು? ಸಿದ್ಧಾಂತ ಯಾವುದಾದರೇನು ಸರ್ ಜನಪರ ಸಂಘಟನೆ ನಮ್ಮದು ಅಂದರೂ ಕೇಳೋ ಮನಸ್ಥಿತಿ ಅವರಲ್ಲಿ ಇರಲಿಲ್ಲ.

ಬೆಂಬಲವಿಲ್ಲ ಎಂದವರು–ಕಾಫಿ ಕುಡಿಯಿರಿ ಎಂದರು:

ಇನ್ನು ಶ್ರೀನಿವಾಸನಗರದಲ್ಲಿ ಒಂದು ಆಫೀಸಿನ ಮುಂದೆ ನಾವು ನಾಲ್ಕು ಜನ ಹೆಣ್ಣುಮಕ್ಕಳು ಕರಪತ್ರ ಹಿಡಿದು ಹೋದಾಗ ಒಳಗೆ ಕರೆದು ಕುರ್ಚಿ ಹಾಕಿ ಕೂರಲು ಹೇಳಿದರು. ನಾವು ಪರವಾಗಿಲ್ಲ ಸರ್, ನಾವು ಸಿಐಟಿಯು ಸಂಘಟನೆಯಿಂದ ಬಂದಿದ್ದೇವೆ ಎಂದು ಕರಪತ್ರ ನೀಡಿ ಮಾತು ಶುರು ಮಾಡಿದೆವು. ಆದರೆ ಅವರು 'ಮೊದಲು ಕೂತುಕೊಳ್ಳಿ ನಂತರ ನಿಮ್ಮ ಮಾತು ಕೇಳುವೆ' ಎಂದು ಗೌರವ ಕೊಟ್ಟರು. ಸರಿ ನಾವೆಲ್ಲ ಕೂತುಕೊಂಡೆವು. ಕಾಫಿ ಕುಡಿತೀರೋ ಅಥವಾ ಟೀ ನಾ ಅಂದರು. ಸರ್ ಅದೆಲ್ಲ ಏನೂ ಬೇಡ ತಮ್ಮಿಂದ ಧನ ಸಹಾಯಕ್ಕಾಗಿ ಕೋರಿ ಬಂದಿದ್ದೇವೆ ಅಂದೆವು. ಇರಲಿ ಕಾಫಿ ಕುಡಿಯುತ್ತಾ ಮಾತೋಡೋಣ ಅಂದರು. ನಮಗೆ ಫುಲ್ ಖುಷಿ, ಎಂತ ಗೌರವ ಅಂತ. ಕೊನೆಗೂ ನಾವು ಕಾಫಿ ಬೇಡ ಎಂದು ಕರಪತ್ರ ನೀಡಿ ಮಾತು ಶುರು ಮಾಡಿದೆವು. ಆ ಮಾಲೀಕ ಕರಪತ್ರ ಹಿಂದೆ ಮುಂದೆ ನೋಡಿ ಕುಡುಗೋಲು ಸುತ್ತಿಗೆ ಚಿಹ್ನೆ ನೋಡಿ. ಸಾರಿ ಮೇಡಂ ನಾವು ಈ ಚಿಹ್ನೆಯ ವಿರುದ್ಧ. ನಾನು ಸಹಾಯ ಮಾಡಲಾರೆ ಅಂದರು. ಯಾಕೆ ಸರ್ ಅಂದೆ. ಚರ್ಚೆ ಬೇಡ ನಿಮ್ಮನ್ನು ನಾನು ಗೌರವಿಸಿದೆ. ನನ್ನ ಮಾತನ್ನು ನೀವು ಗೌರವಿಸಬೇಕು ಅಂದರು. ಸರಿ ಸರ್, ಒತ್ತಾಯ ಇಲ್ಲ. ನಾವು ಹೊರಡುತ್ತೇವೆ ಅಂದೆವು. ಕಾಫಿ ಕುಡಿದು ಹೋಗಿ ಅಂದರು. ಬೇಡ ಸರ್ ನಮ್ಮ ಸಂಘಟನೆ ಬಗ್ಗೆ ನಿಮಗೆ ಒಳ್ಳೆ ಅಭಿಪ್ರಾಯ ಇಲ್ಲ ಎಂದು ತಿಳಿದು ನಾವು ಕಾಫಿ ಹೇಗೆ ಕುಡಿಯೋದು ಕ್ಷಮಿಸಿ ಎಂದು ಅಲ್ಲಿಂದ ಹೊರಟೆವು.

ಒಳ್ಳೆಯ ಕೆಲಸಕ್ಕೆ ನಮ್ಮ ಬೆಂಬಲ:

ಮಾರನೇ ದಿನ ಅದೇ ಬೀದಿಯಲ್ಲಿ ಒಂದು ಹಾರ್ಡ್‌ವೇರ್ ಶಾಪ್‌ಗೆ ಹೋದೆವು. ಅಲ್ಲಿಯ ಮಾಲೀಕ ನಮ್ಮ ಮಾತು ಕೇಳಿ 'ದಿನಕ್ಕೆ ನೂರಾರು ಜನ ಈ ರೀತಿ ಹಣ ಕೇಳಿ ಬರುತ್ತಾರೆ. ನಾವು ಯಾರಿಗೆ ಕೊಡೋದು ಮೇಡಂ' ಅಂದರು. ಅದಕ್ಕೆ ನಾವು, ನಿಜ ಸರ್, ದಿನಕ್ಕೆ ನೂರಾರು ತರಹದ ಜನ ಹಣ ಕೇಳಿ ಬರುತ್ತಾರೆ, ಆದರೆ ಕಾರ್ಮಿಕರ ಪರವಾಗಿ ಹಣ ಕೇಳುವವರು ಯಾರೂ ಬಂದಿರುವುದಿಲ್ಲ ಎಂದೆವು. ಆದರೂ ಅವರಿಗೆ ಅನುಮಾನ. ನಾವು ಕೊಡೊ ಹಣ ಯಾರಿಗೆ ತಗೊಂಡು ಹೋಗಿ ಕೊಡುತ್ತೀರಾ? ಎಂದರು. ನಮ್ಮ ಆಫೀಸಿಗೆ ಪ್ರತಿದಿನ ಲೆಕ್ಕ ಕೊಡಬೇಕು ಸಾರ್. ಹಾಗಾಗಿ ಪ್ರತಿ ಹಣಕ್ಕೂ ನಾವು ಕೂಪನ್ ಕೊಡುತ್ತೇವೆ. ಅದರಿಂದ ಲೆಕ್ಕ ಸಿಗುತ್ತದೆ. ನಿಮ್ಮ ಹಣ ಸದುಪಯೋಗ ಆಗುತ್ತೆ. ಆ ಸಂಶಯ ಬೇಡ ಅಂದೆ. ಆಗ ಆತ ನಮ್ಮ 100/– ರ ಕೂಪನ್ ಪಡೆದು ಚೆಕ್ ಮಾಡಿ ಹತ್ತು ಹಾಳೆಯನ್ನು ಎಣಿಸುತ್ತಿದ್ದರು ಆಗ ನಾನು ಪ್ಲೇನ್ ಕೂಪನ್ ತೋರಿಸಿದೆ. ಆಗ ಆತ 2000 ರೂ ಹಣದ ರಸೀದಿಯನ್ನು ಅವರೇ ಬರೆದು ಕೊಟ್ಟರು. ಒಳ್ಳೆಯ ಕೆಲಸಕ್ಕೆ ಉಪಯೋಗಿಸಿ ಅಂದ್ರು. ಖಂಡಿತಾ ಸರ್, ಅನುಮಾನ ಬೇಡ. ನಿಮಗೆ ಬಿಡುವಾದಾಗ ಬಸವನಗುಡಿಯಲ್ಲಿರುವ ನಮ್ಮ ಕಚೇರಿಗೆ ಒಮ್ಮೆ ಭೇಟಿ ನೀಡಿ. ನಮ್ಮ ಆಫೀಸ್ ಹಾಗೂ ನಮ್ಮ ಶ್ರಮಿಕ್ ಕ್ಲಿನಿಕ್ ನೋಡಿದಾಗ ನಿಮಗೆ ಸಂಪೂರ್ಣ ನಂಬಿಕೆ ಬರುತ್ತದೆ ಎಂದು ಹೇಳಿ ಅಲ್ಲಿಂದ ಹೊರಟೆವು.

ಹಣ್ಣು ಕೊಟ್ಟು – ಹಣವನ್ನೂ ಕೊಟ್ಟರು:

ನಂತರ ಸಿಟಿ ಮಾರ್ಕೆಟ್, ಅವಿನ್ಯೂ ರಸ್ತೆ, ಚಿಕ್ಕಪೇಟೆ ಕಡೆಗೆ ಹೊರಟೆವು. ಅಲ್ಲಿ ಸಣ್ಣ ವ್ಯಾಪಾರಿಗಳಿಂದ ಒಳ್ಳೆಯ ಪ್ರತಿಕ್ರಿಯೆ ಇತ್ತು. ಆ ಪ್ರತಿಕ್ರಿಯೆಯ ನಡುವೆಯೂ ಒಂದು ಮಾತು ಹೇಳುತ್ತಿದ್ದರು, ಮೇಡಂ ನೀವು ದೊಡ್ಡ ದೊಡ್ಡ ಮಾಲೀಕರ ಹತ್ತಿರ ಹೋದರೆ ಸಾವಿರಗಟ್ಟಲೆ ಸಿಗುತ್ತೆ. ನಾವು ಬಡವರು ನಮ್ಮಿಂದ 10–20 ಸಿಗುತ್ತೆ ಅಷ್ಟೆ ಅಂದರು. ಅದಕ್ಕೆ ಸರ್, ನಾವು ಮಾಲೀಕರ ಪರ ಸಮ್ಮೇಳನ ಮಾಡುತ್ತಿಲ್ಲ, ನಾವು ದುಡಿಯುವ ವರ್ಗದ ಪರ ಸಮ್ಮೇಳನ ಮಾಡುತ್ತಿರುವುದು. ಇದಕ್ಕೆ ದುಡಿಯುವ ಜನರ ಬೆಂಬಲ ಬೇಕು. ಹಾಗಾಗಿ ನಿಮ್ಮ ಬಳಿಗೆ ಬಂದಿದ್ದೇವೆ. ನಿಮ್ಮಂತ ದುಡಿಯುವ ಕಾರ್ಮಿಕರ ಸಮ್ಮೇಳನಕ್ಕೆ ನಿಮ್ಮ ಕೈಲಾದಷ್ಟು ಸಹಾಯ ಮಾಡಿ ಎಂದು ಹೇಳುತ್ತಿದ್ದೆವು. ಆ ಸಂದರ್ಭದಲ್ಲಿ ಒಬ್ಬ ಹಣ್ಣು ವ್ಯಾಪಾರಿ ನನಗೆ ವ್ಯಾಪಾರ ಸರಿ ಆಗಿಲ್ಲ ಮೇಡಂ ಎನ್ನುತ್ತ ಆಪಲ್ ಕಟ್ ಮಾಡಿಕೊಟ್ಟು, ಈ ಹಣ್ಣು ತಿಂದು ಶಕ್ತಿ ಬರಿಸಿಕೊಳ್ಳಿ. ನಿಮ್ಮ ಕೆಲಸ ಚೆನ್ನಾಗಿ ಆಗುತ್ತೆ ಅಂದರು. ಅದಕ್ಕೆ ನಾವು, ಸರ್ ನಮಗೆ ಹಣ್ಣು ಕೊಡೊ ದೊಡ್ಡ ಮನಸ್ಸು ನಿಮಗಿದೆ, ಹಣ್ಣಿನ ಬದಲು ನಮಗೆ ನಿಮ್ಮ ಕೈಲಾದಷ್ಟು ಹಣ ಸಹಾಯ ಮಾಡಿ ನಮ್ಮ ಸಮ್ಮೇಳನಕ್ಕೆ ಪ್ರಯೋಜನವಾಗುತ್ತೆ ಅಂದೆವು. ಅವರು ಪಕ್ಕದ ವ್ಯಾಪಾರಿಯತ್ತ ಇಪ್ಪತ್ತು ರೂ ಸಾಲ ಪಡೆದು ನಮಗೆ ನೀಡಿದರು.

ಸಣ್ಣ ಮಾಲೀಕರಿಂದ ಏನು ಸಹಾಯ ಸಿಗುತ್ತದೆ–ದೊಡ್ಡವರನ್ನು ಕೇಳಿ:

ಇನ್ನು ಚಿಕ್ಕಪೇಟೆಯಲ್ಲಿ ಸಣ್ಣ ಅಂಗಡಿ ಮಾಲೀಕರು, ನಾವು ಸಣ್ಣ ಮಾಲೀಕರು. ನಾವು ಎಷ್ಟು ಸಹಾಯ ಮಾಡಲು ಸಾಧ್ಯ? ನೀವು ದೊಡ್ಡ ದೊಡ್ಡ ರಾಜಕೀಯ ವ್ಯಕ್ತಿಗಳನ್ನು, ಚಿತ್ರ ನಟರನ್ನು ಕೇಳಿದರೆ ದೊಡ್ಡ ದೊಡ್ಡ ಮೊತ್ತ ಸಿಗುತ್ತೆ ಅಂದರು. ಅದಕ್ಕೆ, ಸರ್ ದೊಡ್ಡ ವ್ಯಕ್ತಿಗಳಿಂದ ನಾವು ಹಣ ಪಡೆದರೆ ನಿಮ್ಮಂತಹವರಿಗೆ ನಮ್ಮ ಸಮ್ಮೇಳನದ ಬಗ್ಗೆ ನಾವು ಪ್ರಚಾರ ಮಾಡೋದು ಹೇಗೆ? ನಾವು ನಿಮ್ಮ ಬಳಿ ಬಂದಿದ್ದರ ಸಲುವಾಗಿ ನಿಮಗೆ ನಮ್ಮ ಸಂಘಟನೆ ಬಗ್ಗೆ, ನಮ್ಮ ಸಮ್ಮೇಳನದ ಬಗ್ಗೆ ತಿಳಿಯಿತು. ಅದೇ ನಮ್ಮ ಉದ್ದೇಶ ಸರ್ ಅಂದಾಗ ಅವರು 50 ರೂ ಕೊಟ್ಟರು.

ಕಾರ್ಮಿಕನ ಸ್ಪಂದನೆ:

ಇನ್ನೊಂದು ಅನುಭವ ಚಿಕ್ಕಪೇಟೆಯಲ್ಲಿ. ಒಂದು ಟೀ ಅಂಗಡಿಯವರ ಬಳಿ ಹೋದಾಗ ಆತ ಹೇಳಿದ್ದು 'ಮೇಡಂ ಟೀ ಕೊಡುವೆ ಕುಡಿರಿ. ಹಣ ಇಲ್ಲ. ಮಾಲೀಕ ನಾನಲ್ಲ, ನಾನು ಕಾರ್ಮಿಕ' ಅಂದರು. ಕಾರ್ಮಿಕ ಸಂಘಟನೆಯ ಸಮ್ಮೇಳನಕ್ಕೆ ಕಾರ್ಮಿಕರ ಬೆಂಬಲ ಬೇಕು ನಿಮ್ಮ ಕೈಲಾದಷ್ಟು ಕೊಡಿ. ಬಲವಂತವಿಲ್ಲ ಎಂದಾಗ 20 ರೂ ಕೊಟ್ಟರು.

ಕೊನೆಗೂ ಕೋಟಾಕ್ಕಿಂತ ಹೆಚ್ಚು ಸಂಗ್ರಹ :

ಹೀಗೇ ನಾನಾ ಅನುಭವಗಳ ನಡುವೆಯೂ ನಾವು ಐವತ್ತು ಸಾವಿರ ಸಂಗ್ರಹ ಮಾಡೇ ತೀರಿದೆವು. ಇದರಲ್ಲಿ ಬೀದಿ ಸಂಗ್ರಹ ಒಳಗೊಂಡು, ನಮ್ಮ ಸಂಬಂಧಿಕರಿಂದ, ಸ್ನೇಹಿತರಿಂದ, ಪರಿಚಯಸ್ಥರಿಂದ, ಕಛೇರಿಗೆ ನ್ಯೂಸ್ ಪೇಪರ್ ಹಾಕುವವರಿಂದ, ಕುಡಿಯುವ ನೀರು ಹಾಕುವವರಿಂದ, ಕಂಪ್ಯೂಟರ್ ಸರ್ವಿಸ್ ಮಾಡುವವರಿಂದ, ಶ್ರಮಿಕ್ ಕ್ಲೀನಿಕ್ ಡಾಕ್ಟರ್‌ರಿಂದ, ಜೊತೆಗೆ ನಮ್ಮ ಒಂದು ದಿನದ ಸಂಬಳ ಸಂಗ್ರಹ ಎಲ್ಲವೂ ಸೇರಿ ನಮಗೆ ನೀಡಿದ ಕೋಟಾವನ್ನು ನಾವು ಪೂರ್ಣಗೊಳಿಸಿ ಜಿಲ್ಲಾ ಸಮಿತಿಗೆ ನೀಡಿರುತ್ತೇವೆ. ಕಛೇರಿ ಕೆಲಸದಲ್ಲಿ ತೊಡಗಿಕೊಂಡು, ಸಂಜೆ ಎರಡು ಗಂಟೆಗಳ ಕಾಲ ನಿಧಿ ಸಂಗ್ರಹದಲ್ಲಿ ತೊಡಗಿಕೊಂಡೆವು. ಅಂದಾಜು 2500 ದಿಂದ 3000 ಅಂಗಡಿಗಳನ್ನು ಮತ್ತು ನೂರಕ್ಕೂ ಹೆಚ್ಚು ಮನೆಗಳನ್ನು ಭೇಟಿ ಮಾಡಲು ನಮಗೆ ಸಾಧ್ಯವಾಯಿತು.

ನೀರಸ ಪ್ರಕ್ರಿಯೆದಿಂದ ಗಟ್ಟಿಗೊಳ್ಳುವ ಕುಲುಮೆಯೆಡೆಗೆ:

ನಿಧಿ ಸಂಗ್ರಹ ಪ್ರಾರಂಭ ಮಾಡಿದ ಹೊಸದರಲ್ಲಿ ನೀರಸ ಪ್ರತಿಕ್ರಿಯೆ, ಎಷ್ಟು ಸುತ್ತಿದರೂ ಹಣ ಸಂಗ್ರಹವಾಗುತ್ತಿಲ್ಲವಲ್ಲ ಅನ್ನೋ ಬೇಜಾರು, ಎಲ್ಲಾ ಪ್ರದೇಶಗಳಲ್ಲಿ ನಿಧಿ ಸಂಗ್ರಹವಾಗುತ್ತಿದೆ, ನಮಗೆ ಆಗುತ್ತಿಲ್ಲವಲ್ಲ ಅನ್ನೋ ಅತಂಕ, ಅಳುಕು, ಕಾಲುನೋವು ಎಲ್ಲದರ ನಡುವೆ ನಮಗೆ ಅನ್ನಿಸಿದ್ದು ಇದೆಲ್ಲ ನಮಗೆ ಬೇಕಿತ್ತಾ? ಅಂತ. ಆದರೆ ಇಂದು ನಮಗೆ ಅನ್ನಿಸುತ್ತಿರೋದು ಇಂತಹ ನೀರಸ ಪ್ರತಿಕ್ರಿಯೆಯ ನಡುವೆಯೂ ನಾವು ನಮ್ಮ ಕೋಟಾವನ್ನು ಪೂರ್ಣಗೊಳಿಸಿದ್ದೇವೆ ಅನ್ನೋ ಸಮಾಧಾನದ ಜೊತೆಗೆ, ದುಡಿಯುವ ಜನ ನಮ್ಮ ಸಂಘಟನೆಗೆ ಬೆಂಬಲವಾಗಿ ನಿಲ್ಲುತ್ತಾರೆ ಎನ್ನೋ ಸತ್ಯ. ದುಡಿಯುವ ವರ್ಗದ ವಿರೋಧಿಗಳು ನಮ್ಮ ಚಳುವಳಿ ವಿರುದ್ಧ ನಿರಂತರ ಅಪಪ್ರಚಾರದಲ್ಲಿ, ಸೈದ್ಧಾಂತಿಕ ಸಂಘರ್ಷದಲ್ಲಿ ತೊಡಗಿರುತ್ತಾರೆ. ನಮ್ಮ ಚಳುವಳಿಯ ಕಾರ್ಯಕರ್ತರು ನಿರಂತರವಾಗಿ ಇಂತಹ ಸಾಮೂಹಿಕ ಕಾರ್ಯಾಚರಣೆಯಲ್ಲಿ ತೊಡಗುವುದು, ರಾಜಕೀಯ ಪ್ರಚಾರ ಮಾತ್ರವಲ್ಲದೆ ಸೈದ್ಧಾಂತಿಕ ಸಂಘರ್ಷವೂ ಆಗಿರುತ್ತದೆ. ಈ ಪ್ರಕ್ರಿಯೆಯು ನಮ್ಮನ್ನು ನಾವು ಗಟ್ಟಿಗೊಳಿಸಿಕೊಳ್ಳುವ ಕುಲುಮೆಯಾಗಲಿದೆ.

ಅಂಜಿಕೆ ತೊರೆದರೆ–ಸಾಮರ್ಥ್ಯ ಹೊರಹೊಮ್ಮುತ್ತದೆ:

ನಮ್ಮಲ್ಲಿ ತುಂಬಾ ಸದಸ್ಯರಿಗೆ ಎಲ್ಲಾ ಕೆಲಸ ಮಾಡುವ ಸಾಮರ್ಥ್ಯವಿರುತ್ತದೆ. ಜೊತೆಗೆ ಅಂಜಿಕೆ ಕೂಡ ಇರುತ್ತದೆ. ಆ ಅಂಜಿಕೆ ಅವರನ್ನು ಮುಂದೆ ಬರಲು ಬಿಡುವುದಿಲ್ಲ. ನಮ್ಮ ತಂಡದಲ್ಲಿ ನಾವೆಲ್ಲರೂ ಹೊಸಬರು. ಆದರೂ ನಾವು ಪ್ರಚಾರ, ನಿಧಿ ಸಂಗ್ರಹದಲ್ಲಿ ತೊಡಗಿಕೊಳ್ಳದಿದ್ದರೆ ಇಂತಹ ನೂರಾರು ಅನುಭವಗಳನ್ನು ಸ್ವತಃ ಅನುಭವಿಸಲು ಆಗುತ್ತಿರಲಿಲ್ಲ. ಆರ್‌ಎಸ್‌ಎಸ್ ಬೆಂಬಲಿಗರ ಕಾರ್ಮಿಕ ವಿರೋಧಿ ನಿಲುವು ಅರಿವಿಗೆ ಬರುತ್ತಿರಲಿಲ್ಲ. ಮಾತ್ರವಲ್ಲ ನಮ್ಮನ್ನು ಬೆಂಬಲಿಸುವವರು ಯಾರು, ವಿರೋಧಿಸುವವರು ಯಾರು, ಯಾರ ನಡುವೆ ನಮ್ಮ ಕೆಲಸಕ್ಕೆ ಆದ್ಯತೆ ನೀಡಬೇಕು ಎಂಬುದು ಅರಿವಾಗುತ್ತಿರಲಿಲ್ಲ.

ಸಿಐಟಿಯು ಅಖಿಲ ಭಾರತ ಸಮ್ಮೇಳನದ ಆಯೋಜನೆಯ ಅವಕಾಶ ಬೆಂಗಳೂರಿಗೆ ಲಭಿಸಿದ್ದು, ಅದರ ಪ್ರಚಾರದಲ್ಲಿ ತೊಡಗಲು ಕಚೇರಿ ಸಿಬ್ಬಂದಿಗೂ ಅವಕಾಶ ಸಿಕ್ಕಿದ್ದು ನಮಗೆ ಇಂತಹ ಅನುಭವಗಳನ್ನು ನೀಡಿದೆ. ನಮ್ಮ ತಂಡದಲ್ಲಿ ಕಚೇರಿ ಸಿಬ್ಬಂದಿಗಳಾದ ಕಾಮ್ರೇಡ್ ಸವಿತಾ, ಕಾವ್ಯ, ಸುಜಾತ ಮತ್ತು ಅರುಣ ತೊಡಗಿಕೊಂಡಿದ್ದರು. ಕೆಲವು ದಿನಗಳು ಕಾಮ್ರೇಡ್ ಸುನಿಲ್ ಕೂಡಾ ಭಾಗಿಯಾಗಿದ್ದರು. ಕಡಲೆಕಾಯಿ ಪರಸೆಯಲ್ಲಿ ನಿಧಿ ಸಂಗ್ರಹಕ್ಕೆ ಕಾಮ್ರೇಡ್ ಕೆ. ಎಸ್.ಲಕ್ಷ್ಮಿ, ಪಾರ್ವತಿ ಮತ್ತು ಮಾದೇವಿ ಕೂಡ ಸಾಥ್ ನೀಡಿದ್ದರು. ●

ವಿದ್ಯುತ್ ಬಳಕೆಗೂ ಬರಲಿದೆ ಪ್ರಿಪೇಯ್ಡ್ ಮೀಟರ್ ವಿದ್ಯುತ್ ವಲಯ ಖಾಸಗೀಕರಣದತ್ತ.......... ಪುಟ 9 ರಿಂದ

ಮತ್ತಷ್ಟು ಹೊರೆಯಾಗುತ್ತದೆ.

ನೌಕರರ ಅಗತ್ಯವೇ ಇರುವುದಿಲ್ಲ:

ಹೌದು, ವಿದ್ಯುತ್ ಖಾಸಗಿಯವರ ಪಾಲಾದರೆ, ಪ್ರಿಪೇಯ್ಡ್ ಮೀಟರ್ ಅಳವಡಿಕೆಯಾದರೆ ಅದರ ವಿತರಣೆಗೆ, ಬಿಲ್ ಕೊಡಲು, ಹಣ ಸಂಗ್ರಹಿಸಲು ನೌಕರರ ಅಗತ್ಯವೇ ಇರುವುದಿಲ್ಲ. ಎಲ್ಲವೂ ಯಾಂತ್ರಿಕವಾಗಿ ನಡೆಯುತ್ತಿರುತ್ತದೆ. ಒಮ್ಮೆ ಪ್ರಿಪೇಯ್ಡ್ ಮೀಟರ್ ಅಳವಡಿಸಿದ ನಂತರ ಆನ್ ಲೈನ್ ಮೂಲಕ ಬಿಲ್ ಪಾವತಿ ಮಾಡುತ್ತೇವೆ. ಬಿಲ್ ಕಟ್ಟದಿದ್ದರೆ ನೌಕರರು ಬಂದು ವಿದ್ಯುತ್ ಕಡಿತ ಮಾಡುವ ಅವಶ್ಯಕತೆ ಇರುವುದಿಲ್ಲ. ಆ ಕೆಲಸವನ್ನು ನಮ್ಮ ಮೀಟರ್ ವ್ಯವಸ್ಥಿತವಾಗಿ ಮಾಡುತ್ತದೆ. ವಿದ್ಯುತ್ ಕಂಪನಿ ನೌಕರರು ಮನೆ ಬಳಿ ಬರುವ ಅಗತ್ಯ ಇರುವುದಿಲ್ಲ. ವಿದ್ಯುತ್ ಸಂಪರ್ಕ ಕಡಿತವಾದರೆ ಪೋನ್ ಮೂಲಕ ಕಂಪನಿಯ ಕಛೇರಿಯಲ್ಲಿ ಕುಳಿತವರನ್ನು ಸಂಪರ್ಕಿಸಿದರೆ ಸಾಕು. ಅವರು ಕುಳಿತಲ್ಲೇ ಕಂಪ್ಯೂಟರ್ ಮೂಲಕ ಸರಿಪಡಿಸುತ್ತಾರೆ.

ಇದರರ್ಥ ಇಷ್ಟೆ. ವಿದ್ಯುತ್ ಕಂಪನಿಗಳ ಲಕ್ಷಾಂತರ ನೌಕರರು ಉದ್ಯೋಗ ಕಳೆದುಕೊಳ್ಳುತ್ತಾರೆ. ಕರ್ನಾಟಕದ ನಾಲ್ಕು ವಿದ್ಯುತ್ ನಿಗಮಗಳಲ್ಲಿ 60 ಸಾವಿರ ಉದ್ಯೋಗಿಗಳಿದ್ದಾರೆ. ಖಾಸಗೀ ಕಂಪನಿಗಳು ಅಗತ್ಯವಿರುವಷ್ಟು ಉದ್ಯೋಗಿಗಳನ್ನು ಗುತ್ತಿಗೆ ಆದಾರದಲ್ಲಿ ನೇಮಕ ಮಾಡಿಕೊಳ್ಳುತ್ತಾರೆ. ಬೃಹತ್ತಾಗಿ ಬೆಳೆದು ನಿಂತಿರುವ ನಿರುದ್ಯೋಗಿಗಳ ಪಡೆ ಕಂಪನಿಗಳು ಕೊಡುವ ಅತ್ಯಲ್ಪ ವೇತನಕ್ಕೂ ದುಡಿಯಲು ಸಿದ್ದರಾಗಿ ನಿಂತಿದ್ದಾರಲ್ಲ.

ತಿಂಗಳಲ್ಲ, 28 ದಿನಗಳು ಮಾತ್ರ

ನಾವು ಈಗ ತಿಂಗಳಿಗೊಮ್ಮೆ ವಿದ್ಯುತ್ ಬಿಲ್ ಕಟ್ಟುತ್ತೇವೆ. ಪ್ರಿಪೇಯ್ಡ್ ಮೀಟರ್ 28 ದಿನಗಳಿಗೆ ಲೆಕ್ಕ ಹಾಕುತ್ತದೆ. ನಮ್ಮ ಮೊಬೈಲ್ ರೀಚಾರ್ಜ್ ನಂತೆ. ವರ್ಷಕ್ಕೆ 12 ತಿಂಗಳುಗಳಲ್ಲ, 13 ತಿಂಗಳುಗಳು. ಅಂದರೆ ಒಂದು ತಿಂಗಳು ಹೆಚ್ಚುವರಿಯಾಗಿ ಬಿಲ್ ಕಟ್ಟಬೇಕು.

ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳು, ಪರಿಶಿಷ್ಠ ಜಾತಿ ಮತ್ತು ಜನಾಂಗಗಳ ಕುಟುಂಬಗಳು ಇಂದು ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಯೋಜನೆಯಲ್ಲಿ 50– 60 ಯೂನಿಟ್ ವಿದ್ಯುತ್ ಉಚಿತವಾಗಿ ಬಳಕೆ ಮಾಡಬಹುದು. ಮುಂದೆ ಇದು ಸಾಧ್ಯವಿಲ್ಲ. ವಿದ್ಯುತ್ ಸಂಪರ್ಕ ಬೇಕೆಂದರೆ ಪ್ರಿಪೇಯ್ಡ್ ಮೀಟರ್ ಅಳವಡಿಸಿಕೊಳ್ಳಲೇಬೇಕು. ಮೊದಲೇ ರೀಚಾರ್ಜ್ ಮಾಡಿಸಿಕೊಳ್ಳಬೇಕು. ನಿಮ್ಮಲ್ಲಿ ರೀಚಾರ್ಜ್ ಮಾಡಿಸಲು ಹಣವಿಲ್ಲದಿದ್ದರೆ ಕತ್ತಲೆಯಲ್ಲಿ ಕಾಲ ಕಳೆಯಬೇಕು. ಸೀಮೆಎಣ್ಣೆ ದೀಪ ಹಚ್ಚಲು ಸೀಮೆ ಎಣ್ಣೆಯೂ ಸಿಗುವುದಿಲ್ಲ. ಸೀಮೆಎಣ್ಣೆ ಸರಭರಾಜು ನಿಂತು ಹಲವು ವರ್ಷಗಳೇ ಕಳೆದವು ತಾನೇ? ಪ್ರಧಾನ ಮಂತ್ರಿಯವರ ಉಜ್ವಲ್ ಯೋಜನೆ ಮೂಲಕ ಖುಷಿಯಿಂದ ಉಚಿತವಾಗಿ ಅಡುಗೆ ಅನಿಲದ ಸಂಪರ್ಕ ಪಡೆದ ಬಡ ಕುಟುಂಬಗಳು ಇಂದು ಅನಿಲದ ಬೆಲೆ ಏರಿಕೆಯಿಂದಾಗಿ ಸಿಲಿಂಡರ್ ಮರು ತುಂಬಿಸಲಾಗದೆ, ಸೌದೆ ಒಲೆಯಲ್ಲಿ ಅಡುಗೆ ಮಾಡುತ್ತಿದ್ದಾರಲ್ಲಾ ಹಾಗೆ, ವಿದ್ಯುತ್ ಇಲ್ಲದೆ ಬದುಕುವುದನ್ನು ಕಲಿಯಬೇಕು.

ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸಾರ್ವಜನಿಕ ಹೂಡಿಕೆ ಹೆಚ್ಚಳವಿಲ್ಲದೆ

ಉದ್ಯೋಗ ಸೃಷ್ಟಿಯಾಗಲಿ, ಜನರ ಖರೀದಿ ಸಾಮರ್ಥ್ಯದ ಬೆಳವಣಿಗೆಯಾಗಲಿ ಸಾಧ್ಯವಾಗದು

–ಪೊಲಿಟ್‌ಬ್ಯುರೊ

ಆರ್ಥಿಕ ಚೇತರಿಕೆ ನಡೆಯುತ್ತಿದೆ ಎಂಬ ಸರ್ಕಾರದ ಎಲ್ಲಾ ಪ್ರಚಾರ ಮತ್ತು ದಾವೆಗಳ ಹೊರತಾಗಿಯೂ, ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು(ಐಐಪಿ) ಅತ್ಯಂತ ಕೆಳಮಟ್ಟಕ್ಕೆ ಇಳಿದಿದೆ. ಇದು ಜನರ ಖರೀದಿ ಸಾಮರ್ಥ್ಯ ನಿರಂತರವಾಗಿ ಕುಸಿಯುತ್ತಿದೆ ಎಂಬುದರ ಸೂಚನೆಯಾಗಿದೆ. ಇದರ ಜೊತೆಗೆ ಉದ್ಯೋಗ ಹೀನತೆಯ ದರವು ಹೆಚ್ಚುತ್ತಲೇ ಇದೆ. ಹಣದುಬ್ಬರ ಏರುತ್ತಲೇ ಇದೆ. ಇಂತಹ ಸನ್ನಿವೇಶದಲ್ಲಿ ಉದ್ಯೋಗ ಸೃಷ್ಟಿಸುವ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸಾರ್ವಜನಿಕ ಹೂಡಿಕೆಯಲ್ಲಿ ಭಾರಿ ಹೆಚ್ಚಳವಾಗಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ, ಅದಿಲ್ಲದೆ ಉದ್ಯೋಗ ಸೃಷ್ಟಿಯಾಗಲಿ ಅಥವಾ ಜನರ ಖರೀದಿ ಸಾಮರ್ಥ್ಯಗಳ ಬೆಳವಣಿಗೆಯಾಗಲಿ ಸಂಭವಿಸಲಾರದು ಎಂದು ಅದು ಹೇಳಿದೆ.

ಡಿಸೆಂಬರ್ 27–28 ರಂದು ನವದೆಹಲಿಯಲ್ಲಿ ಸಭೆ ಸೇರಿದ ಪೊಲಿಟ್ ಬ್ಯುರೊ ಇತ್ತೀಚಿನ ಬೆಳವಣಿಗೆಗಳನ್ನು ವಿಮರ್ಶಿಸುತ್ತ ನೀಡಿರುವ ಹೇಳಿಕೆಯಲ್ಲಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಈ ಹೇಳಿಕೆಯ ಪೂರ್ಣಪಾಟವನ್ನು ಈ ಮುಂದೆ ಕೊಡಲಾಗಿದೆ:

ಅರ್ಥವ್ಯವಸ್ಥೆ:

ಭಾರತದ ಅರ್ಥವ್ಯವಸ್ಥೆಯಲ್ಲಿ ಆಗುತ್ತಿರುವ ಕುಸಿತದ ಪರಿಸ್ಥಿತಿಗಳ ಬಗ್ಗೆ ಪೊಲಿಟ್ ಬ್ಯೂರೋ ತನ್ನ ಕಳವಳ ವ್ಯಕ್ತಪಡಿಸಿದೆ. ಆರ್ಥಿಕ ಚೇತರಿಕೆ ನಡೆಯುತ್ತಿದೆ ಎಂಬ ಸರ್ಕಾರದ ಎಲ್ಲಾ ಪ್ರಚಾರ ಮತ್ತು ದಾವೆಗಳ ಹೊರತಾಗಿಯೂ, ಭಾರತದ ಉತ್ಪಾದನಾ ಸಾಮರ್ಥ್ಯಗಳನ್ನು ಹೆಚ್ಚಿಸುವಲ್ಲಿ ಹೂಡಿಕೆಗಳು ಬೆಳೆಯುತ್ತಿಲ್ಲ.

ಕೈಗಾರಿಕಾ ಉತ್ಪಾದನೆಯು ಅಕ್ಟೋಬರ್‌ನಲ್ಲಿ ಶೇಕಡಾ 4 ರಷ್ಟು ಕುಗ್ಗಿತು, 3 ತಿಂಗಳಲ್ಲಿ ಎರಡನೇ ಬಾರಿ ಕುಗ್ಗಿದೆ. ವರ್ಷದಿಂದ ವರ್ಷದ ದತ್ತಾಂಶಗಳು ತಯಾರಿಕಾ ವಲಯದ ಉತ್ಪನ್ನದಲ್ಲಿ ಗಮನಾರ್ಹವಾದ 5.4 ಶೇಕಡಾ ಕುಸಿತವನ್ನು ತೋರಿಸುತ್ತಿವೆ. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು(ಐಐಪಿ) ಅಕ್ಟೋಬರ್‌ನಲ್ಲಿ 129.6 ಇತ್ತು. ಇದು ಸೆಪ್ಟೆಂಬರ್ 2021 ರ ನಂತರದ ಅತ್ಯಂತ ಕಡಿಮೆ ಸೂಚ್ಯಂಕ. ಬಾಳಿಕೆ ಬರುವ ಗ್ರಾಹಕ ವಸ್ತುಗಳ ಉತ್ಪಾದನೆಯು 15.3% ಮತ್ತು ಉಳಿದ ಬಳಕೆ ಉತ್ಪನ್ನಗಳ ಉತ್ಪಾದನೆಯು 13.4% ರಷ್ಟು ಕುಗ್ಗಿದೆ. ಇದು ಜನರ ಖರೀದಿ ಸಾಮರ್ಥ್ಯ ನಿರಂತರವಾಗಿ ಕುಸಿಯುತ್ತಿದೆ ಎಂಬುದರ ಸೂಚನೆಯಾಗಿದೆ.

ಬೆಳೆಯುತ್ತಿರುವ ನಿರುದ್ಯೋಗ:

ಉದ್ಯೋಗಹೀನತೆಯ ದರವು ಹೆಚ್ಚುತ್ತಲೇ ಇದೆ. ಇನ್ನೂ ಕೆಟ್ಟ ಸಂಗತಿಯೆಂದರೆ, ಇದರೊಂದಿಗೇ ಕಾರ್ಮಿಕ ಭಾಗವಹಿಸುವಿಕೆ ದರ ಮತ್ತು ಉದ್ಯೋಗ ದರದಲ್ಲಿಯೂ ಕುಸಿತ ಉಂಟಾಗಿದೆ. ನಿರುದ್ಯೋಗ ದರ ನವೆಂಬರ್‌ನ 8%ಕ್ಕೆ ಹೋಲಿಸಿದರೆ ಡಿಸೆಂಬರ್‌ನಲ್ಲಿ 8.8% ಕ್ಕೆ ಏರಿದೆ. ನಗರ ನಿರುದ್ಯೋಗ ಶೇಕಡಾ 9.6%ಕ್ಕೆ ಏರಿದೆ ಮತ್ತು ಗ್ರಾಮೀಣ ನಿರುದ್ಯೋಗ 7.8% ಕ್ಕೆ ಏರಿದೆ.

ಬೆಲೆ ಏರಿಕೆ:

ಹಣದುಬ್ಬರ ಏರುತ್ತಲೇ ಇದೆ. ಆಹಾರ ಹಣದುಬ್ಬರವು ಜನರ ಜೀವನೋಪಾಯದ ಮೇಲೆ ಹೆಚ್ಚಿನ ಸಂಕಟಗಳನ್ನು ಹೇರುತ್ತಲೇ ಇದೆ.

ಉದ್ಯೋಗ ಸೃಷ್ಟಿಸುವ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸಾರ್ವಜನಿಕ ಹೂಡಿಕೆಯಲ್ಲಿ ಭಾರಿ ಹೆಚ್ಚಳವಾಗಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ. ಅದಿಲ್ಲದೆ ಉದ್ಯೋಗ ಸೃಷ್ಟಿಯಾಗಲಿ ಅಥವಾ ಜನರ ಖರೀದಿ ಸಾಮರ್ಥ್ಯಗಳ ಬೆಳವಣಿಗೆಯಾಗಲಿ ಸಂಭವಿಸಲಾರದು.

ಆಹಾರ ಭದ್ರತಾ ಕಾಯಿದೆಯೊಂದಿಗೆ ಪಿಎಂಜಿಕೆಎವೈ ವಿಲೀನ:

2013ರ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ(ಎನ್ ಎಫ್ ಎಸ್ ಎ) ಅಡಿಯಲ್ಲಿ 2023 ರಲ್ಲಿ ಸುಮಾರು 2/3 ಭಾಗದಷ್ಟು ಜನರಿಗೆ 'ಉಚಿತ' ಪಡಿತರವನ್ನು ಒದಗಿಸುವುದಾಗಿ ಹೇಳಿರುವುದು ದೇಶವನ್ನು ಬಾಧಿಸುತ್ತಿರುವ ಹಸಿವಿನ ಭೀತಿಯನ್ನು ಬೇರೆ ರೀತಿಯಲ್ಲಿ ನಿವಾರಿಸಲು ಸಾಧ್ಯವಿಲ್ಲ ಎಂಬುದನ್ನು ಒಪ್ಪಿಕೊಂಡಂತಾಗಿದೆ. ಭಾರತದಲ್ಲಿ ಹಸಿವು "ಬಹಳ ಗಂಭೀರ" ಎಂದು ವರ್ಣಿಸಿರುವ ಜಾಗತಿಕ ಹಸಿವು ಸೂಚ್ಯಂಕವನ್ನು ಮೋದಿ ಸರ್ಕಾರವು ಬಹಳ ಅಬ್ಬರದಿಂದ ನಿರಾಕರಿಸಿದರೂ, ಅದೇ ಸತ್ಯ.



81.35 ಕೋಟಿ ಜನರಿಗೆ 5 ಕೆಜಿ ಆಹಾರ ಧಾನ್ಯಗಳನ್ನು ಉಚಿತವಾಗಿ ನೀಡಲಾಗುವುದು, ಆದರೆ ಈಗ ಅವರಿಗೆ ಆಹಾರ ಭದ್ರತಾ ಕಾಯಿದೆಯಡಿಯಲ್ಲಿ ಕೊಡುತ್ತಿರುವ 5 ಕೆಜಿ ಆಹಾರ ಧಾನ್ಯಗಳನ್ನು ಸಬ್ಸಿಡಿ ದರ ರೂ.3/ಕೆಜಿ ಅಕ್ಕಿ, ರೂ. 2/ಕೆಜಿ ಗೋಧಿಯನ್ನು ಮತ್ತು ರೂ.1/ಕೆಜಿಯಲ್ಲಿ ಧಾನ್ಯಗಳನ್ನು ನಿರಾಕರಿಸಲಾಗುವುದು. ಇದರ ಪರಿಣಾಮವಾಗಿ, ಪೌಷ್ಠಿಕಾಂಶದ ಅಗತ್ಯವನ್ನು ಕಾಪಾಡಿಕೊಳ್ಳಲು ಅಗತ್ಯವಿರುವ 5 ಕೆಜಿ ಸಬ್ಸಿಡಿ ಆಹಾರ ಧಾನ್ಯಗಳನ್ನು ಸರಿದೂಗಿಸಲು, ಜನರು ಮುಕ್ತ ಮಾರುಕಟ್ಟೆಗೆ ಹೋಗಿ ಒಂದು ಕೆಜಿ ಗೋಧಿಗೆ ರೂ.30ಕ್ಕೂ ಹೆಚ್ಚು ಮತ್ತು ಅಕ್ಕಿಗೆ ರೂ. 40ಕ್ಕೂ ಹೆಚ್ಚು ಹಣ ತೆರಬೇಕಾಗುತ್ತದೆ, ಇದು ಬದುಕುಳಿಯಲು ಹೆಣಗಾಡುತ್ತಿರುವ ಕೋಟಿಗಟ್ಟಲೆ ಕುಟುಂಬಗಳಿಗೆ ಒಂದು ಕ್ರೂರ ಹೊಡೆತವಾಗಿದೆ.

ಪಿಎಂಜಿಕೆಎವೈ(ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನಾ) ಅಡಿಯಲ್ಲಿ ಉಚಿತ 5 ಕೆಜಿ ಮತ್ತು ಎಫ್‌ಎಸ್‌ಎ ಅಡಿಯಲ್ಲಿ ಸಬ್ಸಿಡಿ ದರದಲ್ಲಿ 5 ಕೆಜಿ ಎರಡನ್ನೂ ಮುಂದುವರಿಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸುತ್ತದೆ.

ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು:

ಆಳುವ ಪಕ್ಷದ ಸಂಸದರೊಬ್ಬರು ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಹಿಂಸಾತ್ಮಕ ಕ್ರಿಮಿನಲ್ ಹಲ್ಲೆಗಳನ್ನು ನಡೆಸಬೇಕು ಎಂದು ಉದ್ರೇಕಕಾರಿ ಕರೆ ನೀಡಿರುವುದು ಸಂಪೂರ್ಣವಾಗಿ ಖಂಡನೀಯ. ವಿಚಿತ್ರವೆಂದರೆ, ಅಧಿಕಾರಿಗಳು ಸ್ವಯಂಪ್ರೇರಿತವಾಗಿ ಇದನ್ನು ಗಮನಕ್ಕೆ ತೆಗೆದುಕೊಂಡು ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ಬದಲು ಈ ಭಾಷಣದ ವಿರುದ್ಧ 'ದೂರು' ಬಂದರೆ ಮಾತ್ರ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಇದು ಇಂತಹ ವಿಷಕಾರಿ ದ್ವೇಷ, ಹಿಂಸೆ ಮತ್ತು ಭಯೋತ್ಪಾದನೆಯನ್ನು ಹರಡುವ ಜನರಿಗೆ ಬಹಿರಂಗವಾಗಿಯೇ ನೀಡಿರುವ ಪೋಷಣೆ ಮತ್ತು ರಕ್ಷಣೆಯಾಗಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳ ವಿರುದ್ಧ ದ್ವೇಷ ಅಪಾಯಕಾರಿಯಾಗಿ ತೀವ್ರಗೊಳ್ಳುತ್ತಿರುವ ವರದಿಗಳು ಹೆಚ್ಚುತ್ತಿವೆ. ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲಿನ ದಾಳಿಯ ನಿದರ್ಶನಗಳೂ ಬೆಳೆಯುತ್ತಿವೆ.

ಮೌಲಾನಾ ಆಜಾದ್ ರಾಷ್ಟ್ರೀಯ ಫೆಲೋಶಿಪ್ (MANF) ಹೆಸರಿನಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಫೆಲೋಶಿಪ್‌ಗಳ ಯೋಜನೆಯನ್ನು ರದ್ದುಗೊಳಿಸಲಾಗಿದೆ. ಒಂಓಈ ಹಲವಾರು ಇತರ ವಿದ್ಯಾರ್ಥಿವೇತನ ಯೋಜನೆಗಳನ್ನು ಅತಿಕ್ರಮಿಸುವುದರಿಂದ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಸರ್ಕಾರ ಸಂಸತ್ತಿಗೆ ತಿಳಿಸಿದೆ. ಇದು ಸ್ಪಷ್ಟವಾಗಿ ತಪ್ಪಾಗಿದೆ. ಹಲವಾರು ರಾಜ್ಯಗಳಲ್ಲಿ ಮುಸ್ಲಿಮರು ಮತ್ತು ಇತರ ಧಾರ್ಮಿಕ ಅಲ್ಪಸಂಖ್ಯಾತರನ್ನು ಒಬಿಸಿ ಎಂದು ಪರಿಗಣಿಸಲಾಗುವುದಿಲ್ಲ. ಈ ವಿದ್ಯಾರ್ಥಿವೇತನ ಯೋಜನೆಯನ್ನು ಮರುಸ್ಥಾಪಿಸಬೇಕು.

ನ್ಯಾಯಾಂಗ:

ನ್ಯಾಯಾಂಗದಲ್ಲಿ ನೇಮಕಾತಿ ಮತ್ತು ವರ್ಗಾವಣೆಗಳಲ್ಲಿ ಸರ್ಕಾರಕ್ಕೆ ಪ್ರಾಬಲ್ಯ ಪಡೆಯುವ ಪ್ರಯತ್ನಗಳನ್ನು ಮೋದಿ ಸರ್ಕಾರವು ತೀವ್ರಗೊಳಿಸಿದೆ, ಇದು ನ್ಯಾಯಾಂಗ ಮತ್ತು ಕಾರ್ಯಾಂಗದ ನಡುವೆ, ಕೊಲಿಜಿಯಂ ವ್ಯವಸ್ಥೆ ಮತ್ತು ಸುಪ್ರೀಂಕೋರ್ಟ್ ಅಸಿಂಧುಗೊಳಿಸಿರುವ ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗದ (ಎನ್‌ಜೆಎಸಿ) ನಡುವೆ ಘರ್ಷಣೆಗೆ ಕಾರಣವಾಗುತ್ತಿದೆ.

ನ್ಯಾಯಾಂಗ ನೇಮಕಾತಿಗಳ ಮೇಲೆ ಕಾರ್ಯಾಂಗದ ನಿಯಂತ್ರಣ ಪಡೆಯುವ ಮೋದಿ ಸರ್ಕಾರದ ಎಲ್ಲಾ ಪ್ರಯತ್ನಗಳನ್ನು ಸಿಪಿಐ(ಎಂ) ಬಲವಾಗಿ ಪ್ರತಿರೋಧಿಸುತ್ತದೆ ಮತ್ತು ವಿರೋಧಿಸುತ್ತದೆ. ನ್ಯಾಯಾಂಗದ ಸ್ವಾತಂತ್ರ್ಯವನ್ನು ಯಾವುದೇ ರಾಜಿಗಿಳಿಯದೆ ಎತ್ತಿ ಹಿಡಿಯಬೇಕು.

ಭೀಮಾ ಕೋರೆಗಾಂವ್ ಬಂಧಿತರನ್ನು ಬಿಡುಗಡೆ ಮಾಡಿ:

2018 ರ ಜನವರಿ 1 ರಂದು ಭೀಮಾ ಕೋರೆಗಾಂವ್‌ನಲ್ಲಿ ನಡೆದ ಜಾತಿ ಹಿಂಸಾಚಾರದ ತನಿಖೆ ನಡೆಸುತ್ತಿರುವ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಪುಣೆ ನಗರದಿಂದ 30 ಕಿಮೀ ದೂರದಲ್ಲಿ ಆಯೋಜಿಸಲಾದ ಎಲ್ಗಾರ್ ಪರಿಷತ್ ಕಾರ್ಯಕ್ರಮವು ಹಿಂಸಾಚಾರದಲ್ಲಿ ಯಾವುದೇ ಪಾತ್ರವನ್ನು ಹೊಂದಿಲ್ಲ ಎಂದು ಪ್ರಮಾಣ ಮಾಡಿ ಒಪ್ಪಿಕೊಂಡಿದ್ದಾರೆ. ಹೀಗಾಗಿ, ಈ ಸಂಬಂಧ ಬಂಧಿಸಿರುವ ಎಲ್ಲಾ ಯು.ಎ.ಪಿ.ಎ. ಬಂಧಿತರನ್ನು ತಕ್ಷಣವೇ ಬೇಷರತ್ತಾಗಿ ಬಿಡುಗಡೆ ಮಾಡಬೇಕು.

ಸಹಕಾರಿ ಮಸೂದೆ:

ಒಕ್ಕೂಟ ತತ್ವದ ಮೇಲೆ ದಾಳಿ: ಸಿಪಿಐ(ಎಂ) ಬಹು ರಾಜ್ಯ ಸಹಕಾರಿ ಸಂಘಗಳ ತಿದ್ದುಪಡಿ ಮಸೂದೆ 2022 ಅನ್ನು ಒಕ್ಕೂಟ ತತ್ವ ಮತ್ತು ರಾಜ್ಯಗಳ ಹಕ್ಕುಗಳ ಮೇಲಿನ ದಾಳಿ ಎಂದು ಬಲವಾಗಿ ವಿರೋಧಿಸುತ್ತದೆ. ಸಹಕಾರ ಸಂಘಗಳು ರಾಜ್ಯ ಪಟ್ಟಿಯಲ್ಲಿರುವ ವಿಷಯವಾಗಿದೆ. ಈ ಪ್ರಸ್ತಾವಿತ ಮಸೂದೆಯು ರಾಜ್ಯ ಕಾನೂನುಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವ ಸಹಕಾರಿ ಸಂಘಗಳ ಮೇಲೆ ಕೇಂದ್ರ ಸರ್ಕಾರದ ನಿರ್ಧಾರಗಳನ್ನು ಹೇರುವ ನಗ್ನ ಪ್ರಯತ್ನವಾಗಿದೆ. ಇದು ಸಹಕಾರಿ ಸಂಘಗಳ ಮೇಲೆ ಹಿಡಿತ ಸಾಧಿಸುವ ನಡೆಯಲ್ಲದೆ ಬೇರೇನೂ ಅಲ್ಲ. ಇದು ಚುನಾಯಿತ ರಾಜ್ಯ ಸರ್ಕಾರಗಳ ಹಕ್ಕುಗಳನ್ನು ದುರ್ಬಲಗೊಳಿಸುತ್ತದೆ ಮತ್ತು ಒಕ್ಕೂಟತತ್ವದ ಮೇಲೆ ನಡೆಸಿರುವ ಆಕ್ರಮಣವಾಗಿದೆ

ತ್ರಿಪುರಾ:

ತ್ರಿಪುರಾದಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ಹತ್ತಿರವಾಗುತ್ತಿದ್ದಂತೆ ಸಿಪಿಐ(ಎಂ) ಮತ್ತು ಇತರ ವಿರೋಧಿ ಶಕ್ತಿಗಳ ವಿರುದ್ಧ ಆಡಳಿತಾರೂಢ ಬಿಜೆಪಿ ತನ್ನ ಹಿಂಸಾತ್ಮಕ ದಾಳಿಯನ್ನು ತೀವ್ರಗೊಳಿಸಿದೆ.

ಸಿಪಿಐ(ಎಂ), ಎಡಪಕ್ಷಗಳು ಮತ್ತು ಕಾಂಗ್ರೆಸ್ ಪಕ್ಷಗಳು ಒಟ್ಟಾಗಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸಲು ಮತ್ತು ಬಿಜೆಪಿ ಸರ್ಕಾರದ ದಬ್ಬಾಳಿಕೆಯಿಂದ ನಾಶವಾಗುತ್ತಿರುವ ಕಾನೂನಿನ ಆಳ್ವಿಕೆಯನ್ನು ಮರುಸ್ಥಾಪಿಸಬೇಕು ಎಂದು ಒತ್ತಾಯಿಸಿವೆ.

ವಿಧಾನಸಭಾ ಚುನಾವಣೆಯನ್ನು ಒಂದು ಪ್ರಹಸನದ ಮಟ್ಟಕ್ಕೆ ಇಳಿಸುವುದನ್ನು ತಡೆಯಲು ಚುನಾವಣಾ ಆಯೋಗವು ತಾನೇ ಮುಂದಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯಬೇಕಾದರೆ ತ್ರಿಪುರಾದಲ್ಲಿ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸಂಪೂರ್ಣವಾಗಿ ಮರುಸ್ಥಾಪಿಸಬೇಕು.

ಕೇಂದ್ರ ಸಮಿತಿಯ ಸಭೆ:

ಸಿಪಿಐ(ಎಂ) ಕೇಂದ್ರ ಸಮಿತಿಯು ಜನವರಿ 28–30, 2023 ರಂದು ಕೋಲ್ಕತ್ತಾದಲ್ಲಿ ಸಭೆ ಸೇರಲಿದೆ.

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಸಿಪಿಐ(ಎಂ) ಅಭ್ಯರ್ಥಿ ಘೋಷಣೆ.........

ಪುಟ 3 ರಿಂದ

ಖ್ಯಾತಿ ಪಡೆದಿದೆ. ರಾಜ್ಯದಲ್ಲಿಯೇ ಸಿಪಿಐ(ಎಂ) ಪಕ್ಷಕ್ಕೆ ಹಳ್ಳಿ ಹಳ್ಳಿಗಳಲ್ಲಿಯೂ ಕಾರ್ಯಕರ್ತರಿರುವ ಕ್ಷೇತ್ರ ಬಾಗೇಪಲ್ಲಿ. 1980ರ ದಶಕದಿಂದ ಇಲ್ಲಿಯವರೆಗೂ ಸಿಪಿಐ(ಎಂ)ನ ಕೆಂಬಾವುಟ ಗಟ್ಟಿಯಾಗಿ ನೆಲೆಯೂರಿದೆ. 1983ರಲ್ಲಿ ಹಿರಿಯ ರೈತ ನಾಯಕ ಎ.ವಿ. ಅಪ್ಪುಸ್ವಾಮಿ ರೆಡ್ಡಿ ಮೊದಲ ಬಾರಿಗೆ ಗೆಲ್ಲುವ ಮೂಲಕ ಸಿಪಿಐ(ಎಂ) ಖಾತೆ ತೆರೆಯಿತು.

ಅಪ್ಪುಸ್ವಾಮಿ ರೆಡ್ಡಿ ಅವರು ಅನಾರೋಗ್ಯದ ಕಾರಣ ರಾಜಕಾರಣದಿಂದ ದೂರು ಉಳಿದರು. ಆ ನಂತರದಲ್ಲಿ ಜಿ.ವಿ.ಶ್ರೀರಾಮರೆಡ್ಡಿಯವರನ್ನು ಪಕ್ಷ ಇಲ್ಲಿನ ಕೆಲಸಗಳಿಗೆ ನಿಯೋಜನೆ ಮಾಡಿತು. 1982ರಲ್ಲಿ ಬಾಗೇಪಲ್ಲಿಯಲ್ಲಿ ಪೂರ್ಣಾವಧಿ ಕಾರ್ಯಕರ್ತರಾಗಿ ಬಂದ ಅವರು 1985ರಲ್ಲಿ ಸಿಪಿಐ(ಎಂ) ಅಭ್ಯರ್ಥಿಯಾದರು. ಶ್ರೀರಾಮರೆಡ್ಡಿಯವರು ಎಂಟು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು. ಎರಡು ಬಾರಿ (1994, 2004) ಗೆಲುವು ಕಂಡರು. ಈ ಎಲ್ಲ ದೃಷ್ಟಿಯಿಂದ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ ಸಿಪಿಐ(ಎಂ) ನ ಭದ್ರವಾದ ನೆಲೆಯಾಗಿದೆ.

ನೋಟು ರದ್ಧತಿ: ಸರ್ವೋಚ್ಚ ನ್ಯಾಯಾಲಯಕ್ಕೆ ಸರಕಾರ ಮತ್ತು ಆರ್‌ಬಿಐ ಪ್ರಮಾಣ ಪತ್ರಗಳು ಹೇಳಿರುವುದೆಷ್ಟು–ಹೇಳದಿರುವುದೆಷ್ಟು?

ನೋಟು ರದ್ದತಿ ಕುರಿತ ಅರ್ಜಿಯ ವಿಚಾರಣೆಯ ವೇಳೆಯಲ್ಲಿ ಸುಪ್ರಿಂ ಕೋರ್ಟ್ ನ್ಯಾಯಪೀಠದ ಸೂಚನೆಯಂತೆ ಕೇಂದ್ರ ಸರಕಾರ ಮತ್ತು ಆರ್‌ಬಿಐ (ರಿಸರ್ವ್ ಬ್ಯಾಂಕ್)ಸಲ್ಲಿಸಿರುವ ಅಫಿಡವಿಟ್(ಪ್ರಮಾಣಪತ್ರ)ಗಳಲ್ಲಿ ಹೇಳಿರುವುದಕ್ಕಿಂತ ಹೇಳದಿರುವ ಸಂಗತಿಗಳೇ ಮಹತ್ವದ್ದಾಗಿವೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಸರಕಾರದ ಅಫಿಡವಿಟ್‌ನಲ್ಲಿ ಅದು ಚೆನ್ನಾಗಿ ಪರಿಶೀಲಿಸಿ ಕೈಗೊಂಡ ಕ್ರಮ, ಅದನ್ನು ಕೈಗೊಳ್ಳುವ 9 ತಿಂಗಳ ಮೊದಲಿಂದಲೇ ಆರ್‌ಬಿಐ ನೊಂದಿಗೆ ಈ ಕುರಿತು ಸಮಾಲೋಚನೆಗಳು ಆರಂಭವಾಗಿದ್ದವು ಎಂದಿದ್ದರೆ, ಆರ್‌ಬಿಐ ನ ಅಫಿಡವಿಟ್‌ನಲ್ಲಿ ಈ ಕ್ರಮದಲ್ಲಿ ಅಗತ್ಯ ವಿಧಿ–ವಿಧಾನಗಳನ್ನು ಅನುಸರಿಸಲಾಗಿದೆ, ತಾನೇ ಇದನ್ನು ಶಿಫಾರಸು ಮಾಡಿದ್ದು ಎಂದು ಹೇಳಿದೆಯಂತೆ.

ಕರೆನ್ಸಿ ನೋಟುಗಳಿಗೆ ಸಂಬಂಧಪಟ್ಟಂತೆ ಯಾವುದೇ ಕ್ರಮವನ್ನು ರಿಸರ್ವ್ ಬ್ಯಾಂಕಿನ ಶಿಫಾರಸಿನ ಮೇಲೆ ಮಾತ್ರವೇ ಮಾಡಬೇಕು. 2016ರ ನೋಟುರದ್ಧತಿಯಲ್ಲಿ ಇದನ್ನು ಅನುಸರಿಸಲಾಗಿಲ್ಲ ಎಂಬ ಟೀಕಾಕಾರರ ವಾದವನ್ನು ಈ ಎರಡೂ ಅಫಿಡವಿಟ್‌ಗಳು ಮೇಲ್ನೋಟಕ್ಕೆ ತಳ್ಳಿ ಹಾಕುತ್ತವೆ. ಆದರೆ ಪ್ರಧಾನ ಮಂತ್ರಿಗಳು ಈ ಕ್ರಮದ ಪ್ರಕಟಣೆ ಮಾಡುವ ಕೇವಲ ಎರಡೂವರೆ ಗಂಟೆಗಳ ಮೊದಲಷ್ಟೇ ನಡೆದ ಬ್ಯಾಂಕಿನ ಕೇಂದ್ರೀಯ ಮಂಡಳಿಯ ಸಭೆ ಅದರ ಶಿಫಾರಸು ಮಾಡುವ ಮೊದಲು ಕೇಂದ್ರ ಸರಕಾರ ಇದಕ್ಕೆ ನೀಡಿದ್ದ ಸಮರ್ಥನೆಗಳಲ್ಲಿ ಕನಿಷ್ಟ 4 ಅಂಶಗಳನ್ನು ಒಪ್ಪಿರಲಿಲ್ಲ, ಮತ್ತು ಈ ಅಂಶವನ್ನು ಈ ಎರಡೂ ಅಫಿಡವಿಟ್‌ಗಳಲ್ಲಿ ಸುಪ್ರಿಂ ಕೋರ್ಟಿಗೆ ತಿಳಿಸಲಾಗಿಲ್ಲ ಎಂದು ತಿಳಿದು ಬಂದಿದೆ. (ಇಂಡಿಯನ್ ಎಕ್ಸ್‌ಪ್ರೆಸ್, ಡಿಸೆಂಬರ್27)

* ಜಿಡಿಪಿಯ ಅನುಪಾತವಾಗಿ ಚಲಾವಣೆಯಲ್ಲಿರುವ ಕರೆನ್ಸಿಯ ಪ್ರಮಾಣ ಭಾರತದಲ್ಲಿ ಬಹಳ ಹೆಚ್ಚಾಗಿದ್ದು. ಇದು ನೇರವಾಗಿ ಭ್ರಷ್ಟಾಚಾರದ ಮಟ್ಟಕ್ಕೆ ತಳುಕು ಹಾಕಿಕೊಂಡಿರುವುದರಿಂದ ಅದನ್ನು ಕಡಿಮೆ ಮಾಡಬೇಕಾಗಿದೆ ಎಂಬುದು ಈ ಕ್ರಮಕ್ಕೆ ಸರಕಾರದ ಒಂದು ಸಮರ್ಥನೆ. ಆದರೆ ನೋಟು ರದ್ಧತಿಯ ಮೂರೇ ವರ್ಷಗಳಲ್ಲಿ ಈ ಪ್ರಮಾಣ ಮೊದಲಿದ್ದ 12%ಕ್ಕೆ ಬಂತು, ನಂತರ ಇನ್ನೂ ಹೆಚ್ಚಿ 2020–21ರಲ್ಲಿ 13.7% ತಲುಪಿದೆ, ಎಂಬ ಆರ್‌ಬಿಐ ವರದಿಯ ಮಾಹಿತಿ ಅಫಿಡವಿಟ್‌ಗಳಲ್ಲಿ ಇಲ್ಲ.
* 500 ರೂ. ಮತ್ತು 1000ರೂ. ನೋಟುಗಳ ಪ್ರಮಾಣ ತೀವ್ರವಾಗಿ ಹೆಚ್ಚಿದೆ ಎಂಬುದನ್ನು ಆರ್‌ಬಿಐ ಪೂರ್ಣವಾಗಿ ಒಪ್ಪಿರಲಿಲ್ಲ.
* ಖೋಟಾ ನೋಟುಗಳ ಪ್ರಮಾಣ ಪ್ರತಿಕೂಲ ಪರಿಣಾಮ ಬೀರಿದೆ ಎಂಬ ಸರಕಾರದ ವಾದವನ್ನು ಕೂಡ ರಿಸರ್ವ್ ಬ್ಯಾಂಕ್ ಒಪ್ಪಿರಲಿಲ್ಲ. ಖೋಟಾ ನೋಟುಗಳ ಪ್ರಮಾಣ ಗಮನಾರ್ಹವಾಗಿಯೇನೂ ಇಲ್ಲ ಎಂದು ಅದು ಹೇಳಿತ್ತು.
* 500ರೂ. ಮತ್ತು 1000ರೂ. ನೋಟುಗಳನ್ನು ಕಪ್ಪು ಹಣದ ದಾಸ್ತಾನಿಗೆ ಬಳಸಲಾಗುತ್ತಿದೆ ಎಂಬ ವಾದವನ್ನಂತೂ ಆರ್‌ಬಿಐ ತಳ್ಳಿ ಹಾಕಿತ್ತು. ಹೆಚ್ಚಿನ ಕಪ್ಪು ಹಣವನ್ನು ರಿಯಲ್ ಎಸ್ಟೇಟ್, ಚಿನ್ನ ಮುಂತಾದವುಗಳಲ್ಲಿ ಇಡಲಾಗುತ್ತದೆ. ಆದ್ದರಿಂದ ನೋಟುರದ್ಧತಿ ಕಪ್ಪು ಹಣದ ಮೇಲೆ ಬೀರುವ ಪ್ರಭಾವ ಬಹಳೇನೂ ಇಲ್ಲ ಎಂದೇ ಅದು ಹೇಳಿತ್ತು.
* 500/1000ರೂ. ನೋಟುಗಳನ್ನು ಭಯೋತ್ಪಾದನೆಗೆ ಹಣ ಒದಗಿಸಲು ಬಳಸುವ ಪ್ರಶ್ನೆಯ ಉಲ್ಲೇಖ ಬ್ಯಾಂಕಿನ ಕೇಂದ್ರ ಮಂಡಳಿಯ ಸಭೆಯ ಕಲಾಪದಲ್ಲಿ ಇರಲಿಲ್ಲ.
* ರಿಸರ್ವ್ ಬ್ಯಾಂಕ್ ಹೇಗಿದ್ದರೂ ಹೊಸ ಕರೆನ್ಸಿಗಳನ್ನು ಚಲಾವಣೆಗೆ ತರುವ ಬಗ್ಗೆ ಯೋಚಿಸುತ್ತಿತ್ತು, ಆದ್ದರಿಂದ ನೋಟುರದ್ಧತಿಯ ಕ್ರಮಕ್ಕೆ ಇದು ತಕ್ಕ ಸಮಯ ಎಂದೂ ತಾನು ಬ್ಯಾಂಕ್ ಕೇಂದ್ರೀಯ ಮಂಡಳಿಗೆ ಹೇಳಿದುದಾಗಿ ಸರಕಾರದ ಅಫಿಡವಿಟ್ ಹೇಳುತ್ತದಂತೆ. ಆದರೆ ಮಂಡಳಿಯ ಸಭೆಯ ಕಲಾಪಪಟ್ಟಿಯಲ್ಲಿ ಈ ಅಂಶ ಇರಲಿಲ್ಲ. ಅಲ್ಲದೆ, ಅದೂ ಸಹ ಇದು ತಕ್ಕ ಸಮಯ ಎಂದು ಭಾವಿಸಿದ್ದರೆ, ನೋಟುರದ್ಧತಿಯ ನಂತರ ಹೊಸ ನೋಟುಗಳನ್ನು ಒದಗಿಸುವಲ್ಲಿ ಅಷ್ಟೊಂದು ಸಮಸ್ಯೆಗಳು ಏಕೆ ಬಂದವು, ಅದು ಎಟಿಎಂಗಳನ್ನು ಇದಕ್ಕೆ ಸಿದ್ಧಪಡಿಸುವ ಕಾರ್ಯಪಡೆಯನ್ನು ರಚಿಸಲು ಒಂದು ವಾರ ತೆಗೆದುಕೊಂಡದ್ದೇಕೆ ಎಂಬುದರ ಉಲ್ಲೇಖ ಅಫಿಡವಿಟ್‌ನಲ್ಲಿಲ್ಲ. ಈ ಬಗ್ಗೆ ಕೇಂದ್ರ ಹಣಕಾಸು ಇಲಾಖೆ ಮತ್ತು ರಿಸರ್ವ್ ಬ್ಯಾಂಕ್‌ಗೆ ಕಳಿಸಿದ ಈಮೇಲ್‌ಗಳಿಗೆ ಸ್ಪಂದನೆ ಸಿಕ್ಕಿಲ್ಲ ಎಂದೂ ಇಂಡಿಯನ್ ಎಕ್ಸ್‌ಪ್ರೆಸ್‌ನ ಈ ಕುರಿತ ವರದಿಯಲ್ಲಿ ಹೇಳಲಾಗಿದೆ.

ನಿಜವಾಗಿ ಹೇಳಬೇಕೆಂದರೆ, ರಿಸರ್ವ್ ಬ್ಯಾಂಕಿನ ಅಫಿಡವಿಟ್ ವಿಷಯವನ್ನು ಮಬ್ಬುಗೊಳಿಸುತ್ತದೆ ಎನ್ನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಅರುಣ್ ಕುಮಾರ್. ಸರಕಾರ ತನ್ನ ಅಫಿಡವಿಟ್‌ನಲ್ಲಿ ಹೇಳಿರುವ 8–9 ತಿಂಗಳಲ್ಲಿ ಬಹುಪಾಲು ಡಾ. ರಘುರಾಮ ರಾಜನ್ ಬ್ಯಾಂಕಿನ ಗವರ್ನರ್ ಆಗಿದ್ದರು. ಅವರು ತಾನು ಈ ಸಲಹೆ ನೀಡಿದುದಾಗಿ ಎಲ್ಲೂ ದಾಖಲಿಸಿಲ್ಲ. ನಂತರ ಆ ಸ್ಥಾನಕ್ಕೆ ಬಂದ ಡಾ.ಉರ್ಜಿತ್ ಪಟೇಲ್ ಕೂಡ ಇದರ ಪರವಾಗಿರಲಿಲ್ಲ ಎಂದು ಹೇಳಲಾಗಿದೆ. ಅಂದರೆ ಸರಕಾರ ಹೇಳಿರುವಂತೆ ಸಮಾಲೋಚನೆ ನಡೆದಿದ್ದರೂ, ರಿಸರ್ವ್ ಬ್ಯಾಂಕಿನ ಸಮ್ಮತಿ ಇರಲಿಲ್ಲ ಎಂದೇ ಊಹಿಸಬೇಕಾಗುತ್ತದೆ ಎಂದು ಪ್ರೊ. ಅರುಣ್ ಕುಮಾರ್ ಹೇಳುತ್ತಾರೆ. ರಿಸರ್ವ್ ಬ್ಯಾಂಕ್ ಬಡ್ಡಿದರದ ವಿಷಯ ಚರ್ಚಿಸಲೂ ಎರಡು ದಿನ ತೆಗೆದುಕೊಳ್ಳುತ್ತದೆ. ಹಾಗಿರುವಾಗ, ನೋಟುರದ್ಧತಿಯಂತಹ ಗಂಭಿರ ವಿಷಯದ ಬಗ್ಗೆ ಶಿಫಾರಸಿನ ನಿರ್ಣಯ ಮಾಡಲು ನಿಮಿಷಗಳಲ್ಲಿ ಸಾಧ್ಯವೇ ಎಂದು ಅವರು ಪ್ರಶ್ನಿಸುತ್ತಾರೆ.

ನಿಜ, ರಿಸರ್ವ್ ಬ್ಯಾಂಕಿನ ಅಫಿಡವಿಟ್ ತನ್ನ ಶಿಫಾರಸಿನಿಂದ ಈ ಕ್ರಮ ಕೈಗೊಳ್ಳಲಾಗಿತ್ತು ಎನ್ನುತ್ತದೆ, ಏಕೆಂದರೆ ಅದು ಸರಕಾರದ ನಿರ್ದೇಶನವನ್ನು ಪಾಲಿಸದಿರುವುದೂ ಸಾಧ್ಯವಿಲ್ಲವಲ್ಲ ಎನ್ನುತ್ತಾರೆ ಅವರು.

ಈ ಮೂಲಕ, ಈಗ ನೋಟುರದ್ದತಿ ವಿಫಲವಾಗಿದ್ದರೆ ಅದಕ್ಕೆ ರಿಸರ್ವ್ ಬ್ಯಾಂಕ್ ಹೊಣೆಯಾಗುತ್ತದೆ, ಸರಕಾರವಲ್ಲ!

ಇದು ಅಮೃತ ಕಾಲ



ನೋಟುರದ್ಧತಿ : ಸರಕಾರ ಮತ್ತು ಆರ್‌ಬಿಐನ ಅಫಿಡವಿಟ್‌ಗಳು

ಅದ್ಭುತ ಎಡಿಟಿಂಗ್, ನಗದು ಬಹುಮಾನ ಅಥವ ಅದಕ್ಕಿಂತಲೂ ಹೆಚ್ಚಾಗಿ ಚಿನ್ನದ ಪದಕ ಸಲ್ಲಬೇಕು

ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಭೀಮಾ ಕೋರೆಗಾಂವ್ ಹಿಂಸಾಚಾರದಲ್ಲಿ ಎಲ್ಗಾರ್ ಪರಿಷದ್ ಪಾತ್ರವಿಲ್ಲ ಆದರೂ 15 ಮಂದಿಗೆ ಅನಿರ್ದಿಷ್ಟ ಸೆರೆವಾಸ, ಒಬ್ಬರಿಗೆ ಸಾವು!

ಐದು ವರ್ಷಗಳ ಹಿಂದೆ, ಜನವರಿ 1, 2018 ರಂದು ಭೀಮಾ ಕೋರೆಗಾಂವ್‌ನಲ್ಲಿ ಭುಗಿಲೆದ್ದ ಹಿಂಸಾಚಾರಕ್ಕೂ ಪುಣೆಯ ಎಲ್ಗಾರ್ ಪರಿಷತ್ತಿಗೂ ಯಾವುದೇ ಸಂಬಂಧವಿಲ್ಲ. ಹೀಗೆಂದು ಮಹಾರಾಷ್ಟ್ರ ಸರ್ಕಾರ ರಚಿಸಿರುವ ಎನ್.ಜೆ.ಪಟೇಲ್ ನ್ಯಾಯಾಂಗ ಆಯೋಗದ ಮುಂದೆ ಅಂದಿನ ತನಿಖಾಧಿಕಾರಿಗಳಾಗಿದ್ದ ಹಿರಿಯ ಪೊಲೀಸ್ ಅಧಿಕಾರಿ ಗಣೇಶ್ ಮೋರೆ ಪ್ರಸ್ತುತ ಪಡಿಸಿರುವ ಹೇಳಿಕೆಯಲ್ಲಿ ತಿಳಿಸಿರುವುದಾಗಿ ವರದಿಯಾಗಿದೆ. ಅಂದರೆ ಈಗ ಆರೋಪಿಗಳಾಗಿ ನಾಲ್ಕು ವರ್ಷಗಳು ಕಳೆದರೂ ಇನ್ನೂ ವಿಚಾರಣೆಯೇ ಆರಂಭವಾಗದೆ, ಜಾಮೀನಿಗೂ ಹೆಜ್ಜೆ–ಹೆಜ್ಜೆಯಲ್ಲೂ ಕಷ್ಟಪಡಬೇಕಾಗಿರುವ 16 ಮಂದಿ ಮಾನವ ಹಕ್ಕು ಹೋರಾಟಗಾರರು ಭೀಮಾ ಕೋರೆಗಾಂವ್ ಸಮರದ 200ನೇ ವಾರ್ಷಿಕೋತ್ಸವದಂದು ಸೇರಿದ್ದ ಜನರ ಎದುರು ‘ಉದ್ರೇಕಕಾರಿ’ ಭಾಷಣಗಳನ್ನು ಮಾಡಿದ್ದರಿಂದಾಗಿ ಹಿಂಸಾಚಾರ ನಡೆಯಿತು ಎಂದು ಮೊದಲಿಗೆ ಪುಣೆ ಪೊಲೀಸರು, ನಂತರ ಕೇಂದ್ರ ಸರಕಾರದ ಅಡಿಯಲ್ಲಿರುವ ಎನ್‌ಐಎ ಹೇಳಿರುವುದು ಸುಳ್ಳು ಎಂದು ಬಯಲಾದಂತಾಗಿದೆ. ಇಷ್ಟೇ ಅಲ್ಲ, ಈ ಹಿಂಸಾಚಾರಕ್ಕೆ ಆಳುವ ಮಂದಿಯೊಂದಿಗೆ ಸಂಬಂಧವಿರುವ ಸಂಭಾಜಿ ಭಿಡೆ ಮತ್ತು ಮಿಲಿಂದ್ ಎಕ್ಬೋಟೆ ಕಾರಣ ಎಂದು ಕೂಡ ಗಣೇಶ್ ಮೋರೆ ಹೇಳಿರುವುದಾಗಿ ವರದಿಯಾಗಿದೆ.

ಇದಕ್ಕೆ ಮೊದಲೇ ಈ ಇಡೀ ಪ್ರಕರಣವೇ ಒಂದು ಸುಳ್ಳು ಸೃಷ್ಟಿ ಇರಬಹುದೇ ಎಂಬ ಸಂದೇಹ ಈ 16 ಜನರಲ್ಲಿ ಮೂವರ ಲ್ಯಾಪ್‌ಟಾಪ್‌ಗಳಲ್ಲಿ ದುಷ್ಟ ತಂತ್ರಾಂಶ ನೆಡಲಾಗಿತ್ತು ಎಂದು ಫೊರೆನ್ಸಿಕ್ ಪರೀಕ್ಷೆಯಿಂದ ತಿಳಿದು ಬಂದಿದೆಯೆಂಬ ವರದಿ ಬಂದಾಗಿನಿಂದ ಎದ್ದಿತ್ತು. ಈ 16 ಮಂದಿಯಲ್ಲಿ ಮೂವರು ಬಹಳ ಅಡೆ–ತಡೆಗಳನ್ನು ಎದುರಿಸಿ ಜಾಮೀನು ಪಡೆದಿದ್ದಾರೆ. ಬಂಧನದಲ್ಲಿ ಅಮಾನುಷ ವರ್ತನೆಗಳನ್ನು ಎದುರಿಸಬೇಕಾಗಿ ಬಂದ 80 ವರ್ಷ ವಯಸ್ಸಿನ ಸಮಾಜ ಸೇವಕ ಫಾದರ್ ಸ್ಟಾನ್ ಸ್ವಾಮಿ ಜೈಲಿನಲ್ಲಿಯೇ ಕೊನೆಯುಸಿರೆಳೆದರು.

ಈಗ ಇವರೆಲ್ಲರೂ ಸರಕಾರದ ಒಂದು ಅಕ್ರಮ ಮತ್ತು ಕಾನೂನುಬಾಹಿರ ಕ್ರಮಕ್ಕೆ ಬಲಿಪಶುವಾಗಿದ್ದಾರೆ ಎಂದು ಆಗಿನಿಂದಲೂ ಹಲವರು ಹೇಳುತ್ತ ಬಂದಿರುವುದು ನಿಜ ಎಂದು ಸಾಬೀತಾಗುವಂತೆ ಕಾಣುತ್ತಿದೆ.

ತನಿಖಾ ಆಯೋಗದ ಮುಂದೆ ಆಗಿನ ತನಿಖಾಧಿಕಾರಿಯ ಈ ಹೇಳಿಕೆಯು ಅಸಂವಿಧಾನಿಕ ಬಂಧನದಲ್ಲಿ ತಮ್ಮ ಜೀವನದ ಅನಿರ್ದಿಷ್ಟ ಅವಧಿಯನ್ನು ಕಳೆಯುತ್ತಿರುವ ಅಮಾಯಕರ ಜೀವನ ಮತ್ತು ಯೋಗಕ್ಷೇಮಕ್ಕೆ ಅತ್ಯಂತ ಮಹತ್ವದ್ದಾಗಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಹೇಳಿದೆ. ಆಗ ಇದ್ದ ಬಿಜೆಪಿ–ಶಿವಸೇನೆ ಸರಕಾರದಲ್ಲಿ ಗೃಹ ಖಾತೆಯನ್ನು ದೇವೇಂದ್ರ ಫಡ್ನವೀಸ್ ಹೊಂದಿದ್ದರು ಮತ್ತು ಬಿಜೆಪಿಯ ಉನ್ನತ ಮಟ್ಟದ ನಾಯಕರ ಮಾರ್ಗದರ್ಶನದಲ್ಲಿ ನಡೆದ ಸಂಪೂರ್ಣ ಭ್ರಷ್ಟ ಮತ್ತು ಅನೈತಿಕ ರಾಜಕೀಯ ಪಿತೂರಿಯ ನಂತರ ಈಗ ರಚನೆಯಾಗಿರುವ ಹೊಸ ಸರಕಾರದಲ್ಲೂ ಅದನ್ನು ಮರಳಿ ಪಡೆದಿದ್ದಾರೆ ಎಂದು ನೆನಪಿಸಿರುವ ಅದು, ಆರೆಸ್ಸೆಸ್ ಮತ್ತು ಬಿಜೆಪಿಯ ಸಿನಿಕ ಮತ್ತು ದುಷ್ಟ ತಂತ್ರಗಳಿಗೆ ಭೀಮಾ ಕೋರೆಗಾಂವ್ ಪ್ರಕರಣದ ಮುಗ್ಧ ಹದಿನಾರು ಮಂದಿ ಭಾರೀ ಬೆಲೆ ತೆರುತ್ತಿದ್ದಾರೆ, ಸುಳ್ಳು ಆರೋಪಗಳನ್ನು ಹೊತ್ತಿರುವ ಈ ನಾಗರಿಕರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಮತ್ತು ಅವರ ಮೇಲಿನ ಎಲ್ಲಾ ಆರೋಪಗಳನ್ನು ಯಾವುದೇ ವಿಳಂಬವಿಲ್ಲದೆ ಹಿಂಪಡೆಯಬೇಕು ಎಂದು ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿ ಆಗ್ರಹಿಸಿದೆ. ಫಾದರ್ ಸ್ಟಾನ್ ಸ್ವಾಮಿ ಜೈಲಿನಲ್ಲೇ ಕೊನೆಯುಸಿರೆಳೆಯಬೇಕಾಗಿ ಬಂದಂತಹ ಪರಿಸ್ಥಿತಿ ಉಳಿದವರಿಗೂ ಬರಬೇಕು ಎಂದು ಮಹಾರಾಷ್ಟ್ರ ರಾಜ್ಯ ಸರ್ಕಾರ ಬಯಸುತ್ತಿದೆಯೇ ಎಂದು ಸಿಪಿಐ(ಎಂ) ಕೇಳಿದೆ.

ಈ ಅಮಾಯಕ ನಾಗರಿಕರು ಮತ್ತು ಅವರ ಕುಟುಂಬದ ಸದಸ್ಯರು ರಾಜ್ಯ ಮತ್ತು ಕೇಂದ್ರದ ಬಿಜೆಪಿ ಸರ್ಕಾರಗಳ ಅನೈತಿಕ ಮತ್ತು ಅವಮಾನವೀಯ ವರ್ತನೆಯಿಂದಾಗಿ ಅಪಾರವಾದ ಕಷ್ಟಗಳನ್ನು ಅನುಭವಿಸಿದ್ದಾರೆ. ಅವರ ಕಾನೂನುಬಾಹಿರ ಮತ್ತು ಅಕ್ರಮ ಸೆರೆವಾಸಕ್ಕೆ ಗುರಿಪಡಿಸಿದಕ್ಕಾಗಿ ಅವರೆಲ್ಲರಿಗೂ ಆರ್ಥಿಕವಾಗಿ ಸಮರ್ಪಕ ಪರಿಹಾರವನ್ನು ನೀಡಬೇಕು ಎಂದೂ ಮಹಾರಾಷ್ಟ್ರ ರಾಜ್ಯ ಸಮಿತಿ ಆಗ್ರಹಿಸಿದೆ. ಇದು ದೇಶದ ಎಲ್ಲ ಪ್ರಜಾಪ್ರಭುತ್ವವಾದಿಗಳ ಆಗ್ರಹವೂ ಕೂಡ ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

ಮನ್ ರೇಗಕ್ಕೆ ಕೇಂದ್ರ ಸರಕಾರದಿಂದ 10,150 ಕೋಟಿ ರೂ. ಬಾಕಿ

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಮನರೇಗ)ಕ್ಕೆ ವೆಚ್ಚದಲ್ಲಿ 18 ರಾಜ್ಯಗಳು ಕೇಂದ್ರ ಸರಕಾರದಿಂದ ಇನ್ನೂ ರೂ.4700 ಕೋಟಿ ಪಡೆಯಬೇಕಾಗಿದೆ. ಇದಲ್ಲದೆ, ಒಟ್ಟು 5450 ಕೋಟಿ ರೂ.ಗಳಷ್ಟು ಈ ಯೋಜನೆಯ ಅಡಿಯಲ್ಲಿ ಬೇಕಾದ ಸಾಮಗ್ರಿಗಳ ವೆಚ್ಚವೂ ಕೇಂದ್ರ ಸರಕಾರದಿಂದ 19 ರಾಜ್ಯ ಸರಕಾರಗಳಿಗೆ ಇನ್ನೂ ಸಿಕ್ಕಿಲ್ಲ ಎಂದು ಕೂಡ ಮಾಧ್ಯಮಗಳಲ್ಲಿ ವರದಿಯಾಗಿದೆ.

ಮನರೇಗ ಕಾಂಗ್ರೆಸಿನ ಆಳ್ವಿಕೆಯ ಸೋಲಿನ ಸಂಕೇತ ಎನ್ನುತ್ತ ಅದರ ಬಗ್ಗೆ ಆರಂಭದಿಂದಲೇ ಪ್ರಧಾನಿಗಳು ಅದರ ವಿರುದ್ದ ಅಭಿಪ್ರಾಯವನ್ನು ಹೊಂದಿದ್ದರೂ, ಆರ್ಥಿಕ ಸಂಕಟದ ಕಾಲದಲ್ಲಿ, ವಿಶೇಷವಾಗಿ ಗ್ರಾಮೀಣ ಬಡವರಿಗೆ ತುಸುವಾದರೂ ಪರಿಹಾರ ಒದಗಿಸಿ ಸರಕಾರದ ನೆರವಿಗೆ ಬಂದಿದ್ದರೂ, ಈ ಯೋಜನೆಗೆ ಬಜೆಟ್ ನೆರವನ್ನು ವರ್ಷದಿಂದ ವರ್ಷಕ್ಕೆ ಕಡಿತ ಮಾಡುತ್ತ ಬರುತ್ತಿರುವುದು ಗ್ರಾಮೀಣ ಭಾರತದ ಜನಗಳ ಮೇಲೆ ಸರಕಾರ ಮಾಡುತ್ತಿರುವ ಪ್ರಹಾರಗಳು ಎಂಬ ಟೀಕೆಗಳು ಬರುತ್ತಲೇ ಇರುವಾಗ ಅದರ ಜೊತೆಗೆ ಇಂತಹ ಬಾಕಿಗಳು ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಗೊಳಿಸುತ್ತವೆ ಎಂದು ಪರಿಣತರು ಹೇಳುತ್ತಿದ್ದಾರೆ.

ಇದು ಸಾಲದೆಂಬಂತೆ, ಜನವರಿ 1ರಿಂದ 20 ಅಥವ ಹೆಚ್ಚು ಕೆಲಸಗಾರರಿರುವ ಕೆಲಸದ ಸ್ಥಳಗಳಲ್ಲಿ ಮನರೇಗ ಕೆಲಸ ಮಾಡುತ್ತಿರುವುವರು ತಮ್ಮ ಹಾಜರಾತಿಯನ್ನು ಮೊಬೈಲ್ ಆಫ್ ಮೂಲಕ ಫೋಟೋ ಸಹಿತ ದೃಢಪಡಿಸಬೇಕು ಎಂದು ಸರಕಾರ ವಿಧಿಸಿರುವುದಾಗಿಯೂ ವರದಿಯಾಗಿದೆ. ಸರಕಾರ ‘ಪಾರದರ್ಶಕತೆ ಮತ್ತು ಜವಾಬುದಾರಿಕೆ” ಹೆಸರಿನಲ್ಲಿ ಈ ಕ್ರಮವನ್ನು ತರುವ ವಿಚಾರ ಮಾಡುತ್ತಿದ್ದರೂ, ಇದಕ್ಕೆ ಅಗತ್ಯವಾದ ತಾಂತ್ರಿಕ ಬೆಂಬಲವಿಲ್ಲದ್ದರಿಂದ ಇದು ಕೆಲಸಗಾರರಿಗೂ ಮತ್ತು ಅವರ ಕೆಲಸದ ಮೇಲ್ವಿಚಾರಕರಿಗೂ ಕಷ್ಟಗಳನ್ನು ಹೆಚ್ಚಿಸುವ ಕಾರ್ಯಸಾಧ್ಯವಲ್ಲದ ಇನ್ನೊಂದು ಕ್ರಮ ಎಂಬ ವಿರೋಧ ಬಂದಿತ್ತು. ಈಗ ಆ ವಿರೋಧವನ್ನು ಲೆಕ್ಕಿಸದೆ ಸರಕಾರ ಅದನ್ನು ಜಾರಿ ಮಾಡಲು ಹೊರಟಿದೆ.

ಈ ನಡುವೆ ಈ ವರ್ಷದ ಕೊನೆಯ ‘ಮನ್ ಕೀ ಬಾತ್’ನಲ್ಲಿ ಪ್ರಧಾನಮಂತ್ರಿಗಳು ಅಮೃತ ಕಾಲ ಪ್ರಾಂಭವಾಗುತ್ತಿದ್ದಂತೆ ಭಾರತದಲ್ಲಿ ತ್ವರಿತ ಪ್ರಗತಿ ಕಾಣುತ್ತಿದೆ ಎಂದು ಹೇಳಿದ್ದಾರಂತೆ.



ಭಾರತದಲ್ಲಿ ಕೈಗಾರಿಕಾ ಜಡತೆ ಏಕೆ?

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್



ಭಾರತದ ಅರ್ಥವ್ಯವಸ್ಥೆಯಲ್ಲಿ ಬೆಳವಣಿಗೆಯ ದರ ನವ-ಉದಾರವಾದಿ ಘಟ್ಟದಲ್ಲಿ ಹೆಚ್ಚಿದೆ ಎಂಬ ಪ್ರಚಾರಕ್ಕೆ ವ್ಯತಿರಿಕ್ತವಾಗಿ ವಾಸ್ತವದಲ್ಲಿ, ವಿಶೇಷವಾಗಿ, 2011–12 ರಿಂದ 2019–20ರ ಅವಧಿಯಲ್ಲಿ ಇದು ಗಣನೀಯವಾಗಿ ಇಳಿದಿದೆ ಎಂಬುದು ಅಂಕಿ-ಅಂಶಗಳನ್ನು ವಿಶ್ಲೇಷಿಸಿದಾಗ ಕಾಣ ಬರುತ್ತದೆ. ಈ ಜಡತೆಯು ಈಗ ನಮ್ಮ ಅರ್ಥವ್ಯವಸ್ಥೆಯ ಒಂದು ಸಾಮಾನ್ಯ ಸ್ಥಿತಿಯೇ ಆಗಿಬಿಟ್ಟಿದೆ ಎಂದು ತೋರುತ್ತದೆ. ಏಕೆಂದರೆ, ಕೊವಿಡ್ ಮೊದಲಿದ್ದ ಜಡತೆಯೇ ಕೊವಿಡ್ ನಂತರವೂ ಮುಂದುವರಿಯುತ್ತಿದೆ ಮತ್ತು ತೀವ್ರಗೊಂಡಿದೆ ಕೂಡ. ಆದ್ದರಿಂದ, ಭಾರತದ ಕೈಗಾರಿಕಾ ಅರ್ಥವ್ಯವಸ್ಥೆಯು ಏಕೆ ಜಡವಾಗಿದೆ ಎಂಬ ಪ್ರಶ್ನೆ ಏಳುತ್ತದೆ.

ಅಕ್ಟೋಬರ್ 2021ಕ್ಕೆ ಹೋಲಿಸಿದರೆ, ಅಕ್ಟೋಬರ್ 2022ರಲ್ಲಿ ಕೈಗಾರಿಕಾ ಉತ್ಪಾದನಾ ಸೂಚ್ಯಂಕದಲ್ಲಿ ಶೇ. 4 ರಷ್ಟು ಇಳಿಕೆಯಾಗಿದೆ. ಈ ಬಗ್ಗೆ ಸಾರ್ವಜನಿಕ ಚರ್ಚೆಗಳು ಸಾಕಷ್ಟು ನಡೆದಿವೆ. ಈ ಚರ್ಚೆಗಳ ಅವಶ್ಯಕತೆಯೂ ಇತ್ತು. ಏಕೆಂದರೆ, ಈ ಕುಸಿತವನ್ನು ವಿವರಿಸಲು ಕೋವಿಡ್-ಪ್ರೇರಿತ ಲಾಕ್‌ಡೌನ್ ಆಗಲಿ ಅಥವಾ ಲಾಕ್‌ಡೌನ್‌ನ ಉಳಿಕೆಯ ದೀರ್ಘಕಾಲೀನ ಪರಿಣಾಮಗಳಾಗಲಿ ಕಾರಣವೆಂದು ಹೇಳಲು ಬರುವುದಿಲ್ಲ. ಹೇಳಿ ಕೇಳಿ ಕೋವಿಡ್ ಒಂದು ಆಗಿ ಹೋದ ವಿಷಯ. ಹಾಗಾಗಿ, ಅಕ್ಟೋಬರ್‌ನ ಕೈಗಾರಿಕಾ ಉತ್ಪಾದನಾ ಸೂಚ್ಯಂಕದಲ್ಲಿ ಕಂಡು ಬಂದ ತೀಕ್ಷ್ಣ ಕುಸಿತವು ಭಾರತದ ಅರ್ಥ ವ್ಯವಸ್ಥೆಯಲ್ಲಿ ಒಂದು ಒಳಬೇನೆ ಬೇರೂರಿದೆ ಎಂಬುದನ್ನು ಪ್ರಧಾನವಾಗಿ ಸೂಚಿಸುತ್ತದೆ.

ಕೈಗಾರಿಕಾ ಉತ್ಪಾದನೆಯ ತಕ್ಷಣದ ಕುಸಿತದ ಬಗ್ಗೆ ಗಮನ ಹರಿಸುವುದೇನೊ ಸರಿ. ಆದರೆ, ಭಾರತದ ಕೈಗಾರಿಕಾ ಅರ್ಥವ್ಯವಸ್ಥೆಯಲ್ಲಿ ಈಗಾಗಲೆ ನೆಲೆಸಿರುವ ಜಡತೆಯ ಬಗ್ಗೆ ಸಾಕಷ್ಟು ಗಮನ ಹರಿಸಿಯೇ ಇಲ್ಲ. ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ಮೂಲ ವರ್ಷವನ್ನು ಸರ್ಕಾರವು ಕಾಲಕಾಲಕ್ಕೆ ಬದಲಾಯಿಸುತ್ತಿದೆ. ಹಾಗಾಗಿ, ಈ ಸೂಚ್ಯಂಕಗಳನ್ನು ಆಧರಿಸಿ ಮಾಡುವ ಹೋಲಿಕೆಗಳು ಅಸಮರ್ಪಕವಾಗುತ್ತವೆ. ಆದ್ದರಿಂದ, ನಾವು 2011–12 ಮೂಲ ವರ್ಷಾಧಾರಿತ ಸೂಚ್ಯಂಕವನ್ನೇ ಪರಿಗಣನೆಗೆ ತೆಗೆದುಕೊಳ್ಳೋಣ. ಈ ಸೂಚ್ಯಂಕವು ಇತ್ತೀಚಿನದು ಮತ್ತು ಅದರ ಪ್ರಕಾರವಾಗಿ ಕೈಗಾರಿಕಾ ಉತ್ಪಾದನೆ ಹೇಗಿದೆ ಎಂಬುದನ್ನು ಪರಿಶೀಲಿಸೋಣ.

ಒಂದು ವೇಳೆ ನಾವು ಪೂರ್ಣವಾಗಿ ಸಾಂಕ್ರಾಮಿಕದ ಹಿಂದಿನ ಅವಧಿಯ ಮೇಲೆ ಗಮನ ಹರಿಸಿದರೂ ಸಹ, 2011–12 ಮತ್ತು 2019–20ರ ನಡುವೆ ಕೈಗಾರಿಕಾ ಉತ್ಪಾದನೆಯಲ್ಲಿನ ಒಟ್ಟು ಹೆಚ್ಚಳವು ಕೇವಲ ಶೇ. 29ರಷ್ಟಿತ್ತು ಎಂಬುದನ್ನು ಅಂದರೆ, ಸರಾಸರಿ ವಾರ್ಷಿಕ ಶೇ. 3.2 ರಷ್ಟು ಹೆಚ್ಚಳವನ್ನು ಕಾಣಬಹುದು. ಇದು ಅತ್ಯಂತ ಕಡಿಮೆ ಎಂಬುದು ಮಾತ್ರವಲ್ಲದೆ ಅದನ್ನು ಹಿಂದಿನ ಯಾವುದೇ ಅವಧಿಗೆ ಹೋಲಿಸಿದರೂ ಸಹ ಆ ಅವಧಿಯ ಸರಾಸರಿ ವಾರ್ಷಿಕ ಕೈಗಾರಿಕಾ ಬೆಳವಣಿಗೆಯ ದರಕ್ಕಿಂತಲೂ ಕಡಿಮೆ ಇದೆ ಎಂಬುದನ್ನು ಗಮನಿಸಬಹುದು. 1951 ಮತ್ತು 1965ರ ನಡುವಿನ ನಿಯಂತ್ರಣಗಳ ನೀತಿಯ ವರ್ಷಗಳಲ್ಲಿ, ದೇಶದ ಅರ್ಥವ್ಯವಸ್ಥೆಯನ್ನು ಕೆಳ ಮಟ್ಟದ ಜಿಡಿಪಿ ಬೆಳವಣಿಗೆಗೆ ಕಟ್ಟಿಹಾಕಲಾಗಿತ್ತು ಎಂಬುದಾಗಿ ನವ-ಉದಾರವಾದಿ ಅರ್ಥಶಾಸ್ತ್ರಜ್ಞರು ಹೀನಾಯವಾಗಿ ಅಪಹಾಸ್ಯ ಮಾಡುವ ("ಬೆಳವಣಿಗೆಯ ದರ"ದ ಬದಲಾಗದ ಗುಣದಿಂದಾಗಿ ಆಗಿನ ಬೆಳವಣಿಗೆಯ ದರವನ್ನು ಕೆಲವೊಮ್ಮೆ "ಹಿಂದೂದರ" ಎಂದು ಕುಚೋದ್ಯದಿಂದ ಕರೆಯಲಾಗುತ್ತಿದ್ದ) ವರ್ಷಗಳಲ್ಲಿ, 1956 ಮೂಲ ವರ್ಷಾಧಾರಿತ ಸೂಚ್ಯಂಕದ ಪ್ರಕಾರ, ಕೈಗಾರಿಕಾ ಉತ್ಪಾದನೆಯ ಬೆಳವಣಿಗೆಯ ದರವು ವಾರ್ಷಿಕ ಶೇ. 7 ಕ್ಕಿಂತಲೂ ಹೆಚ್ಚಿಗೆ ಇತ್ತು. 2004–05 ಮೂಲ ವರ್ಷಾಧಾರಿತ ಸೂಚ್ಯಂಕವನ್ನು ನಾವು ಪರಿಗಣನೆಗೆ ತೆಗೆದುಕೊಂಡು ಲೆಕ್ಕಹಾಕಿದರೂ ಸಹ, 2004–05 ರಿಂದ ಹಿಡಿದು 2014–15ರ ವರೆಗಿನ ಒಂದು ದಶಕದ ಕೈಗಾರಿಕಾ ಉತ್ಪಾದನೆಯ ಸರಾಸರಿ ವಾರ್ಷಿಕ ಬೆಳವಣಿಗೆ ದರವು ಶೇ. 5.87ರಷ್ಟಿತ್ತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಇತ್ತೀಚಿನ ವರ್ಷಗಳಲ್ಲಿ ಕೈಗಾರಿಕಾ ಬೆಳವಣಿಗೆಯ ದರವು ತೀವ್ರವಾಗಿ ನಿಧಾನಗೊಂಡಿದೆ. ಇದು ನವ-ಉದಾರವಾದಿ ವ್ಯವಸ್ಥೆಯು ಅರ್ಥವ್ಯವಸ್ಥೆಯ ಬೆಳವಣಿಗೆಯ ದರವನ್ನು ವೇಗಗೊಳಿಸಿದೆ ಎಂಬುದಾಗಿ ನವ-ಉದಾರವಾದಿ ಅರ್ಥಶಾಸ್ತ್ರಜ್ಞರು ನಿರಂತರವಾಗಿ ಬಿಂಬಿಸುತ್ತಿರುವುದಕ್ಕೆ ವ್ಯತಿರಿಕ್ತವಾಗಿದೆ. ಒಟ್ಟಾರೆಯಾಗಿ ನವ-ಉದಾರವಾದಿ ಅವಧಿಯಲ್ಲಿ, ಅದರ ಹಿಂದಿನ ಸ್ವಾತಂತ್ರ್ಯಾನಂತರದ ವರ್ಷಗಳ ಸರಾಸರಿಗೆ ಹೋಲಿಸಿದರೆ, ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ಬೆಳವಣಿಗೆಯ ದರವು ನಿಧಾನಗೊಂಡಿದೆ. ಅದಕ್ಕಿಂತಲೂ ಮಿಗಿಲಾಗಿ, ನವ-ಉದಾರವಾದಿ ಅವಧಿಯಲ್ಲೇ ಇತ್ತೀಚಿನ ವರ್ಷಗಳಲ್ಲಿ ನಿಧಾನಗತಿಯ ಬೆಳವಣಿಗೆಯನ್ನು ನಾವು ಕಾಣುತ್ತೇವೆ. ಅದೂ ಅಲ್ಲದೆ, ಕೈಗಾರಿಕಾ ಉತ್ಪಾದನಾ ಸೂಚ್ಯಂಕದಲ್ಲಿ ಸಣ್ಣ ಕೈಗಾರಿಕಾ ಘಟಕಗಳಿಗೆ ಮತ್ತು ಕಿರುಉತ್ಪಾದನಾ ಘಟಕಗಳಿಗೆ ಕೊಟ್ಟಿರುವ ಪ್ರಾತಿನಿಧ್ಯವು ಅಸಮರ್ಪಕವಾಗಿದೆ. ನವ-ಉದಾರವಾದಿ ನೀತಿಯ ಭಾಗವಾಗಿ ಸರ್ಕಾರವು ಈ ವಲಯಕ್ಕೆ ಒದಗಿಸುತ್ತಿದ್ದ ಬೆಂಬಲವನ್ನು ಹಿಂತೆಗೆದುಕೊಂಡದ್ದು ಮಾತ್ರವಲ್ಲದೆ, ನೋಟುರದ್ದತಿ ಮಾಡಿದ ಮತ್ತು ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೊಳಿಸಿದ ಮೋದಿ ಸರ್ಕಾರದ ನಿರ್ದಿಷ್ಟ ಕೃತ್ಯಗಳ ಕಾರಣದಿಂದಾಗಿ ಈ ಘಟಕಗಳು ಇತ್ತೀಚಿನ ಅವಧಿಯಲ್ಲಿ ಎದುರಿಸುತ್ತಿರುವ ತೀವ್ರ ಬಿಕ್ಕಟ್ಟಿನ ಅಂಶವನ್ನು ಪರಿಗಣಿಸಿದರೆ, ಔದ್ಯಮಿಕ ಉತ್ಪಾದನೆಯ ವಾಸ್ತವಿಕ ನಿಧಾನಗತಿಯು ಕೈಗಾರಿಕಾ ಉತ್ಪಾದನಾ ಸೂಚ್ಯಂಕವು ತೋರಿಸುವುದಕ್ಕಿಂತಲೂ ಹೆಚ್ಚೇ ಇದ್ದಿರಬೇಕು ಎನಿಸುತ್ತದೆ.

ಇಂತಹ ಒಂದು ಸನ್ನಿವೇಶದಲ್ಲಿ ಕೋವಿಡ್ ನಂತರದ ಸತ್ವಹೀನ-ಚೇತರಿಕೆಯು ಪ್ರಾಮುಖ್ಯತೆ ಪಡೆಯುತ್ತದೆ. ಸಾಮಾನ್ಯವಾಗಿ, ಸರಕುಗಳ ಪೂರೈಕೆಯಲ್ಲಿ ಅಡಚಣೆ ಉಂಟಾದಾಗ ಬೇಡಿಕೆಯು ಮುಂದೂಡಲ್ಪಡುತ್ತದೆ. ಈ ಅಡಚಣೆಗಳನ್ನು ನಿವಾರಿಸಿದಾಗ ವಾಸ್ತವವಾಗಿ ಒಂದು ಭರಾಟೆಯು ಅದನ್ನು ಅನುಸರಿಸುತ್ತದೆ. ಏಕೆಂದರೆ, ಅದುಮಿಟ್ಟ ಬೇಡಿಕೆಯ ಕೆಲ ಅಂಶವು ಆನಂತರದಲ್ಲಿ ಉಂಟಾಗುವ ಬೇಡಿಕೆಯ ಜೊತೆಗೆ ಕೂಡಿಕೊಳ್ಳುತ್ತದೆ. ಆದ್ದರಿಂದಲೇ ಸಾಮಾನ್ಯವಾಗಿ ಯುದ್ಧಾನಂತರ-ತಕ್ಷಣದ ಅವಧಿಯಲ್ಲಿ ಒಂದು ಭರಾಟೆಯು ಯುದ್ಧಕಾಲದ ವರ್ಷಗಳನ್ನು ಅನುಸರಿಸುತ್ತದೆ. ಇದನ್ನು "ಪರಿಣಾಮದ ಭರಾಟೆ" ಎಂದು ಕರೆಯಲಾಗಿದೆ. ಆದರೆ, ಕೋವಿಡ್ ಕಾರಣದಿಂದಾಗಿ ಉಂಟಾದ ಅಡಚಣೆಯ ಹೊರತಾಗಿಯೂ, ಕೋವಿಡ್ ನಂತರದ ಅವಧಿಯು ಅಂತಹ ಯಾವುದೇ ಭರಾಟೆಯನ್ನು ಕಾಣಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಹಿಂದಿನ ಜಡತೆಯೇ ಮುಂದುವರಿಯುತ್ತಿದೆ ಮತ್ತು ತೀವ್ರಗೊಂಡಿದೆ ಕೂಡ. ಈ ಜಡತೆಯು ಈಗ ಅರ್ಥವ್ಯವಸ್ಥೆಯ ಒಂದು ಸಾಮಾನ್ಯ ಸ್ಥಿತಿಯೇ ಆಗಿಬಿಟ್ಟಿದೆ ಎಂದು ತೋರುತ್ತದೆ. ಆದ್ದರಿಂದ, ಭಾರತದ ಕೈಗಾರಿಕಾ ಅರ್ಥವ್ಯವಸ್ಥೆಯು ಏಕೆ ಜಡವಾಗಿದೆ ಎಂಬ ಪ್ರಶ್ನೆ ಏಳುತ್ತದೆ.

ಆದಾಯಗಳ ಹಂಚಿಕೆಯಲ್ಲಿ ಹೆಚ್ಚುತ್ತಿರುವ ಅಸಮತೆ

ಇಲ್ಲಿ ಮಹತ್ವದ ಎರಡು ಅಂಶಗಳಿವೆ. ಮೊದಲನೆಯದು, ಆದಾಯಗಳ ಹಂಚಿಕೆಯಲ್ಲಿ ಹೆಚ್ಚುತ್ತಿರುವ ಅಸಮತೆಯಿಂದಾಗಿ ಕೈಗಾರಿಕಾ ಸರಕುಗಳ ಮೇಲಿನ ಬೇಡಿಕೆಯು ಕ್ರಮೇಣ ಕುಗ್ಗುತ್ತಲೇ ಹೋಗುತ್ತದೆ. ನವ-ಉದಾರವಾದದ ಅಡಿಯಲ್ಲಿ ಸಂಭವಿಸುತ್ತಿರುವ ಆದಾಯಗಳ ಅಸಮತೆಯ ಭಾರಿ ಹೆಚ್ಚಳದಿಂದಾಗಿ ಜನರ ಕೈಯಲ್ಲಿ ಕೊಳ್ಳುವ ಶಕ್ತಿಯು ವಾಸ್ತವವಾಗಿ ಕೆಳ ಮಟ್ಟದಲ್ಲಿದೆ ಮಾತ್ರವಲ್ಲ, ಹೋಲಿಸಿ ನೋಡಿದಾಗ ಕುಗ್ಗಿರುವುದೇ ಕಾಣುತ್ತದೆ. 1982ರಲ್ಲಿ ಶೇ.6ಕ್ಕೆ ಇಳಿದಿದ್ದ ಶೇ. ಒಂದರಷ್ಟು ಜನಸಂಖ್ಯೆಯು ರಾಷ್ಟ್ರೀಯ ಆದಾಯದಲ್ಲಿ ಹೊಂದಿದ್ದ ಪಾಲು, 2013–14ರ ವೇಳೆಗೆ ಶೇ.22ಕ್ಕೆ ಏರಿಕೆಯಾಗಿತ್ತು ಎಂಬುದನ್ನು ಪತ್ತೆ ಹಚ್ಚಿದ್ದ ಪಿಕೆಟ್ಟಿ ಮತ್ತು ಚಾನ್ಸೆಲ್ ತಂಡವು ಈ ಪ್ರವೃತ್ತಿಯು ವೇಗವಾಗಿ ಬೆಳೆಯುತ್ತಿದೆ ಎಂಬ ಅಂಶವನ್ನು ಒತ್ತಿಹೇಳಿದೆ. 2014–15ರ ನಂತರವೂ ಜನರ ಕೊಳ್ಳುವ ಶಕ್ತಿ ಕುಗ್ಗುತ್ತಿರುವ ಪ್ರವೃತ್ತಿಯು ಮುಂದುವರಿದಿದೆ ಎಂಬುದು ನಿಸ್ಸಂಶಯವೇ. ವಾಸ್ತವವಾಗಿ, ಪತ್ರಿಕೆಗಳಿಗೆ ಸೋರಿಕೆಯಾದ 2017–18ನೇ ಸಾಲಿನ ಎನ್‌ಎಸ್‌ಎಸ್(ರಾಷ್ಟ್ರೀಯ ಸ್ಯಾಂಪಲ್ ಸರ್ವೆ)ನ ಬಳಕೆಯ ವೆಚ್ಚದ ಪಂಚವಾರ್ಷಿಕ ದೊಡ್ಡ ಮಾದರಿ ಸಮೀಕ್ಷೆಯ ವರದಿಯ ಪ್ರಕಾರ (ಸಮೀಕ್ಷೆಯ ಫಲಿತಾಂಶಗಳನ್ನು ಸರ್ಕಾರವೇ ಬಚ್ಚಿಟ್ಟಿತ್ತು), 2011–12 ಮತ್ತು 2017–18ರ ನಡುವೆ ಗ್ರಾಮೀಣ ಭಾರತದಲ್ಲಿ ತಲಾ ನೈಜ ವೆಚ್ಚವು ಶೇ. 9 ರಷ್ಟು ಇಳಿಕೆಯಾಗಿತ್ತು ಎಂಬುದು ಕಂಡುಬಂದಿತ್ತು. ಗ್ರಾಮೀಣ ಮೇಲ್ವರ್ಗದ ಗ್ರಾಹಕರ (ಅಂದರೆ, ಭೂಮಾಲೀಕರ ಮತ್ತು ಗ್ರಾಮೀಣ ಬಂಡವಾಳಗಾರರ) ಆದಾಯಗಳು ಕುಗ್ಗಿರುವ ಸಾಧ್ಯತೆ ಇಲ್ಲವಾದ್ದರಿಂದ, ದುಡಿಯುವಜನರ ತಲಾ ನೈಜ ವೆಚ್ಚದ ಈ ಕುಸಿತವು ಶೇ. 9ಕ್ಕಿಂತಲೂ ಹೆಚ್ಚಿಗೆ ಇದ್ದಿರಲೇಬೇಕು. ಗ್ರಾಮೀಣ ಭಾರತದ ನೈಜ ವೆಚ್ಚದ ಈ ಪರಿಯ ಕುಸಿತವು ಕೈಗಾರಿಕಾ ಸರಕುಗಳ ಬೇಡಿಕೆಯ ಮೇಲೆ ಸ್ವಾಭಾವಿಕವಾಗಿ ಪರಿಣಾಮ ಬೀರಿಯೇ ತೀರುತ್ತದೆ.

ನವ-ಉದಾರವಾದದ ಒಂದು ಪ್ರಮುಖ ಲಕ್ಷಣವೆಂದರೆ, ನಗರ ಪ್ರದೇಶದ ದುಡಿಯುವ ಜನರ ಆದಾಯವು, ಅವರ ಗ್ರಾಮೀಣ ಸಹಚರರ ಆದಾಯದೊಂದಿಗೆ ತಳುಕು ಹಾಕಿಕೊಂಡಿರುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ನಗರ ಪ್ರದೇಶದ ಹಾಗೂ ಗ್ರಾಮೀಣದ ದುಡಿಯುವ ಜನರ ಆದಾಯಗಳು ಸಮಕಾಲಿಕವಾಗಿ ಚಲಿಸುತ್ತವೆ. ಏಕೆಂದರೆ, ಗ್ರಾಮೀಣ ಸಂಕಷ್ಟದ ಸಮಯದಲ್ಲಿ ಬಹಳ ಮಂದಿ ನಗರಗಳಿಗೆ ವಲಸೆ ಹೋಗುತ್ತಾರೆ. ಈ ವಲಸೆಯು ನಂತರದ ದಿನಗಳಲ್ಲಿ ಕಾರ್ಮಿಕರ ಮೀಸಲು ಪಡೆಯ ಗಾತ್ರವನ್ನು ಹೆಚ್ಚಿಸುತ್ತದೆ ಮತ್ತು ನಗರಗಳ ದುಡಿಯುವ ಜನರ ಆದಾಯವನ್ನು ಕುಗ್ಗಿಸುತ್ತದೆ. ಆದ್ದರಿಂದ ಗ್ರಾಮೀಣ ಕಾರ್ಮಿಕರ ಕೊಳ್ಳುವ ಶಕ್ತಿಯ ಕುಸಿತದೊಂದಿಗೆ ನಗರ ಕಾರ್ಮಿಕರ ಕೊಳ್ಳುವ ಶಕ್ತಿಯ ಕುಸಿತವೂ ಸೇರಿಕೊಂಡಿರಲೇಬೇಕು. ಹಾಗಾಗಿ, ಒಟ್ಟಾರೆಯಾಗಿ ದುಡಿಯುವ ಜನರಿಂದ ಹೊಮ್ಮುವ ಕೈಗಾರಿಕಾ ಸರಕುಗಳ ಮೇಲಿನ ಬೇಡಿಕೆಯು ಈ ಕಾರಣದಿಂದಾಗಿ ಕುಗ್ಗಿರಲೇಬೇಕು.

ಬೆಳೆಯುತ್ತಿರುವ ವರಮಾನಗಳ ಅಸಮತೆಗೆ ಈ ಹಿಂದೆ ಪ್ರಸ್ತಾಪಿಸಿದ ಸಣ್ಣ ಪ್ರಮಾಣದ ಮತ್ತು ಕಿರುಉತ್ಪಾದನಾ ವಲಯಗಳ ಕತ್ತು ಹಿಸುಕುತ್ತಿರುವುದೂ ತನ್ನ ಕೊಡುಗೆಯನ್ನು ಕೊಟ್ಟೇ ಇರುತ್ತದೆ. ಈ ಕಾರಣದಿಂದಲೂ ಬೇಡಿಕೆ ಕುಗ್ಗುತ್ತದೆ. ನವ-ಉದಾರವಾದಿ ಆಡಳಿತದ ಸಾಮಾನ್ಯ ಕಾರ್ಯಾಚರಣೆಯಿಂದಾಗಿ ಮತ್ತು ಅದರ ಮೇಲೆ ಹೇರಲ್ಪಟ್ಟ ಪ್ರಸ್ತುತ ಸರ್ಕಾರದ ನಿರ್ದಿಷ್ಟ ಅವಿವೇಕತನಗಳ ಪರಿಣಾಮವಾಗಿ ಕೈಗಾರಿಕೆಗಳು ಜಡತೆಯ ಪರಿಸ್ಥಿತಿಯಲ್ಲಿವೆ. ಕತ್ತು ಹಿಸುಕಲ್ಪಟ್ಟ ವಲಯಗಳ ಉತ್ಪನ್ನಗಳಿಗೆ ಬದಲಾಗಿ ದೊಡ್ಡಪ್ರಮಾಣದ ಉತ್ಪಾದನಾ ವಲಯದ ಉತ್ಪನ್ನಗಳನ್ನು ಖರೀದಿಸುವಂತೆ ನವ-ಉದಾರವಾದವು ಒತ್ತಡ ಹಾಕುತ್ತದೆ. ಆದರೆ, ಈ ಬದಲಿಕೆಯ ಪ್ರಕ್ರಿಯೆಯೇ ಬೇಡಿಕೆಯನ್ನು ನಿರ್ಬಂದಿಸಲು ಕಾರಣವಾಗುತ್ತದೆ. ಏಕೆಂದರೆ, ಬದಲಿಸಿದ ವಲಯಗಳ ಪ್ರತಿಯೂನಿಟ್ ಉತ್ಪತ್ತಿಯು (ಅದರಿಂದಾಗಿ ಆದಾಯದ ಪ್ರತಿಯೂನಿಟ್) ಹೊಮ್ಮಿಸುವ ಬಳಕೆಯು, ಬದಲಿ ವಲಯದ ಉತ್ಪತ್ತಿಗಳಿಗೆ ಹೋಲಿಸಿದರೆ, ಹೆಚ್ಚಿಗೆ ಇರುತ್ತದೆ.


ಬೇರುಗಳು ನವ-ಉದಾರವಾದಿ ಆಡಳಿತದ ಸ್ವರೂಪದಲ್ಲೇ

ಅದೇನೊ ಸರಿಯೇ, ಆದರೆ, ಆದಾಯಗಳ ಅಸಮ-ಹಂಚಿಕೆಯ ಫಲಾನುಭವಿಗಳಾದ ಮಿಗುತಾಯ ಗಳಿಸುವ ಮಂದಿಯಿಂದ ಬರುವ ಕೈಗಾರಿಕಾ ಸರಕುಗಳ ಮೇಲಿನ ಬೇಡಿಕೆಯ ಬಗ್ಗೆ ಏನು ಹೇಳುತ್ತೀರಿ ಎಂದು ಕೇಳಲಾಗುತ್ತದೆ. ನವ-ಉದಾರವಾದದ ಆರಂಭಿಕ ವರ್ಷಗಳಲ್ಲಿ ಕೈಗಾರಿಕಾ ಉತ್ಪಾದನೆಯನ್ನು ಉತ್ತೇಜಿಸುವಲ್ಲಿ, ಅಲ್ಲಿಯವರೆಗೂ ದೇಶೀಯವಾಗಿ ಲಭ್ಯವಿಲ್ಲದ ಒಂದು ಇಡೀ ಶ್ರೇಣಿಯ ಕೈಗಾರಿಕಾ ಸರಕುಗಳಿಗಾಗಿ ಮಿಗುತಾಯ ಗಳಿಕೆಯ ಮಂದಿಯ ಅದುಮಿಟ್ಟ ಬೇಡಿಕೆಯು ಒಂದು ದೊಡ್ಡ ಅಂಶವಾಗಿತ್ತು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ, ಸುಲಭವಾಗಿ ಉತ್ಪಾದಿಸಬಹುದಾದ ಸರಕುಗಳನ್ನು ದೇಶೀಯವಾಗಿ ಉತ್ಪಾದಿಸಲು ಆರಂಭಿಸಿದ ನಂತರ, ಅಗ್ಗದ ಆಮದುಗಳ ಸುಲಭ ಲಭ್ಯತೆಯ ಅಂಶವೇ ಆಮದು ಬದಲಿಕೆಯ ಉತ್ಪನ್ನಗಳಿಗೆ ಒಂದು ಅಡ್ಡಿಯ ಅಂಶವಾಗಿ ಪರಿಣಮಿಸುತ್ತದೆ. ಆ ಘಟ್ಟದ ನಂತರ ಮಿಗುತಾಯದ ಹೆಚ್ಚಳದಿಂದಾಗಿ ಸೃಷ್ಟಿಯಾದ ಬೇಡಿಕೆಯು ಆಮದುಗಳಿಗೆ ಸೋರಿಕೆಯಾಗುತ್ತದೆ. ಈ ವಿದ್ಯಮಾನವು ಇದೇರೀತಿಯಲ್ಲೇ ಘಟಿಸುತ್ತಿದೆ ಎಂದು ತೋರುತ್ತದೆ: ಕೈಗಾರಿಕಾ ಉತ್ಪಾದನೆಯನ್ನು ವಲಯಗಳಾಗಿ ವಿಭಜಿಸಿದಾಗ, ಕಡಿಮೆ ಬೆಳವಣಿಗೆಯನ್ನು ತೋರಿಸುವ ಎರಡು ವಲಯಗಳೆಂದರೆ ಬಂಡವಾಳ ಸರಕುಗಳು ಮತ್ತು ಗೃಹ ಬಾಳಿಕೆಯ ವಸ್ತುಗಳು.

ಪುಟ 15 ಕ್ಕೆ

2022: ಅ–ಡಾಲರೀಕರಣದತ್ತ ಬಿರುಸು ನಡೆ ಆರಂಭ?

ಜಾಗತಿಕ ಆಮದು–ರಫ್ತು ಪಾವತಿಗಳು, ಸಾಲ–ಹೂಡಿಕೆ, ಇತರ ಹಣಕಾಸು ವ್ಯವಹಾರ, ದೇಶಗಳ ಕೇಂದ್ರೀಯ ಬ್ಯಾಂಕುಗಳ ಮತ್ತು ಸೂಪರ್ ಶ್ರೀಮಂತರ ಭದ್ರ ನಿಧಿಯಾಗಿ ಡಾಲರ್ ಬದಲು ಇತರ ಕರೆನ್ಸಿಗಳು ಅಥವಾ ವಿಧಾನಗಳು ಜಾರಿಗೆ ಬರುತ್ತಾ ಡಾಲರ್ ತನ್ನ ಪ್ರಾಧಾನ್ಯವನ್ನು ಕಳೆದುಕೊಳ್ಳುತ್ತಾ ಹೋಗುವುದಕ್ಕೆ 'ಅ–ಡಾಲರೀಕರಣ' (ಡಿ–ಡಾಲರೈಸೇಶನ್) ಎಂದು ಹೆಸರಿಸಲಾಗಿದೆ. 2007–8ರಲ್ಲಿ ಯು.ಎಸ್. ಬಿಗಿಮುಷ್ಟಿಯಲ್ಲಿರುವ ಅಂತರ್ರಾಷ್ಟ್ರೀಯ ಹಣಕಾಸು ವ್ಯವಸ್ಥೆಯ ತೀವ್ರ ಹುಳುಕುಗಳ ಅನಾವರಣ, ತನ್ನ ಮೂಗಿನ ನೇರಕ್ಕೆ ಇರದ ದೇಶಗಳ ಮೇಲೆ ಡಾಲರ್ ಮತ್ತು ಹಣಕಾಸು ವ್ಯವಸ್ಥೆಯ ಶಸ್ತ್ರದಂತೆ ಆತಂಕಕಾರಿ ದುರ್ಬಳಕೆ, ಉಕ್ರೇನ್ ಸಂಘರ್ಷದ ಪರಿಣಾಮವಾಗಿ ಬಂದ ತೈಲ ಬಿಕ್ಕಟ್ಟು, ಹಣಕಾಸು ತಂತ್ರಜ್ಞಾನ ಡಿಜಿಟಲ್ ಕರೆನ್ಸಿ ವಿಧಾನಗಳ ಬೆಳವಣಿಗೆ–ಇವುಗಳಿಂದಾಗಿ ಅ–ಡಾಲರೀಕರಣ 2022ರಲ್ಲಿ ತನ್ನ ಬಿರುಸು ನಡೆ ಆರಂಭಿಸಿದೆ.



ಈ ವರ್ಷದ ಪ್ರಮುಖ ಜಾಗತಿಕ ಬೆಳವಣಿಗೆ ಉಕ್ರೇನ್ ಸಂಘರ್ಷ ಎಂಬುದು ನಿರ್ವಿವಾದಿತ. ಉಕ್ರೇನ್ ಸಂಘರ್ಷ ಜಗತ್ತಿನ ಬಹುಸಂಖ್ಯಾರತ ಜನರಿಗೆ ಮತ್ತು ಹೆಚ್ಚಿನ ದೇಶಗಳಿಗೆ ಸಂಕಷ್ಟಗಳನ್ನು ತಂದಿದೆ. ಆದರೆ ಯು.ಎಸ್ ನ್ನು ಅದು ರಾಜಕೀಯವಾಗಿ ಮಿಲಿಟರಿಯಾಗಿ ಇನ್ನಷ್ಟು ಬಲಿಷ್ಠಗೊಳಿಸಿತು ಎನ್ನಲಾಗುತ್ತದೆ. ಇದು ಬಹುಮಟ್ಟಿಗೆ ನಿಜ ಕೂಡಾ. ಆದರೆ ಇದರ ನೇರ ಫಲವೋ ಎಂಬಂತೆ ಜಾಗತಿಕ ಹಣಕಾಸು ವ್ಯವಹಾರ, ಹೂಡಿಕೆ, ದೇಶಗಳ ಪ್ರಧಾನ ಬ್ಯಾಂಕುಗಳ ಸೂಪರ್ ಶ್ರೀಮಂತರ ಭದ್ರ ನಿಧಿಯಾಗಿದ್ದ ಡಾಲರ್ ನ ಏಕಚಕ್ರಾಧಿಪತ್ಯಕ್ಕೆ ತೀವ್ರ ಸವಾಲು ಬಂದಿದೆ. ಡಾಲರ್ ನ ಆರ್ಥಿಕ ಏಕಚಕ್ರಾಧಿಪತ್ಯವೇ ಯು.ಎಸ್ ನ ರಾಜಕೀಯ ಮಿಲಿಟರಿ ಏಕಚಕ್ರಾಧಿಪತ್ಯದ ಆಧಾರಶಿಲೆ. ಹಾಗಾಗಿ ಅದಕ್ಕೂ ಕುತ್ತು ಬರಬಹುದು. ಡಾಲರ್ ನ ಪ್ರಾಧಾನ್ಯ ಕಳೆದುಕೊಳ್ಳುತ್ತಿರುವ ಈ ಪ್ರಕ್ರಿಯೆಯನ್ನು ಅ–ಡಾಲರೀಕರಣ ಎಂದು ಕರೆಯಲಾಗಿದೆ. ಅ–ಡಾಲರೀಕರಣ (ಡಿ–ಡಾಲರೈಸೇಶನ್) ಬಹಳ ಸಮಯದಿಂದ ನಡೆಯುತ್ತಿರುವ ಪ್ರಕ್ರಿಯೆಯಾದರೂ ಈ ವರ್ಷ (2022ರಲ್ಲಿ) ತನ್ನ ಬಿರುಸು ನಡೆ ಆರಂಭಿಸಿದೆ ಎನ್ನಲಾಗಿದೆ. ಜಾಗತಿಕ ಆಮದು–ರಫ್ತು ಪಾವತಿಗಳು, ಸಾಲ–ಹೂಡಿಕೆ, ಇತರ ಹಣಕಾಸು ವ್ಯವಹಾರ, ದೇಶಗಳ ಕೇಂದ್ರೀಯ ಬ್ಯಾಂಕುಗಳ ಮತ್ತು ಸೂಪರ್ ಶ್ರೀಮಂತರ ಭದ್ರ ನಿಧಿಯಾಗಿ ಡಾಲರ್ ಬದಲು ಇತರ ಕರೆನ್ಸಿಗಳು ಅಥವಾ ವಿಧಾನಗಳು ಜಾರಿಗೆ ಬರುತ್ತಾ ಡಾಲರ್ ತನ್ನ ಪ್ರಾಧಾನ್ಯವನ್ನು ಕಳೆದುಕೊಳ್ಳುತ್ತಾ ಹೋಗುವುದಕ್ಕೆ ಅ–ಡಾಲರೀಕರಣ ಎಂದು ಹೆಸರಿಸಲಾಗಿದೆ.

ಜಿ.ಸಿ.ಸಿ.–ಚೀನಾ ಶೃಂಗಸಭೆ

ವರ್ಷದ ಕೊನೆಯಲ್ಲಿ (ಡಿಸೆಂಬರ್ 9 ರಂದು) ಸೌದಿ ಅರೇಬಿಯದ ರಾಜಧಾನಿ ರಿಯಾದ್ ಗೆ ಚೀನಾ ಅಧ್ಯಕ್ಷ ಶಿ ಜಿಂಪಿಂಗ್ ಅವರ ಭೇಟಿ ಮತ್ತು 6 ಕೊಲ್ಲಿ ರಾಷ್ಟ್ರಗಳ '(ಸೌದಿ ಅರೇಬಿಯ, ಯು.ಎ.ಇ, ಬಹ್ರೈನ್, ಕುವೈಟ್, ಒಮ್ಮನ್, ಕತಾರ್) "ಕೊಲ್ಲಿ ಸಹಕಾರ ಮಂಡಳಿ" (ಜಿ.ಸಿ.ಸಿ)ಯೊಂದಿಗೆ ಮೊದಲ ಶೃಂಗಸಭೆ ನಡೆಯಿತು.



ವಸಂತರಾಜ ಎನ್.ಕೆ.

ಜಿ.ಸಿ.ಸಿ ಜತೆ ಒಪ್ಪಂದ ಮತ್ತು ಸೌದಿ ಅರೇಬಿಯ ಜತೆ ಜಂಟಿ ಹೇಳಿಕೆಯಲ್ಲಿ ಅ–ಡಾಲರೀಕರಣ ಕುರಿತು ನೇರವಾಗಿ ಏನೂ ಹೇಳಲಿಲ್ಲ. ಆದರೆ ಈ ಪ್ರಕ್ರಿಯೆಯಲ್ಲಿ ಇವು ಮಹತ್ವದ ಪಾತ್ರ ವಹಿಸಲಿವೆ ಎನ್ನಲಾಗಿದೆ. ಇವುಗಳಲ್ಲಿ ನಿರ್ದಿಷ್ಟವಾಗಿ ಆದದ್ದು ಏನು? ಚೀನಾ ಜಿ.ಸಿ.ಸಿ ದೇಶಗಳಿಂದ ತೈಲವನ್ನು ದೀರ್ಘ ಕಾಲ ಆಮದು ಮಾಡುವ ಮತ್ತು ಪ್ರಾಕೃತಿಕ ಅನಿಲ ಆಮದನ್ನು ಹೆಚ್ಚಿಸುವ ಭರವಸೆ ನೀಡಿತು. ಈ ವ್ಯವಹಾರ ಚೀನಾದ ಕರೆನ್ಸಿಯಲ್ಲಿ ನಡೆಯಲಿದೆ.. ಚೀನಾ 2017ರ ನಂತರ ಜಗತ್ತಿನ ಅತಿ ದೊಡ್ಡ ತೈಲ ಆಮದು ಮಾಡುವ ದೇಶವಾಗಿದ್ದು ಅದರ ಅರ್ಧದಷ್ಟು ಆಮದು ಅರೇಬಿಯನ್ ಪ್ರದೇಶದಿಂದ ಬರುತ್ತದೆ, ಕಾಲುಭಾಗಕ್ಕೂ ಹೆಚ್ಚು ಸೌದಿ ಅರೇಬಿಯ ಒಂದರಿಂದಲೇ ಬರುತ್ತದೆ. ಈ ತೈಲ ವ್ಯವಹಾರದ ಮತ್ತು ಮುಂದೆ ಜಿ.ಸಿ.ಸಿ–ಚೀನಾ ನಡುವಣ ಹೆಚ್ಚಿನ ವ್ಯವಹಾರದ ಅ–ಡಾಲರೀಕರಣ ಮಹತ್ವದ ಬೆಳವಣಿಗೆ.

ಶಕ್ತಿ–ಇಂಧನಗಳಲ್ಲದೆ, ಹೂಡಿಕೆ ಮತ್ತು ಸಾಲ, ಹೊಸ ತಂತ್ರಜ್ಞಾನಗಳು ಮತ್ತು ನಾವೀನ್ಯತೆ, 5ಜಿ ಟೆಲಿಕಾಂ, ವಿಮಾನ–ವ್ಯೋಮ ಮುಂತಾದ ಕ್ಷೇತ್ರಗಳಲ್ಲಿ ಸಹಕಾರ ಮತ್ತು ವ್ಯೂಹಾತ್ಮಕ ಸಂಬಂಧ ಬೆಳೆಸುವ ಕುರಿತು 5 ವರ್ಷಗಳ ಕಾರ್ಯಯೋಜನೆಗೆ ಒಪ್ಪಲಾಯಿತು. ಜಂಟಿಯಾಗಿ ಬಿಗ್ ಡಾಟಾ ಮತ್ತು ಕ್ಲೌಡ್ ಕಂಪ್ಯೂಟಿಂಗ್ ಸೆಂಟರ್ ಗಳನ್ನು ನಡೆಸುವ



ಮತ್ತು ಡಿಜಿಟಲ್ ಕರೆನ್ಸಿ ಅಭಿವೃದ್ಧಿಯಲ್ಲಿ ಸಹಕರಿಸುವ ಕುರಿತು ಸಹ ಒಪ್ಪಂದವಾಯಿತು. ಚೀನಾ ಸೌದಿ ಅರೇಬಿಯದಲ್ಲಿ 30 ಶತಕೋಟಿ ಡಾಲರ್ ಮೌಲ್ಯದ ವ್ಯವಹಾರಗಳಿಗೆ ಸಹಿ ಮಾಡಿದೆ. 2021ರಲ್ಲೇ ಚೀನಾ ಬಿ.ಆರ್.ಐ (ಬೆಲ್ಟ್ ಅಂಡ್ ರೋಡ್ ಇನಿಶಿಯೆಟಿವ್) ಭಾಗವಾಗಿ 43.47 ಶತಕೋಟಿ ಡಾಲರು ಹೂಡಿಕೆ ಮಾಡಿದೆ. ಚೀನಾದ ಪೆಟ್ರೋಲಿಯಂ ಕಂಪನಿಗಳಲ್ಲಿ ಸೌದಿ ಅರೇಬಿಯದ ಅರ್ಮಾಕೊ ತೈಲ ಕಂಪನಿ 10 ಶತಕೋಟಿ ಡಾಲರು ಹೂಡಿಕೆ ಮಾಡಿದೆ. ಈಗಾಗಲೇ ಸೆಪ್ಟೆಂಬರ್ ನಲ್ಲಿ ಜಿ.ಸಿ.ಸಿ ಮತ್ತು ಚೀನಾ ವಿದೇಶ ಮಂತ್ರಿಗಳು ಮುಕ್ತ ವ್ಯಾಪಾರ ಒಪ್ಪಂದದ ಕುರಿತು ಮಾತುಕತೆ ಆರಂಭಿಸಿದ್ದು ಅದು ಪ್ರಗತಿಯಲ್ಲಿದೆ.

ತೈಲ ವಹಿವಾಟಿನ ಅ–ಡಾಲರೀಕರಣ

ಜಿ.ಸಿ.ಸಿ ಮತ್ತು ಸೌದಿ ಅರೇಬಿಯದ ಜತೆಗೆ ಚೀನಾದ ಈ ವ್ಯೂಹಾತ್ಮಕ ಒಪ್ಪಂದ ಸಹ ಉಕ್ರೇನ್ ಯುದ್ಧದ ಪರೋಕ್ಷ ಪರಿಣಾಮವೇ ಎನ್ನಬಹುದು. ಉಕ್ರೇನ್ ಯುದ್ಧದಲ್ಲಿ ರಶ್ಯಾದ ಪಾತ್ರಕ್ಕೆ 'ಶಿಕ್ಷೆ'ಯಾಗಿ ಯು.ಎಸ್–ಯು,ಕೆ ಒತ್ತಡದಿಂದ ಯುರೋ ಕೂಟ ಸೇರಿದಂತೆ ರಶ್ಯಾದ ಮೇಲೆ ಆರ್ಥಿಕ ದಿಗ್ಬಂಧನ ಹೇರಲಾಯಿತು. ರಶ್ಯಾದ ತೈಲ–ಗ್ಯಾಸ್ ರಫ್ತು ಮೇಲೆ ಮತ್ತು ಇತರ ಹಲವು ಸರಕು–ಸೇವೆಗಳ ವ್ಯವಹಾರಗಳ ಮೇಲೆ ನಿರ್ಬಂಧವಲ್ಲದೆ, ಹಲವು ದೀರ್ಘಕಾಲೀನ ಹಣಕಾಸು ಸಂಬಂಧಿತ ಗಂಭೀರ ಕ್ರಮಗಳನ್ನು ಕೈಗೊಳ್ಳಲಾಯಿತು. ರಶ್ಯದ ಕೇಂದ್ರೀಯ ಬ್ಯಾಂಕ್ ಜತೆ ಎಲ್ಲ ವ್ಯವಹಾರಗಳನ್ನು ಪಾಶ್ಚಿಮಾತ್ಯ ಬ್ಯಾಂಕುಗಳು ನಿಲ್ಲಿಸಿದವು. ಆ ಬ್ಯಾಂಕುಗಳಲ್ಲಿ ವಿದೇಶಿ ವ್ಯಾಪಾರ ನಡೆಸಲು ರಶ್ಯದ ಕೇಂದ್ರೀಯ ಬ್ಯಾಂಕು ಡಾಲರ್/ಯುರೋಗಳಲ್ಲಿ ಇಟ್ಟಿದ್ದ ಮೀಸಲು ನಿಧಿಯನ್ನು ಸ್ಥಗಿತಗೊಳಿಸಲಾಯಿತು. ಅಂತರ್ರಾಷ್ಟ್ರೀಯ ಹಣಕಾಸು ವಿನಿಮಯದ ಅಂತರ–ಬ್ಯಾಂಕ್ ವ್ಯವಸ್ಥೆ 'ಸ್ವಿಫ್ಟ್' ನಿಂದ ರಶ್ಯವನ್ನು ಕಡಿದು ಹಾಕಲಾಯಿತು. ಅಂತರ್ರಾಷ್ಟ್ರೀಯ ಕ್ರೆಡಿಟ್/ಡೆಬಿಟ್ ಕಾರ್ಡ್ ವ್ಯಹಾರ ನಡೆಸುವ ಮಾಸ್ಟರ್/ವೀಸಾ ಕಾರ್ಡ್ ಕಂಪನಿಗಳು ರಶ್ಯಾದ ವಹಿವಾಟು ನಿಲ್ಲಿಸಿದವು. ಇದರ ಮೊದಲೇ ಚೀನಾದ ಜತೆ ಟ್ರಂಪ್ ಕಾಲದಲ್ಲೇ ಆರಂಭವಾಗಿದ್ದ (2018ರಿಂದ) ಆರ್ಥಿಕ ಯುದ್ಧದ ಭಾಗವಾಗಿ ಹೊರಿಸಲಾಗಿದ್ದ ಹಣಕಾಸು ನಿರ್ಬಂಧಗಳೂ ಇದ್ದವು. ಅದೇ ರೀತಿಯಲ್ಲಿ 2014ರ ಕ್ರಿಮಿಯ ಯುದ್ಧದ ಸಮಯದಲ್ಲೇ ರಶ್ಯಾದ ಮೇಲೆ ಹಲವು ನಿರ್ಬಂಧಗಳನ್ನು ಹಾಕಿತ್ತು.

ಈ ಕಾರಣಗಳಿಂದಾಗಿ ರಶ್ಯಾ, ಚೀನಾಗಳು ಅ–ಡಾಲರೀಕರಣದ ಪ್ರಕ್ರಿಯೆಯನ್ನು ಬಿರುಸಿನಿಂದ ಆರಂಭಿಸಿದವು. ಮೊದಲನೆಯದಾಗಿ ಅವು ತಮ್ಮ ನಡುವಿನ ವಹಿವಾಟುಗಳಲ್ಲಿ ಅ–ಡಾಲರೀಕರಣಕ್ಕೆ ಮುಂದಾದವು.. ಚೀನಾ–ರಶ್ಯಾ ನಡುವಣ ವಹಿವಾಟು 2015ರಲ್ಲಿ ಶೇ.90 ಡಾಲರಿನಲ್ಲಿ ನಡೆಯುತ್ತಿತ್ತು. 2020ರ ಹೊತ್ತಿಗೆ ಅದು ಶೇ.50ಕ್ಕಿಂತ ಕೆಳಗೆ ಬಂತು. ತೈಲ ರಫ್ತು–ಆಮದು ವ್ಯವಹಾರದ ಅ–ಡಾಲರೀಕರಣದ ಮೇಲೆ ತಕ್ಷಣದ ಒತ್ತು ಕೊಡಲಾಯಿತು. ರಶ್ಯ ತೈಲ ರಫ್ತಿಗೆ ಪ್ರತಿ ದೇಶದೊಂದಿಗೆ ಅದರ ಕರೆನ್ಸಿಯಲ್ಲಿ ವಹಿವಾಟು ಆರಂಭಿಸಿತು. ಇದಕ್ಕೆ ಒಪ್ಪುವ ದೇಶಗಳಿಗೆ ಬೆಲೆಯಲ್ಲಿ ರಿಯಾಯಿತಿ ಕೊಟ್ಟಿತು. ಭಾರತ ಸಹ ಕೂಡಲೇ ಈ ವ್ಯವಸ್ಥೆಗೆ ಒಡ್ಡಿಕೊಂಡಿತು. ಹಾಗಾಗಿ ರಶ್ಯಾದಿಂದ ಭಾರತದ ತೈಲ ಆಮದಿನ ಪ್ರಮಾಣ ಮಾರ್ಚ್ 2022ರಲ್ಲಿ ಕೇವಲ ಶೇ. 0.2 ಇದ್ದಿದ್ದು ಡಿಸೆಂಬರ್ ಹೊತ್ತಿಗೆ ಶೇ.20ಕ್ಕೂ ಮೇಲೆ ಹೋಗಿದೆ. 'ವ್ಯೂಹಾತ್ಮಕ ಪಾಲುದಾರ' ಯು.ಎಸ್ ನ ಒತ್ತಡಕ್ಕೆ ಸೊಪ್ಪು ಹಾಕದೆ ಈ ವ್ಯವಸ್ಥೆಯನ್ನು ರಶ್ಯದ ಜತೆ ಇತರ (ಉಧಾ: ರಕ್ಷಣಾ ಸಾಮಗ್ರಿಗಳು) ವಹಿವಾಟಿಗೂ ವಿಸ್ತರಿಸಿತು. ಜುಲೈ ನಲ್ಲಿ ಭಾರತದ ರಿಸರ್ವ್ ಬ್ಯಾಂಕ್ ದ್ವಿ–ಪಕ್ಷೀಯ ವಹಿವಾಟನ್ನು ರೂಪಾಯಿಯಲ್ಲೇ ನಡೆಸಲು ಸಾಮಾನ್ಯ ವ್ಯವಸ್ಥೆಯನ್ನು ಸಂಘಟಿಸಿತು. ಇದನ್ನು ಯು.ಎ.ಇ ಜತೆ ಜಾರಿ ಮಾಡಲಾಗಿದೆ.

ವಿಸ್ತರಿತ ಬ್ರಿಕ್ಸ್ ಸವಾಲು

ಪ್ರಮುಖವಾಗಿ ಎರಡು ಕಾರಣಗಳಿಂದ ಈಗಾಗಲೇ ಸಾಮಾನ್ಯ ಜಾಗತಿಕ ಕರೆನ್ಸಿ ಯಾಗಿದ್ದ ಡಾಲರ್ ಗೆ ಮತ್ತು ಡಾಲರ್ ಮೇಲೆ ಆಧಾರಿತ ಯು.ಎಸ್–ಯುರೋಕೂಟದ ಬಿಗಿಮುಷ್ಟಿಯಲ್ಲಿದ್ದ ಜಾಗತಿಕ ಹಣಕಾಸು ವ್ಯವಸ್ಥೆಗೆ ಪರ್ಯಾಯದ ಹುಡುಕಾಟ ಆರಂಭವಾಗಿತ್ತು. 2007–08 ಜಾಗತಿಕ ಮಹಾ ಬಿಕ್ಕಟ್ಟು ಈ ವ್ಯವಸ್ಥೆಯ ಬಿಕ್ಕಟ್ಟುಗಳನ್ನು ಹೊರಗೆಡವಿತ್ತು. ತಮ್ಮ ಆರ್ಥಿಕಗಳನ್ನು ಈ ವ್ಯವಸ್ಥೆಯ ನೇರ ಪ್ರಭಾವಕ್ಕೆ ಸಿಲುಕದಂತೆ ಮಾಡಬೇಕೆಂದು ಹೆಚ್ಚಿನ ದೇಶಗಳು (ಯು.ಎಸ್ ಪ್ರಭಾವಲಯದಲ್ಲಿದ್ದ ಹಾಗೂ ವ್ಯೂಹಾತ್ಮಕ ಪಾಲುದಾರ ಎನ್ನಿಸಿಕೊಳ್ಳುವ ಭಾರತ ಮತ್ತಿತರ ದೇಶಗಳೂ ಸೇರಿದಂತೆ) ನಿರ್ಧರಿಸಿದ್ದು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಆರಂಭಿಸಿದ್ದವು.

ಬ್ರೆಜಿಲ್, ರಶ್ಯಾ, ಇಂಡಿಯಾ, ಚೀನಾ, ದಕ್ಷಿಣ ಆಫ್ರಿಕಾ ದೇಶಗಳ ಕೂಟ (ಬ್ರಿಕ್ಸ್) ತಮ್ಮೊಳಗೆ ವ್ಯವಹಾರಕ್ಕೆ ವಿನ್ಯಾಸಗೊಳಿಸಿ ಸಂಘಟಿಸಿದ ಬ್ರಿಕ್ಸ್ ಪೇಮೆಂಟ್ ಸಿಸ್ಟಮ್ ಇವುಗಳಲ್ಲಿ ಮುಖ್ಯವಾದವು. ಇದಲ್ಲದೆ ಒಟ್ಟಾರೆಯಾಗಿ ಹೊಸ ಬಹು–ಧ್ರುವೀಯ ಅಂತರ್ರಾಷ್ಟ್ರೀಯ ಹಣಕಾಸು ವ್ಯವಸ್ಥೆಯನ್ನು ಸೃಷ್ಟಿಸುವ ಪಾತ್ರವನ್ನು ಬ್ರಿಕ್ಸ್ ವಹಿಸುತ್ತಿದೆ. ನ್ಯೂ ಡೆವೆಲೆಪ್ ಮೆಂಟ್ ಬ್ಯಾಂಕ್ ಎಂಭ ಹೊಸ ಬ್ಯಾಂಕನ್ನೂ ಸ್ಥಾಪಿಸಿದ್ದವು. ಹಾಗಾಗಿ ಇದರಲ್ಲಿ ಭಾಗವಹಿಸಲು ಆಗಿನಿಂದಲೇ ಹಲವು ದೇಶಗಳು ಉತ್ಸುಕತೆ ತೋರಿಸಿದ್ದವು. ಮೇ ಯಲ್ಲಿ ನಡೆದ ಬ್ರಿಕ್ಸ್ ವಿಸ್ತರಣಾ ಸಭೆಯಲ್ಲಿ 12 ದೇಶಗಳು ಆಸಕ್ತಿ ತೋರಿಸಿವೆ. ಅಲ್ಜೀರಿಯಾ, ಅರ್ಜೆಂಟಿನಾ, ಇರಾನ್, ಸೌದಿ ಅರೇಬಿಯ, ಟರ್ಕಿ, ಈಜಿಪ್ಟ್, ಅಫ್ಘಾಭನಿಸ್ತಾನ್ ಗಳು ಆಗಲೇ ಅರ್ಜಿ ಹಾಕಿವೆ. ಈ ಎಲ್ಲ ದೇಶಗಳು ಬ್ರಿಕ್ಸ್ ಸೇರಿದರೆ ಜಗತ್ತಿನ ಅರ್ಧ ಕ್ಕೂ ಹೆಚ್ಚು ಜಾಗತಿಕ ಜನಸಂಖ್ಯೆಯಿರುವ, ಯು.ಎಸ್ ಗಿಂತ ಶೇ.30 ಹೆಚ್ಚು ಜಿಡಿಪಿ ಇರುವ, ಶೇ.60 ಜಾಗತಿಕ ತೈಲ–ಗ್ಯಾಸ್ ಸಂಪನ್ಮೂಲ ಹೊಂದಿರುವ ಜಾಗತಿಕ ಕೂಟವಾಗಿರುತ್ತದೆ. ಈಗ ದುರ್ಬಲವಾಗಿರುವ ರಶ್ಯಾವೇ ತೈಲದ ಅ–ಡಾಲರೀಕರಣದಿಂದ ಡಾಲರನ್ನು ನಡುಗಿಸಿದೆ. ಹಾಗಾಗಿ ವಿಸ್ತರಿತ ಬ್ರಿಕ್ಸ್ ರೂಪಿಸುವ ಮೀಸಲು ಕರೆನ್ಸಿ ತೀವ್ರವಾದ ಅ–ಡಾಲರೀಕರಣಕ್ಕೆ ಹಾದಿ ಮಾಡಿಕೊಡುತ್ತದೆ. ಚೀನಾ, ರಶ್ಯಾ ಆರಂಭಿಸಿದ ಶಾಂಘಾಯ್ ಸಹಕಾರ ಸಂಘಟನೆ (ಎಸ್.ಸಿ.ಒ) ಸಹ ಇದೇ ರೀತಿಯ ಆಸಕ್ತಿ ಸೃಷ್ಟಿಸಿದ್ದು ಅದರ ವಿಸ್ತರಣೆ ಸಹ ಅ–ಡಾಲರೀಕರಣಕ್ಕೆ ಕುಮ್ಮಕ್ಕು ಕೊಡಲಿದೆ.

ಸ್ವಿಫ್ಟ್ (SWIFT) ಗೆ ಬದಲಿ ವ್ಯವಸ್ಥೆ

ಬದಲಿ ವ್ಯವಸ್ಥೆಗೆ ತೀವ್ರ ಹುಡುಕಾಟಕ್ಕೆ ಎರಡನೆಯ ಕಾರಣ ಯು.ಎಸ್ ಕಳೆದ ಕೆಲವು ದಶಕಗಳಿಂದ ತನ್ನ ಬಿಗಿಮುಷ್ಟಿಯಲ್ಲಿರುವ ಹಣಕಾಸು ವ್ಯವಸ್ಥೇಯನ್ನು ದುರ್ಬಳಕೆ ಮಾಡಿ ತನ್ನ ಮೂಗಿನ ನೇರಕ್ಕೆ ಇಲ್ಲದ ದೇಶಗಳ ಮೇಲೆ ಆರ್ಥಿಕ ದಿಗ್ಬಂಧನ ಹೇರುತ್ತಾ ಬಂದಿದ್ದು. ಕ್ಯೂಬಾ, ಇರಾನ್, ಇರಾಕ್, ಲಿಬ್ಯಾ, ವೆನೆಜುವೇಲಾ, ಅಫ್ಘಾನಿಸ್ತಾನ–ಪಟ್ಟಿ ದೊಡ್ಡದಿದೆ. ಅಂತರ್ರಾಷ್ಟ್ರೀಯ ಕಾನೂನು ಬಾಹಿರವಾದ ಈ ದಿಗ್ಬಂಧನಕ್ಕೆ ತುತ್ತಾದ ಸುಮಾರು 30 ದೇಶಗಳು ಬದಲಿ ವ್ಯವಸ್ಥೆಗೆ ಪ್ರಯತ್ನ ಮಾಡುತ್ತಲೇ ಇದ್ದವು. ಮೊಬೈಲ್ ಆಪ್ ಆಧಾರಿತ ಪಾವತಿ ವ್ಯವಸ್ಥೆಯ ತಂತ್ರಜ್ಞಾನದೊಂದಿಗೆ ಇಂತಹ ವ್ಯವಸ್ಥೇ ಅಗ್ಗ ಮತ್ತು ಸುಲಭಸಾಧ್ಯವಾಗಿದೆ. ಕೆಲವು ದೇಶಗಳು ಡಿಜಿಟಲ್ ಕರೆನ್ಸಿ ಜಾರಿ ಮಾಡುವ ಪ್ರಯತ್ನ ಸಹ ಈ ನಿಟ್ಟಿನಲ್ಲಿ ಸಹಾಯಕವಾಗಿವೆ. ಡಾಲರ್ ಮತ್ತು ಹಣಕಾಸು ವ್ಯವಸ್ಥೆಯನ್ನು ಯು.ಎಸ್. ಅಸ್ತ್ರವಾಗಿ ಬಳಸುವುದರ ಕುರಿತು ಎಲ್ಲ ದೇಶಗಳಲ್ಲಿ ಆತಂಕ ಮೂಡಿತ್ತು. ರಶ್ಯಾ, ಚೀನದಂತಹ ಪ್ರಬಲ ದೇಶಗಳ ಮೇಲೆ ಅವುಗಳ ಬಳಕೆ, ಅದರಲ್ಲಿ ಭಾಗವಹಿಸಲು ಮೂರನೆಯ ದೇಶಗಳ ಮೇಲೆ ಒತ್ತಡ ಇನ್ನಷ್ಟು ಆತಂಕಕ್ಕೆ ಕಾರಣವಾಗಿದೆ.

ಯು.ಎಸ್. ನಿಯಂತ್ರಣದಲ್ಲಿರುವ ➚

ಕವಿಗಳು, ಸಾಹಿತಿಗಳು ಕಾಲದ ದನಿಯಾಗುವುದು ಅತಿಮುಖ್ಯ..... ಪುಟ 16 ರಿಂದ

ತಟ್ಟುತ್ತದೆ. ಎಲ್ಲೆಡೆ ಇಂದು ಬಂಧನದ ಭೀತಿ ಎದುರಾಗಿದೆ. ಇಂತಹವುಗಳ ನಡುವೆ ಕವಿಗೋಷ್ಠಿಗಳು ಸಾಗುತ್ತಿವೆ ಎಂದರು.

ಕವಿಗೋಷ್ಠಿಯ ಉದ್ದೇಶ ಕುರಿತು ನೀಲಾ ಕೆ ಕಲಬುರಗಿ ಇವರು ಮಾತನಾಡಿ, ಮನಸ್ಸಿನ ಮಾತುಗಳಿಗೆ ಸಲಾಂ. ಉತ್ತರ ಕರ್ನಾಟಕ ಭಾಗದಲ್ಲಿ ಕನ್ನಡ ಇಲ್ಲ ಎಂಬ ವಾದದ ಸಂದರ್ಭದಲ್ಲಿ 150 ವರ್ಷಗಳ ಹಿಂದೆ ಚೆನ್ನೂರ್ ಲಾಲ್ ಸಾಬ್ ಅವರು ಕವಿತೆಯನ್ನು ರಚಿಸಿದರು. ಅದರಲ್ಲಿ ಸ್ಥಳೀಯ ಎಲ್ಲಾ ಭಾಷೆಗಳ ಮಿಶ್ರಣದಂತೆ ಬೆರೆತು ಜನರ ಭಾಷೆಯನ್ನು ಅಳವಡಿಸಿಕೊಂಡು ಕವಿತೆಗಳನ್ನು ರಚಿಸಿದರು. ನಮ್ಮಲ್ಲಿ ಬಹುತ್ವದ ಪರಂಪರೆ ತುಂಬಾ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಮೊಹಮ್ಮದ್ ರಫೀ ಅವರು, ಸೂಫಿಗಳು, ಗಾಲಿಬ್, ಕಬೀರ್ ನಂಥವರ ಪ್ರೀತಿ ಪದಗಳ ಕವಿತೆಗಳು ಜನತೆದ ದನಿಯಾಗಿದ್ದವು. ಅವರು ಕವನಗಳನ್ನು ಜನರ ಬಳಿಗೆ ಕೊಂಡ್ಯುತ್ತಿದ್ದರು. ಅದು ಇಂದಿಗೂ ಜನ ಮಾನಸದ ಸೂಪ್ತ ಸ್ಥಿತಿಯಲ್ಲಿ ಉಳಿದುಕೊಂಡು ಬಂದಿದೆ ಎಂದರು.

ದೇಶವೆಂದರೆ, ಕೋಟೆ ಕೊತ್ತಲುಗಳು, ಕಲ್ಲು ಮಣ್ಣುಗಳಲ್ಲ. ದೇಶವೆಂದರೆ ಮನುಷ್ಯರು. ಅನ್ನ, ಅರಿವು ಬೇರ್ಪಡಿಸುವ ಕೆಲಸ ನಡೆದುಕೊಂಡು ಬರುತ್ತಿವೆ. ಭಾಷೆ ಅನ್ನೋದು ಬದುಕು. ಭಾಷಾ ಯಜಮಾನಿಕ ಸಂಸ್ಕೃತಿಯ ಸೊಕ್ಕು ಅಡಗಿಸಬೇಕಾಗಿದೆ. ಬಸವಣ್ಣ ಅವರಿಂದ ಹಿಡಿದು, ಮೊನ್ನೆ ಮೊನ್ನೆಯ ವರೆಗೆ ಎಂ.ಎಂ. ಕಲಬುರ್ಗಿ, ಗೌರಿ ಲಂಕೇಶ್, ಗೋವಿಂದ ಪನ್ಸಾರೆ, ನರೇಂದ್ರ ದಾಬೋಲ್ಕರ್ ಅಂಥವರನ್ನು ಕೊಲ್ಲುವ ಮೂಲಕ ಜನಪರ ಚಿಂತನೆಗಳನ್ನು ನಾಶಪಡಿಸುವ ಕಾರ್ಯ ನಡೆದುಕೊಂಡು ಬರುತ್ತಿದೆ. ಆದರೂ ಜನರ ಭಾವೈಕ್ಯತೆಯ ಮನಸ್ಸುಗಳಿಗೆ ಸ್ಪಂದಿಸುವ ಅಸಂಖ್ಯಾ ಕವಿಗಳು ಇಂದಿಗೂ ಇದ್ದಾರೆ ಎಂದರು.

ಸಾಹಿತ್ಯದಲ್ಲಿ ನಾವು ಶತ್ರು ಮತ್ತು ಮಿತ್ರರನ್ನು ಗುರುತಿಸಬೇಕಾದ ಅವಶ್ಯಕತೆ ಇದೆ. ಅದರಲ್ಲೂ ಸಜ್ಜನರ ಮಹಾ ಮೌನ ಅತ್ಯಂತ ಅಪಾಯಕಾರಿಯಾದದ್ದು. ಶ್ರಮದಿಂದ ಮೂಡಿಬರುವ ಕಾವ್ಯದ ಮಹತ್ವ ಜನರ ಬದುಕಿನೊಂದಿಗೆ ಬೆರೆತುಕೊಂಡಿದೆ. ವಾಜಪೇಯಿ ಅವರನ್ನು ನಾನು ಕವಿಎಂದು ಸ್ವೀಕರಿಸುವುದಿಲ್ಲ. ಕಾವ್ಯಗಳಲ್ಲಿ ಜನತೆಯ ಶತ್ರುಗಳನ್ನು ಗುರುತಿಸುವ ಶಕ್ತಿ ಅಡಗಿದೆ ಎಂದು ತಿಳಿಸಿದರು.

ಫೈಜ್ ಅಹಮ್ಮದ್ ಫೈಜ್ ಅವರ ವಾಕ್ಯಗಳನ್ನು ಉಲ್ಲೇಖಿಸಿದ ಕೆ. ನೀಲಾ ಅವರು, ಸಾಂಸ್ಕೃತಿಕ ಯಜಮಾನಿಕೆಯ ವಿರುದ್ಧ ಚಳುವಳಿಯ ರೂಪದಲ್ಲಿ ಕಾವ್ಯಗಳು ಬೀದಿಗೆ ಬರುತ್ತವೆ. ಜನತೆಯೊಂದಿಗೆ ಬೆರೆಯಬೇಕಾಗಿದೆ ಎಂದು ಹೇಳಿ, ಕೊರೊನಾ ಸಾಂಕ್ರಾಮಿಕ ರೋಗ ಹರಡುವಿಕೆ ಭೀಕರತೆಯ ಸಂದರ್ಭದಲ್ಲಿ ಗಂಗಾ ನದಿಯಲ್ಲಿ ಸಾಗಿಬಂದ ಹೆಣಗಳ ರಾಜಿಯ ಕುರಿತಂತೆ ರಚಿಸಿದ ಕವಿತೆಯೊಂದನ್ನು ಓದಿದರು.



ಕವಿಗೋಷ್ಠಿಯಲ್ಲಿ..

ಎಲ್.ಎನ್. ಮುಕುಂದರಾಜ್ 'ತಾತಾ ಬಿನ್ನಹ' ಎಂಬ ಕನ್ನಡ ಕವಿತೆಯನ್ನು, ಶಾಯಿಸ್ತಾ ಯೂಸಫ್ ಉರ್ದು ಕವಿತೆಯನ್ನು, ಎಸ್.ಕೆ. ಸಲೀಮಾ 'ಶ್ರಮವೇ ಸೌಂದರ್ಯಂ' ಎಂಬ ತೆಲುಗು ಕವಿತೆಯನ್ನು, ಸುಷ್ಮಾ ಶಂಕರ್ 'ನರಬಲಿ ಜೊತೆ ನಾರಿ ಬಲಿ' ಎಂಬ ಮಲೆಯಾಳಂ ಕವಿತೆಯನ್ನು, ಮಮತಾ ಜಿ ಸಾಗರ 'ಕಾಡು' ಎಂಬ ಕನ್ನಡ ಕವಿತೆಯನ್ನು, ವಿಲ್ಸನ್ ಕಟೀಲ್ 'ಕಿತ್ತಳೆ ಹಣ್ಣಿನ ಅಚ್ಚೆದಿನ್' ಎಂಬ ಕನ್ನಡ ಕವಿತೆಯನ್ನು, ಮಲರ್ ವಿಳಿ 'ಇರಿಂಬಡಿಕ್ಕಿಂ', 'ರೋಜಾ ಕಳ್' ಎಂಬ ತಮಿಳು ಕವಿತೆಯನ್ನು, ಸರ್ದಾರ್ ವಹಾಬ್ ದಾನಿಶ್ ಉರ್ದು ಕವಿತೆಯನ್ನು, ಮಂಜುಳಾ ಹುಲಿಕುಂಟೆ 'ಬನ್ನಿ ಎದುರುಗೊಳ್ಳಿ' ಎಂಬ ಕನ್ನಡ ಕವಿತೆಯನ್ನು, ದಾದಾ ಪೀರ್ ಜೈಮನ್ 'ನಾವಾಗ', 'ಕಲ್ಲಂಗಡಿ ಪರಮಾತ್ಮ' ಎಂಬ ಕನ್ನಡ ಕವಿತೆಯನ್ನು, ಚಾಂದ್ ಪಾಷಾ 'ನಾ ಅಮ್ಮಕು ಎವರು ಚಪ್ಪಕಂಡಿ' ಎಂಬ ತೆಲುಗು ಕವಿತೆಯನ್ನು, ಚೈತ್ರ ಶಿವಯೋಗಿಮಠ 'ನಮ್ಮ ಅರಸ', 'ಬಣ್ಣ' ಎಂಬ ಕನ್ನಡ ಕವಿತೆಯನ್ನು ವಾಚನ ಮಾಡಿದರು.

ಕವಿಗೋಷ್ಠಿ ನಂತರ ಸಮುದಾಯ ಬೆಂಗಳೂರು ಪ್ರಸ್ತು ಪಡಿಸಿದ, ಶಶಿಧರ ಭಾರಿಘಾಟ್ ನಿರ್ದೇಶನದ 'ತಂದೆ ಇವರನ್ನ ಕ್ಷಮಿಸಿ' ಬೀದಿ ನಾಟಕವನ್ನು ಪ್ರಸ್ತುಪಡಿಸಿದರು.

ಬಹುಭಾಷಾ ಕವಿಗೋಷ್ಠಿ ಕಾರ್ಯಕ್ರಮದ ಆರಂಭದಲ್ಲಿ ಕೆ.ಎಸ್. ಲಕ್ಷ್ಮಿ ಮತ್ತು ಈ ಬಸವರಾಜು ಸಂಗಡಿಗರು ಕ್ರಾಂತಿ ಗೀತೆಗಳನ್ನು ಪ್ರಸ್ತುತಪಡಿಸಿದರು. ಸಿಐಟಿಯು ಮುಖಂಡ ಲಿಂಗರಾಜು ಅವರು ಸ್ವಾಗತಕೋರಿದರು. ಕಾರ್ಯಕ್ರಮದ ನಿರೂಪಣೆಯನ್ನು ಕವಿಯತ್ರಿ ದೀಪದ ಮಲ್ಲಿ ಅವರು ನಡೆಸಿಕೊಟ್ಟರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಂಶ ಅವರು ಸಿಐಟಿಯು ಅಖಿಲ ಭಾರತ ಸಮ್ಮೇಳನದ ತಯಾರಿ ಹಾಗೂ ಅದರ ಅಂಗವಾಗಿ ರಾಜ್ಯದ ವಿವಿಧ ಕಡೆಗಳಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಸಮಿತಿ ಸಂಚಾಲಕರಾದ ಗುಂಡಣ್ಣ ಚಿಕ್ಕಮಗಳೂರು, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಖಜಾಂಚಿ, ಪಿ.ಕೆ. ಪರಮೇಶ್ವರ್, ರಾಜ್ಯ ಪದಾಧಿಕಾರಿಗಳಾದ ಕೆ. ಪ್ರಕಾಶ್, ಬಿ ಎನ್ ಮಂಜುನಾಥ್, ಪಿ ಮುನಿರಾಜು, ಮಹಿಳಾ ಸಂಘಟನೆ ರಾಜ್ಯ ಮುಖಂಡರಾದ ಗೌರಮ್ಮ, ಕೆ.ಎಸ್. ವಿಮಲ, ಸಮುದಾಯ ಕರ್ನಾಟಕ ಸಂಘಟನೆಯ ಟಿ ಸುರೇಂದ್ರರಾವ್ ಹಾಗೂ ಸಿಐಟಿಯು ಸಂಘಟನೆಯ ರಾಜ್ಯ ಜಿಲ್ಲಾ ಮುಖಂಡರು, ಕಾರ್ಯಕರ್ತರು, ಮಹಿಳಾ, ವಿದ್ಯಾರ್ಥಿ ಸಂಘಟನೆಯ ಮುಖಂಡರು ಭಾಗವಹಿಸಿದ್ದರು.

Society for Worldwide Interbank Financial Telecommunications (SWIFT) ಗೆ ಬದಲಿಯಾಗಿ, ರಶ್ಯ 2014 ರಲ್ಲಿ ಸಿದ್ಧಪಡಿಸಿದ System for Transfer of Financial Messages (SPFS), 2015ರಲ್ಲಿ ಚೀನಾ ಸಿದ್ಧಪಡಿಸಿದ Cross-Border Interbank Payment System (CIPS) ಗಳಲ್ಲಿ ಹಲವು ದೇಶಗಳ ಕೇಂದ್ರೀಯ ಬ್ಯಾಂಕುಗಳು ಆಸಕ್ತಿ ವಹಿಸಿವೆ. ಯು.ಎಸ್. ನ ವೀಸಾ/ಮಾಸ್ಟರ್ ಕಾರ್ಡ್ ಗೆ ಬದಲಿಯಾಗಿ ಚೀನಾದ ಯೂನಿಯನ್–ಪೇ, ಅಲಿಪೇ, ವಿಚಾಟ್–ಪೇ ರಶ್ಯಾದ ಮಿರ್ ಬಳಸಲಾಗುತ್ತಿವೆ. ಯುರೋಪಿನಲ್ಲೂ ಜರ್ಮನಿ, ಯು.ಕೆ, ಫ್ರಾನ್ಸ್ INSTEX ಎಂಬ ಡಾಲರ್ ವ್ಯವಸ್ಥೆ ಬೈ–ಪಾಸ್ ಮಾಡುವ ವ್ಯವಸ್ಥೆ ಜಾರಿಗೆ ತಂದಿವೆ. ಮಲೇಶ್ಯಾ, ಇಂಡೋನೇಶ್ಯಾ, ಸಿಂಗಾಪುರ್, ಥಾಯ್ಲೆಂಡ್ ತಮ್ಮ ಸ್ಥಳೀಯ ಕರೆನ್ಸಿಯಲ್ಲೇ ತಮ್ಮ ದೇಶಗಳ ನಡುವೆ ವ್ಯವಹರಿಸುವ ವ್ಯವಸ್ಥೆಯನ್ನು ಜಾರಿಗೆ ತಂದಿವೆ.

ಚೀನಾ ಸೇರಿದಂತೆ ಆರು ದೇಶಗಳ ಕೇಂದ್ರೀಯ ಬ್ಯಾಂಕ್ ಗಳು ಡಿಜಿಟಲ್ ಕರೆನ್ಸಿಯ ಪ್ರಯೋಗ ಆರಂಭಿಸಿವೆ. ಚೀನಾದ ಡಿಜಿಟಲ್ ಯುವನ್ ಸಾಕಷ್ಟು ಪ್ರಗತಿ ಸಾಧಿಸಿದ್ದು, ವಿಶೇಷವಾಗಿ ಡಿಜಿಟಲ್ ಸಿಲ್ಕ್ ರೋಡ್ ನ ಬಿ.ಆರ್.ಐ ಪ್ರಾಜೆಕ್ಟುಗಳಲ್ಲಿ ಅಂತರ್ರಾಷ್ಟ್ರೀಯ ಕರೆನ್ಸಿಯಾಗಿಯೂ ಹೊಮ್ಮುತ್ತಿದೆ. ಇತ್ತೀಚೆಗೆ ಬ್ರೆಜಿಲ್ ಹೊಸ ಹಣಕಾಸು ಮಂತ್ರಿ ಲ್ಯಾಟಿನ್ ಅಮೆರಿಕದ ಆದ್ಯಂತ ಬಳಸುವ 'ಸುರ್' (ಸ್ಪಾನಿಷ್ ನಲ್ಲಿ 'ದಕ್ಷಿಣ' ವೆಂಬ ಅರ್ಥ)– ಎಂಬ ಡಿಜಿಟಲ್ ಕರೆನ್ಸಿ ಅಭಿವೃದ್ಧಿ ಪಡಿಸುವುದಾಗಿ ಘೋಷಿಸಿದ್ದಾರೆ.

ಈ ವರೆಗಿನ ಅ–ಡಾಲರೀಕರಣ

ಇವೆಲ್ಲ ಅ–ಡಾಲರೀಕರಣದತ್ತ ಟ್ರೆಂಡ್ ಗಳು ಮಾತ್ರವಲ್ಲ. ನಿಜವಾಗಿಯೂ ಅ–ಡಾಲರೀಕರಣ ಸಾಕಷ್ಟು ದೂರ ಸಾಗಿಬಂದಿದೆ. ಐ.ಎಂ.ಎಫ್ ವರದಿಯ ಪ್ರಕಾರ ಕೇಂದ್ರೀಯ ಬ್ಯಾಂಕುಗಳ ಡಾಲರುಗಳಲ್ಲಿ ಇಟ್ಟ ಮೀಸಲು ನಿಧಿಯ ಪ್ರಮಾಣ 1999ರಲ್ಲಿ ಶೇ.71 ರಿಂದ 2021ರಲ್ಲಿ ಶೇ. 59ಕ್ಕೆ ಇಳಿದಿದೆ. ಹಣಕಾಸೇತರ ಕಂಪನಿಗಳು ಬಾಂಡ್ ಮಾರಾಟದಲ್ಲಿ ಡಾಲರ್ ನಲ್ಲಿದ್ದ ಬಾಂಡ್ ಗಳ ಪ್ರಮಾಣ ಮೊದಲ ಬಾರಿಗೆ ಶೇ.37ಕ್ಕೆ ಕುಸಿದಿದೆ. ಕಳೆದ ದಶಕದಲ್ಲಿ ಯಾವುದೇ ವರ್ಷದಲ್ಲಿ ಅದು ಶೇ. 50ಕ್ಕಿಂತ ಯಾವಾಗಲೂ ಹೆಚ್ಚಿರುತ್ತಿತ್ತು. 57 ಕೇಂದ್ರೀಯ ಬ್ಯಾಂಕುಗಳ ಸಮೀಕ್ಷೆಯಲ್ಲಿ ಶೇ.80 ತಮ್ಮ ಮೀಸಲು ನಿಧಿಯನ್ನು ಚಿನ್ನಕ್ಕೆ ವರ್ಗಾಯಿಸುವುದಾಗಿ ಹೇಳಿವೆ. ಶೇ.42 ರಷ್ಟು ಡಾಲರಿನ ಪ್ರಮಾಣವನ್ನು ಇಳಿಸುವುದಾಗಿ ತಿಳಿಸಿವೆ. ಪಾಶ್ಚಿಮಾತ್ಯ ಕಾರ್ಪೊರೆಟ್ ಹಿರಿಯ ಅಧಿಕಾರಿಗಳ ನಡುವೆ ನಡೆಸಿದ ಇನ್ನೊಂದು ಸಮೀಕ್ಷೆಯಲ್ಲಿ ಶೇ.37 ರಷ್ಟು ಮಾತ್ರ ಯು.ಎಸ್–ಯುರೋಕೂಟದ ಆರ್ಥಿಕ ದಿಗ್ಬಂಧನದ ನೀತಿಗಳಿಂದಾಗಿ ಅ–ಡಾಲರೀಕರಣದ ಆತಂಕವಿಲ್ಲವೆದಿದ್ದಾರೆ. ಉಳಿದವರು ಆತಂಕವಿದೆ ಅಥವಾ ಭವಿಷ್ಯ ಹೇಳಲಾಗದು ಎಂದಿದ್ದಾರೆ.

ಅದುವರೆಗೆ ಇದ್ದ ಚಿನ್ನದ ನಿಧಿ ಮೇಲೆ ಆಧಾರಿತ ಹಣಕಾಸು ವ್ಯವಸ್ಥೆ ಹೋಗಿ, ಡಾಲರ್ ನ ಏಕಚಕ್ರಾಧಿಪತ್ಯವನ್ನು 1973ರಲ್ಲಿ ಸ್ಥಾಪಿಸಿ ಸರಿಯಾಗಿ 50 ವರ್ಷಗಳಾಗಿವೆ. ಅದನ್ನು ಸೌದಿ ಅರೇಬಿಯದ ಜತೆ ಒಪ್ಪಂದದ ನಂತರ ಜಾರಿಗೆ ಬಂದ 'ಪೆಟ್ರೊ–ಡಾಲರ್' ವ್ಯವಸ್ಥೆ ಸ್ಥಾಪಿಸಿತ್ತು. ಈ ವರ್ಷ ಯು.ಎಸ್ ಸೌದಿ ಅರೇಬಿಯ ನಡುವೆ ಆರ್ಥಿಕ–ಮಿಲಿಟರಿ–ರಾಜಕೀಯ ಭಿನ್ನಾಭಿಪ್ರಾಯ ದಿಂದಾಗಿ ಆ ವ್ಯವಸ್ಥೆಗೆ ಕುತ್ತು ಬರಲಿದೆ. ಈ ಲೇಖನದ ಆರಂಭದಲ್ಲಿ ನಿರೂಪಿಸಿದ ಸೌದಿ ಅರೇಬಿಯ ಚೀನಾದ ಜತೆ ವ್ಯೂಹಾತ್ಮಕ ಒಪ್ಪಂದ, ಅದಕ್ಕೆ ಯು.ಎಸ್ ನ ಗಾಬರಿಯ ಪ್ರತಿಕ್ರಿಯೆ ಅ–ಡಾಲರೀಕರಣದ ಪ್ರಕ್ರಿಯೆ ಬಿರುಸನ್ನು ಪಡೆದಿದೆಯೆಂಬುದನ್ನು ಸ್ಪಷ್ಟಪಡಿಸಿದೆ.

ಭಾರತದಲ್ಲಿ ಕೈಗಾರಿಕಾ ಜಡತೆ ಏಕೆ..... ಪುಟ 13 ರಿಂದ

ಉದಾಹರಣೆಗೆ, ಅಕ್ಟೋಬರ್ 2022ರಲ್ಲಿ ಗೃಹ ಬಾಳಿಕೆಯ ವಸ್ತುಗಳ ಸೂಚ್ಯಂಕವು 2011–12ರ ಸರಾಸರಿಗಿಂತಲೂ ಕೆಳ ಮಟ್ಟದಲ್ಲಿದ್ದ ಮತ್ತು ಬಂಡವಾಳ ಸರಕುಗಳ ಸೂಚ್ಯಂಕವು ಸ್ವಲ್ಪ ಹೆಚ್ಚಿನ ಮಟ್ಟದಲ್ಲಿದ್ದ ಅಂಶವು ಗಮನಾರ್ಹವಾಗಿದೆ. ಈ ಎರಡೂ ಸಂದರ್ಭಗಳಲ್ಲೂ ಕೆಳ ಮಟ್ಟದ ಬೆಳವಣಿಗೆಗೆ ಸ್ಪಷ್ಟವಾದ ಕಾರಣವೆಂದರೆ ಆಮದುಗಳೇ. ಬಂಡವಾಳ ಸರಕುಗಳು ಮತ್ತು ಗೃಹ ಬಾಳಿಕೆ ವಸ್ತುಗಳ ವಲಯದಲ್ಲಿ ಆಮದುಗಳು ದೇಶೀಯ ಉತ್ಪಾದನೆಯ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿವೆ.

ಕೈಗಾರಿಕಾ ಜಡತೆಯ ಬೇರುಗಳು ನವ–ಉದಾರವಾದಿ ಆಡಳಿತದ ಸ್ವರೂಪದಲ್ಲೇ ಇವೆ. ಕೊಳ್ಳುವ ಶಕ್ತಿಯ ಕೊರತೆಯನ್ನು ದುಡಿಯುವ ಜನರು ಹೆಚ್ಚು ಅನುಭವಿಸುತ್ತಾರೆ. ಆದರೆ ವೃದ್ಧಿಯಾಗುತ್ತಿರುವ ಕೊಳ್ಳುವ ಶಕ್ತಿಯನ್ನು ಹೊಂದಿರುವ ಮಿಗುತಾಯ ಗಳಿಕೆಯ ಮಂದಿಯು ತಮ್ಮ ವರಮಾನದ ಒಂದು ಭಾಗವನ್ನು ಮಾತ್ರ ಖರ್ಚು ಮಾಡುತ್ತಾರೆ ಮತ್ತು ಅಂತಹ ಖರ್ಚುಗಳಲ್ಲೂ ಒಂದು ಅಧಿಕ ಪ್ರಮಾಣವನ್ನು ಆಮದು ಸರಕುಗಳ ಮೇಲೆ ಮಾಡುತ್ತಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಆದಾಯ ಹಂಚಿಕೆಯಲ್ಲಿ ಹೆಚ್ಚುತ್ತಿರುವ ಅಸಮತೆಯಿಂದ ಉಂಟಾಗುವ ಅತಿಯಾದ ಉತ್ಪಾದನೆಯ ಪ್ರವೃತ್ತಿಯ ಜೊತೆಗೆ, ಮಿಗುತಾಯ ಗಳಿಸುವ ಮಂದಿಯು ಗೃಹ ಬಾಳಿಕೆ ವಸ್ತುಗಳನ್ನು ಮತ್ತು ಬಂಡವಾಳ ಸರಕುಗಳನ್ನು ಆಮದು ಮಾಡಿಕೊಳ್ಳುವ ಪ್ರವೃತ್ತಿಯು ಹೆಚ್ಚುತ್ತಿರುವುದರಿಂದ ಉಂಟಾಗುವ ಒಂದು ಹೆಚ್ಚುವರಿ ಅಂಶವೂ ಸೇರಿಕೊಳ್ಳುತ್ತದೆ.

ಹೆಚ್ಚುತ್ತಿರುವ ಕೈಗಾರಿಕಾ ಜಡತೆಯ ಪ್ರವೃತ್ತಿಯನ್ನು ಹತ್ತಿಕ್ಕಲು ಈಗಿರುವ ಸರ್ಕಾರವು ಕೈಗೊಂಡಿದೆ ಎಂದು ಹೇಳಬಹುದಾದ ಮಧ್ಯಪ್ರವೇಶದ ಒಂದೇ ಒಂದು ಕ್ರಮವೆಂದರೆ, ಮೂಲಸೌಕರ್ಯ ಯೋಜನೆಗಳನ್ನು ಕಾರ್ಯಗತಗೊಳಿಸುವ ಖಾಸಗಿ ಸಂಸ್ಥೆಗಳಿಗೆ ಬೇಕಾಗುವ ಸಾಲಗಳನ್ನು, ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಏರ್ಪಡಿಸುವ ಮೂಲಕ ಹೆಚ್ಚಿನ ಖಾಸಗಿ ವೆಚ್ಚವನ್ನು ಉತ್ತೇಜಿಸಿದೆ ಎಂಬುದು. ಈ ಕ್ರಮವು ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಬಯಕೆಯಿಂದ ಪ್ರೇರಿತವಾಗಿದೆಯೇ ಅಥವಾ ಸಂಪೂರ್ಣವಾಗಿ ಬಂಟ ಬಂಡವಾಳಶಾಹಿಗಳಿಂದ (ಸ್ಪಷ್ಟ ರೀತಿಯಲ್ಲಿ) ಪ್ರೇರಿತವಾಗಿದೆಯೇ ಎಂಬುದು ಸಂದೇಹಾಸ್ಪದವೇ ಸರಿ. ಈ ಮಧ್ಯಪ್ರವೇಶವು ಶೋಚನೀಯ ಎನಿಸುವಷ್ಟು ಅಸಮರ್ಪಕವಾಗಿದೆ, ಆದರೆ ಇದು ಸಾರ್ವಜನಿಕ ವಲಯದ ಬ್ಯಾಂಕುಗಳು ಹೊಂದಿರುವ ಹೆಚ್ಚಿನ ಅಪಾಯಗಳಿಗೆ ಈಡಾಗುವ ಸ್ವತ್ತುಗಳ ಪ್ರಮಾಣವನ್ನು ಅಪಾರವಾಗಿ ಹೆಚ್ಚಿಸಿದೆ. ಮೂಲಸೌಕರ್ಯ ಯೋಜನೆಗಳು ಫಲ ನೀಡಲು ಒಂದು ಅಸಾಧಾರಣ ದೀರ್ಘಾವದಿ ಬೇಕಾಗುತ್ತದೆ ಮತ್ತು ಲಾಭವೂ ಇಲ್ಲದ ಮತ್ತು ನಷ್ಟವೂ ಇಲ್ಲದ ಸಮಸ್ಥಿತಿಯನ್ನು ತಲುಪಲು ಕೂಡ ಬಹಳ ಸಮಯ ತೆಗೆದುಕೊಳ್ಳುತ್ತವೆ. ಆದ್ದರಿಂದ ಈ ಮೂಲಸೌಕರ್ಯ ಯೋಜನೆಗಳಿಗೆ ದೀರ್ಘಾವಧಿಯ ಸಾಲಗಳನ್ನು ಒದಗಿಸುವ ಜವಾಬ್ದಾರಿಯನ್ನು ವಿಶೇಷ ಪರಿಣಿತಿ ಹೊಂದಿದ ಹಣಕಾಸು ಸಂಸ್ಥೆಗಳು ನಿರ್ವಹಿಸಬೇಕಾಗುತ್ತದೆ. ಆದರೆ, ಸಾರ್ವಜನಿಕರ ಠೇವಣಿಗಳ ಮೂಲಕ ತಮ್ಮ ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಮೂಲಸೌಕರ್ಯಗಳಿಗಾಗಿ ಹಣ ಒದಗಿಸುವ ಜವಾಬ್ದಾರಿಯನ್ನು ಹೊರಿಸುವ ಮೂಲಕ, ಮೋದಿ ಸರ್ಕಾರವು ಬ್ಯಾಂಕುಗಳನ್ನು ಗಂಭೀರ ಆರ್ಥಿಕ ಒತ್ತಡಗಳಿಗೆ ಸಿಲುಕಿಸಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE January 2-8, 2023 Price: Rs. 10/- Date of Publication: 30 December 2022 RNI No. KARKAN /2006/17926 Posted on 04-01-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ಕವಿಗಳು, ಸಾಹಿತಿಗಳು ಕಾಲದ ದನಿಯಾಗುವುದು ಅತಿಮುಖ್ಯ: ಪ್ರೊ. ಬರಗೂರು ರಾಮಚಂದ್ರಪ್ಪ

ವರದಿ: ವಿನೋದ ಶ್ರೀರಾಮಪುರ

ಸಿಐಟಿಯು ಸಂಘಟನೆಯ ಅಖಿಲ ಭಾರತ ಸಮ್ಮೇಳನ ಜನವರಿಯಲ್ಲಿ ಬೆಂಗಳೂರಿನಲ್ಲಿ ನಡೆಯಲಿದೆ. ಇದರ ಅಂಗವಾಗಿ ಬಹುಭಾಷ ಕವಿಗೋಷ್ಠಿಯನ್ನು 2022ರ ಡಿಸೆಂಬರ್ 24ರಂದು ಬಸವನಗುಡಿ ನ್ಯಾಷನಲ್ ಕಾಲೇಜು, ಹೆಚ್.ಎನ್. ಮಲ್ಟಿ ಮೀಡಿಯಾ ಸಭಾಂಗಣದಲ್ಲಿ ಜರುಗಿತು.

ಚಿಂತಕರನ್ನು ಕೊಲ್ಲಬಹುದು ಚಿಂತನೆಯನ್ನು ಕೊಲ್ಲಲು ಸಾಧ್ಯವಿಲ್ಲ. ಯಾಕೆಂದರೆ ಕವಿಗಳು ಇದ್ದಾರಲ್ಲ. ದೇಹ ಮತ್ತು ಮನಸ್ಸು ಎರಡು ಒಳಗೊಂಡಿದೆ. ದೇಹವನ್ನು ಬಂಧನದಲ್ಲಿ ಇಡಬಹುದು, ಆದರೆ ಮನಸ್ಸು ಸದಾ ಚಲಿಸುತ್ತಿಲೇ ಇರುತ್ತದೆ. ಅಂತಹದೊಂದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಣೆ ಮಾಡಿಕೊಂಡು ಬಂದತಂಥಹ. ಅಭಿವ್ಯಕ್ತಿಸಿದಂತಹ ಒಂದು ಪರಂಪರೆಗೆ ರೂಪಕವಾಗುವ ರೀತಿಯಲ್ಲಿ ಇಂದಿನ ಕವಿಗೋಷ್ಟಿ ನಡೆದಿದೆ ಎಂದು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ ಸಾಹಿತಿ ಹಾಗೂ ಚಲನಚಿತ್ರ ನಿರ್ದೇಶಕರಾದ ಬರಗೂರು ರಾಮಚಂದ್ರಪ್ಪ ಅವರು ತಿಳಿಸಿದರು.


ನಾಡೋಜ ಬರಗೂರು

ಕವಿಗೋಷ್ಟಿಗೆ ಬೇರೆ ಬೇರೆ ಆಯಾಮಗಳು ಇರುತ್ತವೆ. ಆದರೆ ಇಂದಿನ ಈ ಕವಿಗೋಷ್ಟಿ ಅತ್ಯಂತ ಮುಖ್ಯವಾದದ್ದು. ಇವತ್ತು ಅಪವ್ಯಾಖ್ಯಾನ ಕಾಲದಲ್ಲಿ ಬದುಕುತಿದ್ದೇವೆ. ಕವಿಗಳನ್ನು ಬಂಧನದಲ್ಲಿ ಇಡುತ್ತಾರೆ ಎನ್ನುತ್ತಾರಲ್ಲ. ಇಲ್ಲಿ ಇರುವವರಿಗೆ ಯಾರಿಗಾದರೂ ಭಯವಿತ್ತೆ. ಕವಿಗಳು ಅನುವಾದ ಓದಬೇಡಿ ಎಂದರೂ ಓದಿದರು. ಒಂದು ಕವಿತೆ ಓದಿ ಎಂದರೆ ಎರಡೆರಡು ಓದಿದರು. ಅಂದರೆ ಇದನ್ನೇ ಸ್ವಾತಂತ್ರ್ಯ ಅಂತ ಕರೆಯುವುದು ನಾವು. ನೀವು ಏನೇ ನಿಯಂತ್ರಣವನ್ನು ಮಾಡಬಹುದು. ಅದರೆ ಅದನ್ನು ಮೀರಿ ನಮಗೆ ಏನೋ ಒಂದು ಇದೆ ನಮ್ಮೊಳಗಡೆ ಅಡಗಿರುವುದನ್ನು ನಾವು ಹೇಳೆ ಹೇಳುತ್ತೇವೆ ಅನ್ನುವುದು ಇದೆಯಲ್ಲಾ ಅದೂ ನಿಜವಾದ ಸ್ವಾತಂತ್ರ್ಯವೇ ಆಗಿದೆ ಎಂದರು.

ಸಂವಿಧಾನದಲ್ಲಿ ಕೆಲವುಗಳಿಗೆ ನಿರ್ಬಂಧಗಳು ಇರುತ್ತದೆ. ಅವುಗಳನ್ನು ಮೀರುವ ಶಕ್ತಿ ಎಲ್ಲರಲ್ಲೂ ಒಂದಲ್ಲಾ ಒಂದ ಸಂದರ್ಭದಲ್ಲಿ ಎದುರಾಗುತ್ತದೆ. ಹಾಗೆ ಕವಿಗಳಿಗೆ ಹೇರಿದರೂ ಸಹ ಅದನ್ನು ಮೀರಿ ತಮ್ಮೊಳಗಿನ ತಹತಹವನ್ನು ಹಂಚಿಕೊಂಡಿದ್ದಾರೆ. ಅದನ್ನು ಕೇಳಿರುವ ನಿಮಗೂ ಅವೆಲ್ಲವೂ ಮನ್ನಣೆಗೆ ಒಳಗಾಗಿದ್ದು ಎಂದು ನಾನು ಭಾವಿಸುವೇನು. ಇಂದಿನ ಸಂದರ್ಭ ಎಲ್ಲವನ್ನೂ ಅಪವ್ಯಾಖ್ಯಾನ ಮಾಡಲಾಗುತ್ತಿದೆ. ಸ್ವಾತಂತ್ರ್ಯವನ್ನು ಅಪವ್ಯಾಖ್ಯಾನ ಮಾಡಲಾಗುತ್ತಿದೆ. ಧರ್ಮವನ್ನು, ಸಂಸ್ಕೃತಿಯನ್ನು, ಸತ್ಯವನ್ನು ಅಪವ್ಯಾಖ್ಯಾನ ಮಾಡಲಾಗುತ್ತಿದೆ. ಪ್ರಜಾಪ್ರಭುತ್ವ ಅಪವ್ಯಾಖ್ಯಾನಕ್ಕೆ ಒಳಗಾಗಿದೆ ಎಂದು ಬರಗೂರು ರಾಮಚಂದ್ರಪ್ಪ ತಿಳಿಸಿದರು.


ಕೆ. ನೀಲಾ

ಧರ್ಮದ ಹೆಸರಿನಲ್ಲಿ ಅಧರ್ಮವನ್ನು ಹೇರುವ, ಸಂಸ್ಕೃತಿಯ ಹೆಸರಿನಲ್ಲಿ ಹುಸಿ ಸಂಸ್ಕೃತಿಯನ್ನು ಹೇರುವ, ಬಹುಸಂಸ್ಕೃತಿಯನ್ನು ನಿರಾಕರಿಸುವ ಏಕ ಸಂಸ್ಕೃತಿಯ ವೀರರನ್ನು ನಾವು ಈಗ ಕಾಣುತ್ತಿದ್ದೇವೆ. ಸುಳ್ಳಿಗೆ ಸಾಕ್ಷಿ ಬೇಕಾಗಿಲ್ಲ ಇವತ್ತು. ಸತ್ಯಕ್ಕೆ ಸಾಕ್ಷಿ ಕೇಳುವ ಕಾಲದಲ್ಲಿದ್ದೇವೆ ಇಂದು. ಅವಿವೇಕವನ್ನು ವಿವೇಕ ಎಂದು ಹೇಳಲಾಗುತ್ತಿದೆ. ಹೀಗೆ ಎಲ್ಲವೂ ಪಲ್ಲಟ್ಟಗೊಂಡಂತಹ ಭಾರತದಲ್ಲಿ ನಾವು ಬದುಕುತ್ತಿದ್ದೇವೆ. 70–80ರ ದಶಕದಲ್ಲಿ ನಾವು ಸಮಾನತೆಯ ಕುರಿತು ಮಾತನಾಡುತ್ತಿದ್ದೇವು. ಇಂದಿನ ಅನೇಕ ಕವಿತೆಗಳು ಆಗಿನ 70–80ರ ದಶಕದಲ್ಲಿ ರೂಪುಗೊಳ್ಳುತ್ತಿದ್ದಂತ ಆಶಯಗಳು ಒಳಗೊಂಡ ಕವಿತೆಗಳಾಗಿಯೇ ಇವೆ. ಆಗ ಸಮಾನತೆಯ ಕುರಿತು ಮಾತನಾಡುತ್ತಿದ್ದ ನಾವು ಈಗ ಮಾತನಾಡುತ್ತಿರುವುದು ಸಹಿಷ್ಣುತೆಯನ್ನು. ಅಂತಹ ಪಲ್ಲಟವಾಗಿರುವ ದೇಶದಲ್ಲಿ ನಾವು ಇದ್ದೇವೆ.

ಆದರೆ, ನಿಜವಾದ ಸಹಿಷ್ಣುತೆ ಇದೆಯಲ್ಲ. ಆ ಸಹಿಷ್ಣತೆಯ ಆಶಯದ ಒಳಗೆ ಸಮಾನತೆ ಇದೆ. ಸಮಾನತೆಯಿಲ್ಲದೆ ಸಹಿಷ್ಣುತೆಯನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಖಲೀಲ್ ಇಬ್ರಾನ್ ಹೀಗೆ ಹೇಳಿದ್ದ– ನನ್ನ ತಾಯಿ ಒಂದೂ ಕವಿತೆಯನ್ನು ಬರೆಯಲಿಲ್ಲ. ನೂರಾರು ಕವಿತೆಗಳ ಒಳಗೆ ಬದುಕಿದ್ದಾಳೆ? ಎಂದು. ಆ ನೂರಾರು ಕವಿತೆಗಳಲ್ಲಿ ಬದುಕುವ ಮನಸ್ಥಿತಿ ಇದೇ ಅಲ್ಲ ಅದು ತಾಯಿತನದ ಮನಸ್ಥಿತಿ. ನಿಜವಾದ ತಾಯಿತನ ಅಂದರೆ ಅದು ನಿಜವಾದ ಸಮಾನತೆ ಮತ್ತು ಸಹಿಷ್ಣುತೆಯಾಗಿದೆ.

ಮಾಕ್ಸಿಂ ಗಾರ್ಕಿ ಹೀಗೆ ಹೇಳಿದ್ದಾರೆ, ಒಬ್ಬ ಕವಿಯ ಮತ್ತು ಒಬ್ಬ ಸಾಹಿತಿಯ ಜವಾಬ್ದಾರಿ ಏನು ಅಂದರೆ, ಅದು ನಿಜವಾದ ಅರ್ಥದಲ್ಲಿ ಕಾಲದ ದನಿಯಾಗಿರಬೇಕು. ಯಾವುದೇ ಸಾಹಿತ್ಯ ಹೆಚ್ಚುಕಾಲ ಬಾಳೋದು ಯಾವಾಗ ಅದನ್ನು ನೋಡಬೇಕು. ಅದು ಕಾಲಕ್ಕೆ ಕಾಲಲ್ಲದ ದನಿಯಾಗಿರಬೇಕು. ಕಲಾಕಾರರು ಇದಾರಲ್ಲ ಅವರು ಕಾಲದ ದನಿ. ಕಾಲದ ದನಿ ಎಂದರೆ, ತನ್ನ ಧರ್ಮಕ್ಕೆ, ತನ್ನ ವರ್ಗಕ್ಕೆ, ತನ್ನ ಕಿವಿಗೆ ಹಾಗೂ ತನ್ನ ಹೃದಯಕ್ಕೆ ಧಕ್ಕೆ ತರುವ ಯಾವುದೇ ವಿಷಯಗಳಿಗೆ ಯಾರು ದನಿಯಾಗುತ್ತಾರೋ ಅದನ್ನು ಕಾಲದ ದನಿ ಎನ್ನುತ್ತೇವೆ. ಕಾಲದ ದನಿಯಾಗಿ ಅಕ್ಷರ ರೂಪವನ್ನು ಕೊಡುತ್ತಾರಲ್ಲಾ ಅದು ನಿಜವಾದ ಕಾಲದ ದನಿ. ಅಕ್ಷರ ರೂಪವನ್ನು ಕೊಡಲಾಗದಿದ್ದರೂ ಕಾಲದ ದನಿಯಾಗಬೇಕಾಗಿರುವ ಅಗತ್ಯ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು.

ಇಂದು ಕೇಳುವ ಸ್ಥಿತಿಗಳಿಲ್ಲ. ಮಾತನಾಡುವ ನಾಲಿಗೆಗಳಿವೆ. ಪ್ರಜಾಪ್ರಭುತ್ವ ಯಾವತ್ತು ಜಾಗರೂಕರಾಗಿರುತ್ತದೆ. ಅಂದರೆ, ಕಿವಿಗಳು ಜಾಗರೂಕರಾಗಿದ್ದಾಗ ಪ್ರಜಾಪ್ರಭುತ್ವ ಜಾಗರೂಕರಾಗಿರುತ್ತದೆ. ಆದರೆ ನಾಲಗೆಗಳು ಜಾಗರೂಕವಾಗಿದೆ ಇಂದು, ಅದು ಎಂಥಹುದ್ದು ಅಂದರೆ ನಾಗರ ನಾಲಿಗೆಗಳು. ಇಂಥಹ ಕಾಲದಲ್ಲಿ ನಾವು ಇದ್ದೇವೆ.

ಇಂದಿನ ಸ್ಥಿತಿ ಹೇಗಾಗಿದೆ ಎಂದರೆ, ಕೇವಲ ಆರ್ಥಿಕ ಭ್ರಷ್ಟಾಚಾರ ನಡೆಯುತ್ತಿಲ್ಲ. ಭಾಷಿಕ ಭ್ರಷ್ಟಾಚಾರ, ಸಾಂಸ್ಕೃತಿಕ ಭ್ರಷ್ಟಾಚಾರ ನಡೆಯುತ್ತಿದೆ. ಭಾಷಿಕ ಭ್ರಷ್ಟಾಚಾರ ಇಂದು ದ್ವೇಷ ಭಾಷಣದಲ್ಲಿ ವಿಜೃಂಭಿಸುತ್ತಿವೆ. ಧರ್ಮಗಳ ಧರ್ಮಗಳ ನಡುವೆ ದ್ವೇಷನ್ನು ತಂದು ಇಡುವುದು. ಭಾಷೆಯನ್ನು ಹೇಗೆ ಬಳಸಬೇಕೋ ಹಾಗೆ ಬಳಸದೇ ಆ ಭಾಷೆಯ ಮೇಲೆ ಅತ್ಯಾಚಾರ ನಡೆಸಲಾಗುತ್ತಿದೆ. ಇಂಥಹ ಸಂದರ್ಭದಲ್ಲಿ ಕಾಲದ ದನಿಯಾಗಬೇಕು ಅಂದರೆ, ಕಾಲದ ಕಾಲ ಬುಡದಲ್ಲಿ ಕುಳಿತುಕೊಳ್ಳುವುದಲ್ಲ. ಕಾಲದ ಜೊತೆಯಲ್ಲಿದ್ದು, ಕಾಲವನ್ನು ಯಾರು ಮೀರುತ್ತಾರೆ ಅವಾಗ ಅವನು ಒಳ್ಳೆ ಕವಿಯಾಗಬಲ್ಲ.

ಡಿ.ಡಿ. ಕೋಸಾಂಬಿ ಅವರು, ಇತಿಹಾಸಕಾರರ ಕರ್ತವ್ಯದ ಬಗ್ಗೆ ಬರೆದಿದ್ದಾರೆ. ಅದು ಅತ್ಯಂತ ಮಹತ್ವಪೂರ್ಣವಾದದ್ದು, ಅದು ಕೇವಲ ಇತಿಹಾಸಕಾರರಿಗೆ ಮಾತ್ರವಲ್ಲ, ಎಲ್ಲರಿಗೂ ಅನ್ವಯಿಸುತ್ತದೆ. ಇಂದು ನಮಗೆ ಬೇಕಾಗಿರುವ ಗುಣ ಪ್ರತಿನಾಯಕತ್ವದ ಗುಣ ಬೇಕಾಗುತ್ತದೆ. ಸಮಾಜ ನಾಯಕ, ಕವಿ ಪ್ರತಿನಾಯಕ ಅಥವಾ ಪ್ರತಿನಾಯಕಿಯಾಗಿರುತ್ತಾರೆ. ಅಂದರೆ, ಕಾಲಕ್ಕೆ ಎದುರಾಗಿರುತ್ತಾ ಇರಬೇಕಾಗುತ್ತದೆ. ಅಂತಹದೊಂದು ಪ್ರತಿನಾಯಕತ್ವದ ಗುಣವನ್ನು ಕನ್ನಡ ಸಾಹಿತ್ಯ ಬಹಳ ಹಿಂದಿನಿಂದ ಕೊಡುತ್ತಾ ಬಂದಿದೆ. ಜನರ ಮದ್ಯೆ ನಾವು ಹೋಗಲು ಬೇಕಾಗಿರುವ ಪರಂಪರೆಯ ಪ್ರಜ್ಞೆ, ಅಂದರೆ, ಸಮಾನತೆ ಮತ್ತು ಸಹಿಷ್ಣುತೆ ಆಶಯ ಮುಖಾಮುಖಿಯಾಗಿ ಹೋದರೆ ಜನರನ್ನು ಹೆಚ್ಚು ತಲುಪಲು ಸಾಧ್ಯ.

ಹಿಂದೆ ನಾವು ಸ್ವಾಮೀಜಿಗಳ ಜೊತೆ ಕೂರುತ್ತಿರಲಿಲ್ಲ. ಇಂದು ನಾವು ಅವರೊಂದಿಗೆ ಕೂತುಕೊಳ್ಳುವ ಸ್ಥಿತಿ ಬಂದಿದೆ. ಅಷ್ಟೇ ಅಲ್ಲ ಅವರು, ಎಂದೆರಡು ಒಳ್ಳೆ ವಿಚಾರ ತಿಳಿಸಿದರೆ ಸಾಕು ಎನ್ನುವ ಸ್ಥಿತಿಗೆ ಬಂದಿದ್ದೇವೆ. ಅವರಿಗೆ ನಾವು ಪ್ರಗತಿಪರ ಸ್ವಾಮೀಜಿಗಳು ಎಂಬ ಹಣೆಪಟ್ಟಿಯನ್ನು ಕೊಡುತ್ತೇವೆ. ಇದು ಈಗ ಆಗಿರುವ ಪಲ್ಲಟ. ನಾವು ಎದುರುಸುವ ಸವಾಲು 70–80ರ ದಶಕಕ್ಕಿಂತ ಭಿನ್ನವಾದ ಸವಾಲನ್ನು ಎದುರಿಸುತ್ತಿದ್ದೇವೆ.

ಇಂದು ಪ್ರಜಾಪ್ರಭುತ್ವ ಅಪಾಯದಲ್ಲಿದೆ. ಪ್ರಜಾಪ್ರಭುತ್ವ ಎಂದರೆ ಚುನಾವಣೆ ಎಂದುಕೊಂಡಿದ್ದೇವೆ. ಪಾರ್ಲಿಮೆಂಟ್ ಸಹ ಚುನಾವಣಾ ಭಾಷಣ ಮಾಡುವ ವೇದಿಕೆಗಳಾಗಿ ಮಾರ್ಪಟ್ಟಿದೆ. ಅದಕ್ಕೆ ಇದ್ದ ಘನತೆಯೂ ಇಲ್ಲದಿರುವ ಸ್ಥಿತಿಯಲ್ಲಿ ನಾವು ಇದ್ದೇವೆ. ನಿಜವಾದ ಅರ್ಥದ ಸಂವಿಧಾನ ಬದ್ಧವಾಗಿರುವ ಸಂಸದೀಯತೆಯ ವೇದಿಕೆಗಳು ಸಹ ದುರುಪಯೋಗ ಆಗುತ್ತಿರುವ ಸಂದರ್ಭದ ಒಳಗೆ ನಾವು ಇದ್ದೇವೆ. ಅದರಲ್ಲೂ ಮುಖ್ಯವಾಗಿ ರಾಜಕೀಯ ನಾಯಕತ್ವವನ್ನು ಆರ್ಥಿಕ ನಾಯಕತ್ವ ಮತ್ತು ಧಾರ್ಮಿಕ ನಾಯಕತ್ವ ನಿಯಂತ್ರಿಸುತ್ತಿದೆ. ಹಾಗಾಗಿಯೇ ಇಂದು ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಹೇಳುತ್ತಿರುವುದು. ನಮ್ಮಲ್ಲೂ ಸಾಂಸ್ಕೃತಿಕ ರಾಜಕಾರಣವಿದೆ. ಅದು ಬೇರೆ ವಿಷಯ. ಆದರೆ ನಮಗೊಂದು ಜವಾಬ್ದಾರಿ ಇದೆ ಎಂಬುದನ್ನು ಸದಾ ಅರ್ಥೈಸಿಕೊಂಡಿರಬೇಕು.

ಕಾಲದ ದನಿಯಾಗುವುದು ಎಂದರೆ, ಕರುಳಿನ ದನಿಯಾಗುವುದು ಎಂದು ಅರ್ಥ. ಇಡೀ ಇಂದಿನ ಗೋಷ್ಠಿಯೇ ಬಹುತ್ವದ ಗೋಷ್ಠಿಯಾಗಿದೆ. ಮಾತನಾಡುತ್ತಿರುವ ಸಂದರ್ಭದಲ್ಲಿಯೂ ನಮ್ಮ ಮುಂದೆ ದೊಡ್ಡ ಸವಾಲುಗಳು ಇರುವುದನ್ನು ನಾವು ನೋಡುತ್ತಿದ್ದೇವೆ. ಅಂಥಹ ದನಿಯನ್ನು ಅಷ್ಟು ಸುಲಭವಾಗಿ ಅಡಗಿಸುವುದಕ್ಕೆ ಸಾಧ್ಯವಿಲ್ಲ ಎಂಬ ಆಶಾವಾದಿ ನಾನು. ನಾವೆಲ್ಲರೂ ಒಬ್ಬ ನಿಜವಾದ ಮನುಷ್ಯನಾಗಿರಬೇಕು.

ನೋಮ್ ಚಾಮ್ಸ್ಕಿ ಹೇಳುತ್ತಾರೆ. ಜನರಿಗೆ ಸತ್ಯವನ್ನು ಹೇಳಲು ನಾವು ಸಾಹಿತಿಗಳು ಮಧ್ಯವರ್ತಿಗಳಾಗಬೇಕು ಎಂದು ಹೇಳುತ್ತಾರೆ. ನಾವು ನಿಜವಾದ ಅರ್ಥದಲ್ಲಿ ಮದ್ಯವರ್ತಿಗಳು ಅಂದರೆ, ಸತ್ಯವನ್ನು ಜನರಿಗೆ ತಿಳಿಸುವ ಮದ್ಯವರ್ತಿಗಳು. ಅದು ಮರ್ಯಾದಸ್ಥ ಮನುಷ್ಯನ ಕೆಲಸವಾಗಿದೆ. ನೋಮ್ ಚಾಮ್ಸ್ಕಿ ಹೇಳಿದಂತೆ ನಾವೆಲ್ಲಾ ಮರ್ಯಾದಸ್ಥ ಮನುಷ್ಯರಾಗೋಣ ಎಂದು ಬರೂಗೂರು ರಾಮಚಂದ್ರಪ್ಪ ತಿಳಿಸಿದರು.

ಬಹುಭಾಷ ಕವಿಗೋಷ್ಠಿಯ ಸಂಚಾಲಕರಾದ ಕೆ. ಷರೀಫಾ ಅವರು ಆಶಯ ನುಡಿಗಳನ್ನು ಆಡಿದರು. ಸಿಐಟಿಯು ಅಖಿಲ ಭಾರತ ಸಮ್ಮೇಳನ ಅಂಗವಾಗಿ ಬಹುಭಾಷಾ ಕವಿಗೋಷ್ಠಿಯನ್ನು ಹಮ್ಮಿಕೊಂಡಿದ್ದೇವೆ. ಸಮ್ಮೇಳನಕ್ಕೆ ಹೆಚ್ಚಿನ ಪ್ರಚಾರ ಸಿಗುತ್ತಿದೆ. ಬೇರೆ ಬೇರೆ ರಾಜ್ಯಗಳಿಂದ ಬಂದವರು ಜನರ ದನಿಯಾಗಿ ಉತ್ಸಾಹದಿಂದ ಭಾಗಿಯಾಗುತ್ತಿದ್ದಾರೆ. ರೈತರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿ, ಯುವಜನರು, ಆದಿವಾಸಿಗಳು, ದಲಿತರು, ದಮನಿತರು, ಮಾನವ ಹಕ್ಕುಗಳಿಗಾಗಿ ಕಾವ್ಯ ಸಾಗುತ್ತಿದೆ. ಇಂತಹ ಹಕ್ಕುಗಳಿಗಾಗಿ ಉತ್ತರ ಹುಡುಕುವ ಕೆಲಸವಾಗುತ್ತಿದೆ ಎಂದರು.

ಇಂದಿನ ಸಮಾಜದಲ್ಲಿ ಜನರಿಗೆ ತಮ್ಮ ವೈರಿ ಯಾರೆಂದು ಗುರುತಿಸಲಾರದಷ್ಟು ಮುಗ್ಧರೇನಲ್ಲ. ತಮ್ಮ ವೈರಿಯನ್ನು ಗುರುತಿಸುತ್ತಿದ್ದಾರೆ. ಆ ವೈರಿಯನ್ನು ಗುರುತಿಸುವುದು, ಮತ್ತು ಆ ಜನ ವಿರೋಧಿ ನಡೆಗಳನ್ನು ಎದುರಿಸುವುದು ನಮ್ಮ ಕರ್ತವ್ಯವಾಗಿದೆ. ನಾವು ಸುಮ್ಮನಿದ್ದರೆ ಆಗೋದಿಲ್ಲ. ಜನವಿರೋಧಿ ನಡೆಗಳನ್ನು ನೀವು ವಿರೋಧಿಸುತ್ತಿದ್ದರೆ ಜನರು ಅವುಗಳು ಒಂದಷ್ಟು ಪುಟ 15 ಕ್ಕೆ


ಕೆ. ಷರೀಫಾ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**